ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 14 | ಸಂಚಿಕೆ 1 | ಡಿಸೆಂಬರ್ 30, 2019 – ಜನವರಿ 5, 2020. | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com



8 ಜನವರಿ 2020 ಮತ್ತೊಂದು ಸಾರ್ವತ್ರಿಕ ಮುಷ್ಕರ ಏಕೆ?



ಸರ್ವಾಧಿಕಾರಿಶಾಹಿಗೆ ಎದುರಾಗಿ ಪ್ರತಿಭಟನೆ ಪ್ರತಿರೋಧದ ಉಬ್ಬರ



ಸಿಪಿಐ ಕಛೇರಿಗೆ ಬೆಂಕಿ ಇಟ್ಟವರ ವಿರುದ್ಧ ಪ್ರತಿಭಟನೆ



ಪೌರತ್ವ ತಿದ್ದುಪಡಿ ಕಾಯ್ದೆ ಕುರಿತು ದುಂಡು ಮೇಜಿನ ಸಭೆ



ನಿರ್ದಯಿ ಮನಸ್ಥಿತಿಯ ಬಿಜೆಪಿಗರು

ಎಡಪಕ್ಷಗಳ ಪ್ರತಿಭಟನಾ ಸಪ್ತಾಹ–ಜನವರಿ 1 ರಿಂದ 7

ಸಿಎಎ/ಎನ್‌ಆರ್‌ಸಿ/ಎನ್‌ಪಿ ಆರ್ ಮೂಲಕ ಸಂವಿಧಾನದ ಮೇಲೆ ಪ್ರಹಾರ ಮತ್ತು ಜನಗಳ ಮೇಲೆ ಹೆಚ್ಚುತ್ತಿರುವ ಸಂಕಟಗಳ ವಿರುದ್ಧ ಹಾಗೂ ಕಾರ್ಮಿಕರ ಸಾರ್ವತ್ರಿಕ ಮುಷ್ಕರ ಮತ್ತು ರೈತರ ಗ್ರಾಮೀಣ ಬಂದ್‌ಗೆ ಬೆಂಬಲ

ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಕರೆ ಕೊಟ್ಟಿರುವ ಜನವರಿ 8ರ ಅಖಿಲ ಭಾರತ ಸಾರ್ವತ್ರಿಕ ಮುಷ್ಕರಕ್ಕೆ ಮತ್ತು ರೈತ ಮತ್ತು ಕೃಷಿ ಕಾರ್ಮಿಕರ ಸಂಘಟನೆಗಳು ಹಾಗೂ ನಾಗರಿಕ ಸಂಘಟನೆಗಳು ಕರೆ ನೀಡಿರುವ ಅದೇ ದಿನದ 'ಗ್ರಾಮೀಣ ಬಂದ್ ಗೆ ಬೆಂಬಲವಾಗಿ ಜನವರಿ 1 ರಿಂದ 7 ರ ವರೆಗೆ ಸೌಹಾರ್ದ ಪ್ರಚಾರಾಂದೋಲನ ನಡೆಸುವುದಾಗಿ ಐದು ಎಡಪಕ್ಷಗಳು ಹೇಳಿವೆ.

ಸಿಎಎ/ಎನ್‌ಆರ್‌ಸಿ/ಎನ್‌ಆರ್‌ಪಿ ಮೂಲಕ ಭಾರತೀಯ ಸಂವಿಧಾನದ ಮೇಲೆ ನಡೆಸಿರುವ ಪ್ರಹಾರದ ವಿರುದ್ಧ ಎಲ್ಲಾ ರಾಜ್ಯಗಳಲ್ಲಿ ಬಲಿಷ್ಟ ಪ್ರತಿಭಟನೆಗಳನ್ನು ಸಂಘಟಿಸಬೇಕು ಎಂದೂ ಎಡಪಕ್ಷಗಳು ತಮ್ಮ ಘಟಕಗಳಿಗೆ ಕರೆ ನೀಡಿವೆ.

ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ, ನಿರ್ದಿಷ್ಟವಾಗಿ ಉತ್ತರಪ್ರದೇಶ, ಕರ್ನಾಟಕ, ಗುಜರಾತ್, ತ್ರಿಪುರದಲ್ಲಿ ಹಾಗೂ ಪೋಲಿಸ್ ಇಲಾಖೆ ನೇರವಾಗಿ ಕೇಂದ್ರ ಗೃಹ ಮಂತ್ರಾಲಯದ ಅಡಿಯಲ್ಲಿರುವ ದಿಲ್ಲಿಯಲ್ಲಿ ನಾಗರಿಕರ ಶಾಂತಿಯುತ ಪ್ರತಿಭಟನೆಗಳ ಮೇಲೆ ಪೋಲಿಸರು ನಡೆಸಿರುವ ಅತ್ಯಾಚಾರಗಳನ್ನು ಈ ಎಡಪಕ್ಷಗಳು ಖಂಡಿಸಿವೆ. ಈ ಪ್ರತಿಭಟನೆಗಳು ಶಾಂತಿಯುತವಾಗಿ ಮುಂದುವರೆಯುತ್ತವೆ ಎಂದೂ ಸಿಪಿಐ(ಎಂ), ಸಿಪಿಐ, ಸಿಪಿಐ(ಎಂಎಲ್)–ಲಿಬರೇಶನ್, ಆರ್ ಎಸ್ ಪಿ ಹಾಗೂ ಫಾರ್ವರ್ಡ್ ಬ್ಲಾಕ್ ಪ್ರಧಾನ ಕಾರ್ಯದರ್ಶಿಗಳು ನೀಡಿರುವ ಜಂಟಿ ಹೇಳಿಕೆ ತಿಳಿಸಿದೆ.

ಎನ್‌ಆರ್‌ಸಿಯನ್ನು ವಿರೋಧಿಸುವ ಮುಖ್ಯಮಂತ್ರಿಗಳು ಎನ್‌ಪಿಆರ್ ನ್ನು ತಮ್ಮ ರಾಜ್ಯಗಳಲ್ಲಿ ನಿಲ್ಲಿಸಬೇಕು–ಸಿಪಿಐ(ಎಂ) ಪೊಲಿಟ್‌ಬ್ಯುರೊ ವಿನಂತಿ

"ಎನ್‌ಆರ್‌ಸಿ ಬಗ್ಗೆ ಮೋದಿಯವರ ಅಸತ್ಯಗಳೇನೇ ಇರಲಿ, ಎನ್‌ಪಿಆರ್ ಅದಕ್ಕೆ ಬುನಾದಿಯೆಂಬುದು ಸ್ಪಷ್ಟ"

ಕೇಂದ್ರ ಸಂಪುಟ ಡಿಸೆಂಬರ್ 24ರಂದು ರಾಷ್ಟ್ರೀಯ ಜನಸಂಖ್ಯಾ ನೋಂದಣಿ(ಎನ್‌ಪಿಆರ್)ಯನ್ನು ಸಮಕಾಲಿಕಗೊಳಿಸಲು ನಿರ್ಧರಿಸಿದೆ. ಅದಕ್ಕಾಗಿ 8500 ಕೋಟಿ ರೂ. ಹಣಕಾಸು ಮಂಜೂರು ಮಾಡಿದೆ.

ಪ್ರಧಾನ ಮಂತ್ರಿ ಮೋದಿಯವರ ಅಸತ್ಯಗಳೇನೇ ಇರಲಿ, ಈ ಎನ್‌ಪಿಆರ್ ಎಂಬುದು ಎನ್‌ಆರ್‌ಸಿಗೆ ಬುನಾದಿ ಹಾಕುತ್ತದೆ ಎಂಬುದು ಸ್ಪಷ್ಟ. ಎನ್‌ಆರ್‌ಸಿಯನ್ನು ವಿರೋಧಿಸಿರುವ ಕೇರಳ ಮತ್ತು ಪಶ್ಚಿಮ ಬಂಗಾಲದ ಮುಖ್ಯಮಂತ್ರಿಗಳು ಈಗಾಗಲೇ ತಮ್ಮ ರಾಜ್ಯಗಳಲ್ಲಿ ಎನ್‌ಪಿಆರ್ ನಡೆಸದಿರಲು ನಿರ್ಧರಿಸಿದ್ದಾರೆ.

ಇವರೂ ಸೇರಿದಂತೆ ಕನಿಷ್ಟ 12 ಮುಖ್ಯಮಂತ್ರಿಗಳು ತಮ್ಮ ರಾಜ್ಯಗಳಲ್ಲಿ ಎನ್‌ಆರ್‌ಸಿಯನ್ನು ಜಾರಿಗೊಳಿಸುವುದಿಲ್ಲ ಎಂದು ಪ್ರಕಟಿಸಿದ್ದಾರೆ. ಈ ಎಲ್ಲ ಮುಖ್ಯಮಂತ್ರಿಗಳನ್ನು, ತಂತಮ್ಮ ರಾಜ್ಯಗಳಲ್ಲಿ ಕೂಡ ಎನ್‌ಪಿಆರ್ ಅನುಷ್ಠಾನವನ್ನು ಕೈಬಿಡುವಂತೆ ಖಾತ್ರಿಪಡಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ವಿನಂತಿಸಿಕೊಂಡಿದೆ.

ಈ ಅನುಷ್ಠಾನದಲ್ಲಿ ಜನಗಳು 21 ಹೆಚ್ಚಿನ ಅಂಶಗಳಲ್ಲಿ ಮಾಹಿತಿಗಳನ್ನು ನೀಡುವ ಜೊತೆಗೆ ತಮ್ಮ ತಂದೆ–ತಾಯಿಯರ ಜನ್ಮದಿನಾಂಕಗಳನ್ನು ಘೋಷಿಸಬೇಕು. ಈಗ ಸಂಗ್ರಹಿಸಲಾಗುವ ಮಾಹಿತಿಗಳಲ್ಲಿ ಬಹಳಷ್ಟನ್ನು 2010ರ ಈ ಹಿಂದಿನ ಎನ್‌ಪಿಆರ್ ಯೋಜನೆಯಲ್ಲಿ ಸಂಗ್ರಹಿಸಿರಲಿಲ್ಲ

ವಾಜಪೇಯಿ ಸರಕಾರ ಪೌರತ್ವ ಕಾಯ್ದೆ, 1955ನ್ನು ತಿದ್ದುಪಡಿ ಮಾಡಿ, ಡಿಸೆಂಬರ್ 10, 2003ರಂದು ಅಧಿಸೂಚಿಸಿದ ನಿಯಮಗಳ ಪ್ರಕಾರ ರಾಷ್ಟ್ರೀಯ ಜನಸಂಖ್ಯಾ ನೋಂದಣಿಯ ಆಧಾರದಲ್ಲಿ ರಾಷ್ಟ್ರೀಯ ಪೌರತ್ವ ನೋಂದಣಿಯನ್ನು ತಯಾರಿಸಲಾಗುತ್ತದೆ. ಆದ್ದರಿಂದ ಈ ಎನ್‌ಆರ್‌ಸಿಯನ್ನು ಜಾರಿಗೊಳಿಸುವ ಕವಾಯತಿನಲ್ಲಿ ಎನ್‌ಪಿಆರ್ ಮೊದಲ ಘಟ್ಟ ಎಂಬುದು ಸ್ಪಷ್ಟ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಇವೆರಡರ ನಡುವಿನ ಸಂಬಂಧವನ್ನು, ಜುಲೈ 23, 2014 ರಂದೇ, ಮೋದಿ ಸರಕಾರ ಅಧಿಕಾರ ವಹಿಸಿಕೊಂಡ ಕೆಲವೇ ದಿನಗಳಲ್ಲಿ ರಾಜ್ಯಸಭೆಯಲ್ಲಿ ಒಂದು ಪ್ರಶ್ನೆಗೆ (ಚಿಹ್ನಿತ ಪ್ರಶ್ನೆ ನಂ. 229) ನೀಡಿದ ಉತ್ತರದಲ್ಲಿ ಗೃಹ ವ್ಯವಹಾರಗಳ ಖಾತೆಯ ರಾಜ್ಯಮಂತ್ರಿಗಳು ಸ್ಪಷ್ಟಗೊಳಿಸಿದ್ದರು. "ಎನ್‌ಪಿಆರ್ ಯೋಜನೆಯ ಅಡಿಯಲ್ಲಿ ಸಂಗ್ರಹಿಸುವ ಮಾಹಿತಿಗಳ ಆಧಾರದಲ್ಲಿ ದೇಶದಲ್ಲಿನ ಎಲ್ಲ ವ್ಯಕ್ತಿಗಳ ಪೌರತ್ವದ ಸ್ಥಾನಮಾನವನ್ನು ತಾಳೆ ಹಾಕಿ ಭಾರತೀಯ ಪೌರರ ರಾಷ್ಟ್ರೀಯ ನೋಂದಣಿ(ಎನ್‌ಆರ್‌ಐಸಿ)ಯನ್ನು ನಿರ್ಮಿಸಲು ಸರಕಾರ ನಿರ್ಧರಿಸಿದೆ" ಎಂದು ಈ ಉತ್ತರದಲ್ಲಿ ಹೇಳಲಾಗಿತ್ತು.

ಆದ್ದರಿಂದ ಪ್ರಧಾನ ಮಂತ್ರಿಗಳ ಅಸತ್ಯಗಳೇನೇ ಇರಲಿ, ಈ ಎನ್‌ಪಿಆರ್ ಎಂಬುದು ಎನ್‌ಆರ್‌ಸಿಗೆ ಬುನಾದಿ ಹಾಕುತ್ತದೆ ಎಂಬುದು ಸ್ಪಷ್ಟ ಎಂದಿರುವ ಸಿಪಿಐ(ಎಂ) ಪೊಲಿಟ್‌ಬುರೊ ಈ ಹಿನ್ನೆಲೆಯಲ್ಲಿ ಎನ್‌ಆರ್‌ಸಿಯನ್ನು ವಿರೋಧಿರುವ ಇತರ ಎಲ್ಲ ಮುಖ್ಯಮಂತ್ರಿಗಳೂ ಎನ್‌ಪಿಆರ್ ಪ್ರಕ್ರಿಯೆಯನ್ನು ಕೈಬಿಡುವ ಕ್ರಮಗಳನ್ನು ಕೈಗೊಳ್ಳಬೇಕು ಎಂದು ವಿನಂತಿಸಿ ಕೊಂಡಿದೆ.

ಶಾಂತಿಯುತ ಪ್ರತಿಭಟನಾಕಾರರೊಂದಿಗೆ ಪೋಲಿಸರ ಪಾಶವೀ ವರ್ತನೆ

– ಸಿಪಿಐ(ಎಂ) ಪೊಲಿಟ್ ಬ್ಯುರೊ ಬಲವಾದ ಖಂಡನೆ

"ಎಪ್ಪತ್ತರ ದಶಕದಲ್ಲಿ ಸರ್ವಾಧಿಕಾರಶಾಹಿಯನ್ನು ಸೋಲಿಸಿದ್ದಾರೆ, ಈಗಲೂ ಸೋಲಿಸುತ್ತಾರೆ"

ಉತ್ತರ ಪ್ರದೇಶ ಮತ್ತು ಇತರ ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಮತ್ತು ಪೋಲಿಸ್ ಇಲಾಖೆ ನೇರವಾಗಿ ಕೇಂದ್ರದ ಹತೋಟಿಯಲ್ಲಿರುವ ದಿಲ್ಲಿಯಲ್ಲಿ ಶಾಂತಿಯುತ ಪ್ರತಿಭಟನೆಗಳ ಪಾಶವೀ ದಮನ ನಡೆಸಲಾಗುತ್ತಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಬಲವಾಗಿ ಖಂಡಿಸಿದೆ.

ಉತ್ತರಪ್ರದೇಶದಲ್ಲಿ ಸಾವುಗಳ ಸಂಖ್ಯೆ 18 ತಲುಪಿದೆ, ಮತ್ತು ಇದು ಹೆಚ್ಚುತ್ತಲೇ ಇದೆ. ಬನಾರಸ್ ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯರೂ ಸೇರಿದಂತೆ 69 ಎಡ ಪಕ್ಷಗಳ ಕಾರ್ಯಕರ್ತರನ್ನು ಬಂಧಿಸಲಾಗಿದೆ. ಇವರಲ್ಲಿ 56 ಮಂದಿ ಈಗಲೂ ಪೋಲೀಸ್ ಕಸ್ಟಡಿಯಲ್ಲಿದ್ದಾರೆ. ಕೋರ್ಟ್‌ಗಳಿಗೆ ರಜಾ ಇರುವುದರಿಂದ ಜನವರಿ 2020ರ ವರೆಗೂ ಇವರಿಗೆ ಯಾವುದೇ ಕಾನೂನು ನೆರವು ಸಾಧ್ಯವಿಲ್ಲವಾಗಿದೆ. ಮಾಧ್ಯಮಗಳಲ್ಲೂ ಈ ದಾಳಿಗಳ ಪಾಶವೀಯತೆ ವರದಿಯಾಗಿದೆ. ವಿವಿಧ ಇಲೆಕ್ಟ್ರಾನಿಕ್ ತಾಣಗಳು ಪೋಲೀಸ್ ಬರ್ಬರತೆಯ ವೀಡಿಯೋಗಳನ್ನು ಬಿಡುಗಡೆ ಮಾಡಿವೆ.

ಉತ್ತರಪ್ರದೇಶ ಸರಕಾರ ಸತ್ತವರಿಗೆ ಮತ್ತು ಗಾಯಗೊಂಡವರಿಗೆ ಪರಿಹಾರವನ್ನು ಘೋಷಿಸುವ ಬದಲು ಮುಖ್ಯಮಂತ್ರಿಗಳು ಸಾರ್ವಜನಿಕ ಆಸ್ತಿಗಳಿಗೆ ಹಾನಿಯ ವೆಚ್ಚವನ್ನು ಪ್ರತಿಭಟನಾಕಾರರಿಂದ ಕಿತ್ತುಕೊಳ್ಳಲಾಗುವುದು ಎಂಬ ಪ್ರಚಾರವನ್ನು ಆರಂಭಿಸಿದ್ದಾರೆ. ವಾಸ್ತವವಾಗಿ ಹಾನಿಯುಂಟು ಮಾಡುತ್ತಿದ್ದವರು ಪೋಲೀಸರು, ಆದರೆ ಪ್ರತಿಭಟನಾಕಾರರ ಮೇಲೆ ಆರೋಪ ಹೊರಿಸಲಾಗುತ್ತಿದೆ ಎಂಬುದನ್ನು ವೀಡಿಯೋ ರಿಕಾರ್ಡಿಂಗ್‌ಗಳು ಸ್ಪಷ್ಟವಾಗಿ ತೋರಿಸುತ್ತಿವೆ. ದಿಲ್ಲಿಯ ಜಾಮಿಯ ಮಿಲಿಯ ವಿಶ್ವವಿದ್ಯಾಲಯದಲ್ಲಿ ಪೋಲೀಸರು ಉಂಟು ಮಾಡಿದ ಹಾನಿ ಮಾಧ್ಯಮಗಳಲ್ಲಿ ವ್ಯಾಪಕವಾಗಿ ವರದಿಯಾಗಿವೆ ಹಾಗೂ ಅವುಗಳ ವೀಡಿಯೋಗಳನ್ನು ತೋರಿಸಲಾಗಿದೆ.

ಉತ್ತರಪ್ರದೇಶದ ಪರಿಸ್ಥಿತಿ ಕೋಮುಧ್ರುವೀಕರಣದ ಹೊಲಸು ತಿರುವು ತೆಗೆದುಕೊಳ್ಳುತ್ತಿದೆ. ಬಿಜೆಪಿ ಇದರ ಮುಂಚೂಣಿಯಲ್ಲಿದೆ. ಬಿಜೆಪಿ ಮುಖಂಡರು, ಸಂವಿಧಾನದ ಅಡಿಯಲ್ಲಿ ಪ್ರತಿಜ್ಞೆ ಕೈಗೊಂಡಿರುವ ಮಂತ್ರಿಗಳೂ ಕೂಡ 'ಗೋಧ್ರಾ ತೆರನ ಸನ್ನಿವೇಶ'ದ ಪುನರಾವರ್ತನೆಯಾಗುತ್ತದೆ ಎಂದು ಎಚ್ಚರಿಕೆಗಳನ್ನು ಕೊಡುತ್ತಿದ್ದಾರೆ. ಇಂತಹ ಪ್ರಚೋದನೆಗಳಿಗೆ ಬಲಿ ಬೀಳಬಾರದು ಎಂದು ಸಿಪಿಐ(ಎಂ) ಜನಗಳಿಗೆ ಮನವಿ ಮಾಡಿಕೊಂಡಿದೆ.

ಉತ್ತರಪ್ರದೇಶ ಸರಕಾರ ಈ

ಪುಟ 12 ಕ್ಕೆ

ಮೋದಿಯವರ ದಿಲ್ಲಿ ಭಾಷಣ ಅಸತ್ಯಗಳ ಮೂಟೆ

ಪುಟ 12

ಜನರಲ್ ಬಿಪಿನ್ ರಾವತ್‌ರ ಅಸಂವಿಧಾನಿಕ ಅಬ್ಬರ

ಪುಟ 12

ಕೂಡಲೇ ಎನ್‌ಆರ್‌ಸಿ/ಎನ್‌ಪಿಆರ್ ಹಿಂತೆಗೆದುಕೊಳ್ಳಬೇಕು

–ಸಿಪಿಐ(ಎಂ) ಪೊಲಿಟ್‌ಬ್ಯುರೊ ಒತ್ತಾಯ

ಭಾರತ ಸರಕಾರ ಕೂಡಲೇ ರಾಷ್ಟ್ರೀಯ ಪೌರರ ನೋಂದಣೀ(ಎನ್‌ಸಿಆರ್) ಮತ್ತು ರಾಷ್ಟ್ರೀಯ ಜನಸಂಖ್ಯಾ ನೋಂದಣಿ(ಎನ್‌ಪಿಆರ್) ಪ್ರಕ್ರಿಯೆಯನ್ನು ಹಿಂಗೆದುಕೊಳ್ಳುವುದಾಗಿ ಪ್ರಕಟಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಈಶಾನ್ಯ ರಾಜ್ಯಗಳು ಮಾತ್ರವಲ್ಲ ಇನ್ನೂ ಹತ್ತು ರಾಜ್ಯಗಳ ಮುಖ್ಯಮಂತ್ರಿಗಳು ತಮ್ಮ ರಾಜ್ಯಗಳಲ್ಲಿ ಎನ್‌ಆರ್‌ಸಿ ಜಾರಿ ಮಾಡುವುದನ್ನು ವಿರೋಧಿಸಿದ್ದಾರೆ. ಇನ್ನೂ ಹಲವರು ಇದೇ ದಾರಿ ಅನುಸರಿಸುವ ಸಾಧ್ಯತೆಗಳಿವೆ. ಇಂತಹ ಸನ್ನಿವೇಶದಲ್ಲಿ ಕೇಂದ್ರ ಸರಕಾರದ ಹಠಮಾರಿತನವನ್ನು ಒಪ್ಪಲು ಸಾಧ್ಯವಿಲ್ಲ ಎಂದು ಸಿಪಿಐ(ಎಂ) ಹೇಳಿದೆ.

ಸಂವಿಧಾನ–ವಿರೋಧಿ ಪೌರತ್ವ ತಿದ್ದುಪಡಿ ಕಾಯ್ದೆಯ ವಿರುದ್ಧ ಮತ್ತು ಅದಕ್ಕೆ ಸಂಬಂಧಿಸಿರುವ ಎನ್‌ಆರ್‌ಸಿ/ಎನ್‌ಪಿಆರ್ ವಿರುದ್ಧ ಪ್ರತಿಭಟನೆಗಳನ್ನು ಶಾಂತಿಯುತವಾಗಿ ಮುಂದುವರೆಸಬೇಕು ಎಂದು ಪೊಲಿಟ್‌ಬ್ಯುರೊ ಜನತೆಗೆ ಮನವಿ ಮಾಡಿಕೊಂಡಿದೆ. ಹಲವೆಡೆಗಳಲ್ಲಿ ಪ್ರತಿಭಟನೆಗಳ ನಿಷೇಧ ಮತ್ತು ಶಾಂತಿಯುತ ಪ್ರತಿಭಟನಾಕಾರರ ಮೇಲೆ ವಿಪರೀತ ಬಲಪ್ರಯೋಗವನ್ನು ಪೊಲಿಟ್‌ಬ್ಯುರೊ ಖಂಡಿಸಿದೆ. ಹಿಂಸಾಚಾರವನ್ನು ಉದ್ರೇಕಿಸುವ ಉದ್ದೇಶ ಹೊಂದಿರುವ ಯಾವುದೇ ತಂತ್ರಗಳಿಗೆ ಜನ ಬಲಿಬೀಳಬಾರದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯರೊ ಜನತೆಗೆ ಮನವಿ ಮಾಡಿಕೊಂಡಿದೆ.

ಎನ್‌ಪಿಆರ್ ಪ್ರಕ್ರಿಯೆಗೆ ಸಂಬಂಧಪಟ್ಟ ಎಲ್ಲ ಕೆಲಸಗಳನ್ನು ನಿಲ್ಲಿಸಲು ಕೇರಳ ಎಲ್‌ಡಿಎಫ್ ಸರಕಾರದ ಆದೇಶ

ಕೇರಳದ ಎಲ್‌ಡಿಎಫ್ ಸರಕಾರ ರಾಷ್ಟ್ರೀಯ ಜನಸಂಖ್ಯಾ ನೋಂದಣಿ ಪಟ್ಟಿಯನ್ನು ಸಮಕಾಲಿಕಗೊಳಿಸುವುಕ್ಕೆ ಸಂಬಂಧಪಟ್ಟ ಎಲ್ಲ ಕೆಲಸಗಳನ್ನು ನಿಲ್ಲಿಸಲು ಡಿಸೆಂಬರ್20 ರಂದು ಆದೇಶ ಹೊರಡಿಸಿದೆ.

ಈ ಹಿಂದೆ ಭಾರತದ ಜನಗಣತಿ ಆಯುಕ್ತ ಮತ್ತು ಪ್ರಧಾನ ನೋಂದಣಿಕಾರರ ಕಚೇರಿಯ 31 ಜುಲೈ 2019ರ ಕೋರಿಕೆಯಂತೆ ರಾಜ್ಯ ಸರಕಾರ ಅದು ಕಳಿಸಿದ ಅಧಿಸೂಚನೆಯನ್ನು ಪ್ರಕಟಿಸಿತ್ತು. ಆದರೆ ಈಗ ಪೌರತ್ವ ತಿದ್ದುಪಡಿ ಕಾಯ್ದೆಯ ನಂತರ ಸಾರ್ವಜನಿಕರನ್ನು ಎನ್‌ಪಿಆರ್ ಸಂಬಂಧಿತ ಚಟುವಟಿಕೆಗಳು ಎನ್‌ಆರ್‌ಸಿಗೆ ದಾರಿ ಮಡಿಕೊಡುತ್ತದೆ ಎಂಬ ಭೀತಿ ಉಂಟಾಗಿರುವ ಹಿನ್ನೆಲೆಯಲ್ಲಿ ರಾಷ್ಟ್ರೀಯ ಜನಸಂಖ್ಯಾ ನೋಮದಣಿ ಪಟ್ಟಿಯನ್ನು ಸಮಕಾಲಿಕಗೊಳಿಸುವುದಕ್ಕೆ ಸಂಬಂಧಪಟ್ಟ ಎಲ್ಲ ಚಟುವಟಿಕೆಗಳಿಗೆ ಕೇರಳ ರಾಜ್ಯದಲ್ಲಿ ತಕ್ಷಣವೇ ತಡೆ ಹಾಕಿರುವುದಾಗಿ ಎಲ್‌ಡಿಎಫ್ ಸರಕಾರದ ಆದೇಶ ಹೇಳಿದೆ.

ಕೇರಳ ಸರಕಾರದ ಈ ಕ್ರಮವನ್ನು ಸ್ವಾಗತಿಸಿರುವ ಸಿಪಿಐ(ಎಂ) ಬೇರೆ ರಾಜ್ಯಗಳೂ ಇಂತಹ ಆದೇಶಗಳನ್ನು ಹೊರಡಿಸಬೇಕೆಂದು ಕೋರಿದೆ.

ಈಶಾನ್ಯ ಭಾರತದ ರಾಜ್ಯಗಳಲ್ಲಂತೂ ಸಿಎಎ/ ಎನ್‌ಆರ್‌ಸಿ/ ಎನ್‌ಪಿಆರ್ ಗೆ ಭಾರೀ ವಿರೋಧ ವ್ಯಕ್ತವಾಗಿತ್ತು. ಕೇರಳ, ಪಶ್ಚಿಮ ಬಂಗಾಲ ಮತ್ತು ಕಾಂಗ್ರೆಸ್‌ನ ಪಂಜಾಬ್ ಮತ್ತಿತರ ರಾಜ್ಯಸರಕಾರಗಳು ತಂತಮ್ಮ ರಾಜ್ಯಗಳಲ್ಲಿ ಎನ್‌ಆರ್‌ಸಿಯನ್ನು ಜಾರಿ ಮಾಡುವದಿಲ್ಲ ಎಂದು ಹೇಳಿದ ಮೇಲೆ, ಸಿಎಬಿ ಪರವಾಗಿ ಸಂಸತ್ತಿನಲ್ಲಿ ಮತನೀಡಿದ ಒಡಿಶಾ ಮತ್ತು ಆಂಧ್ರಪ್ರದೇಶದ ರಾಜ್ಯ ಸರಕಾರಗಳೂ ಎನ್‌ಆರ್‌ಸಿಯನ್ನು ವಿರೋಧಿಸಿವೆ, ಇದಾದ ನಂತರ ಬಿಹಾರದ ಎನ್‌ಡಿಎ ಸರಕಾರದ ಮುಖ್ಯಮಂತ್ರಿಗಳು ಎನ್‌ಆರ್‌ಸಿಯನ್ನು ಜಾರಿ ಮಾಡುವುದಿಲ್ಲ ಎಂದ ಹತ್ತನೇ ಮುಖ್ಯಮಂತ್ರಿ ಮತ್ತು ಎನ್‌ಡಿಎ ಕೂಟದ ಮೊದಲ ಮುಖ್ಯಮಂತ್ರಿಯಾಗಿದ್ದಾರೆ.

ಸಂಪಾದಕೀಯ

ನಿರ್ದಯಿ ಮನಸ್ಥಿತಿಯ ಬಿಜೆಪಿಗರು

ಪೌರತ್ವ ತಿದ್ದುಪಡಿ ಕಾಯ್ದೆಯ ವಿರುದ್ಧ ಡಿಸೆಂಬರ್ 19 ರಂದು ಮಂಗಳೂರು ನಗರದಲ್ಲಿ ಪ್ರತಿಭಟಿಸುತ್ತಿದ್ದವರ ಮೇಲೆ ನಡೆಸಲಾದ ಗೋಲಿಬಾರ್‌ನಲ್ಲಿ ಮೃತರಾದ ಇಬ್ಬರ ಕುಟುಂಬಗಳಿಗೆ ರಾಜ್ಯ ಸರ್ಕಾರದಿಂದ ತಲಾ ರೂ. 10 ಲಕ್ಷ ಪರಿಹಾರ ನೀಡುವುದಾಗಿ ಘೋಷಿಸಿದ್ದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಒಂದೇ ದಿನದಲ್ಲಿ ತನ್ನ ಮಾತನ್ನು ಬದಲಾಯಿಸಿ ನೊಂದ ಕುಟುಂಬಗಳಿಗೆ ಗಾಯದ ಮೇಲೆ ಬರೆ ಎಳೆದಿದ್ದಾರೆ ಹಾಗೂ ಆ ಬಡ ಕುಟುಂಬಗಳಿಗೆ ನ್ಯಾಯ ಸಿಗಬೇಕೆಂದು ಬಯಸಿದ್ದ ನಾಡಿನ ಜನತೆಗೆ ಆಘಾತವನ್ನುಂಟು ಮಾಡಿದ್ದಾರೆ.

ಆ ಎರಡು ನತದೃಷ್ಟ ಕುಟುಂಬಗಳು ಪರಿಹಾರಕ್ಕಾಗಿ ಯಡಿಯೂರಪ್ಪನವರಿಗೆ ಮೊರೆಯಿಟ್ಟಿರಲಿಲ್ಲ. 10 ಲಕ್ಷ ರೂ. ಅಲ್ಲ, 10 ಕೋಟಿ ರೂ. ಪರಿಹಾರ ಕೊಟ್ಟರೂ ಅವರಿಗಾದ ನಷ್ಟವನ್ನು ತುಂಬಲು ನಿರ್ದಯಿ ಮನಸ್ಥಿತಿಯ ಯಡಿಯೂರಪ್ಪ ಮತ್ತು ಅವರ ಸರ್ಕಾರಕ್ಕೆ ಸಾಧ್ಯವಾಗದು. ತಮ್ಮ ಮನೆ ನಿರ್ವಹಣೆಯ ಜವಾಬ್ದಾರಿಯನ್ನು ಹೊತ್ತಿದ್ದವರ ಜೀವವನ್ನು ಅನಗತ್ಯವಾಗಿ ಮತ್ತು ಅಮಾನುಷವಾಗಿ ಕಿತ್ತುಕೊಂಡ ಯಡಿಯೂರಪ್ಪ ಹಿಂತಿರುಗಿಸಬಹುದಾ? ಯಡಿಯೂರಪ್ಪ ಕೊಟ್ಟ ಮಾತಿನಿಂದ ಹಿಂತಿರುಗಿದ್ದಾರೆ.

"ಮೃತರ ಮೇಲೆ ಆರೋಪವಿದೆ. ಅವರೇ ಆರೋಪಿಗಳೆಂದು ಸಾಬೀತಾಗುತ್ತಿದೆ. ಈ ಸಂದರ್ಭದಲ್ಲಿ ಪರಿಹಾರ ಕೊಡುವುದು ಸೂಕ್ತವಲ್ಲ ಎಂಬುದು ಎಲ್ಲರ ಅಭಿಪ್ರಾಯ. ಆದ್ದರಿಂದ ಪರಿಹಾರ ಘೋಷಣೆ ಮರುಪರಿಶೀಲನೆ ಮಾಡುತ್ತೇವೆ." ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಮಂಗಳೂರಿನಲ್ಲಿ ಸುದ್ದಿಗಾರರ ಜತೆ ಮಾತನಾಡುತ್ತಾ ಹೇಳಿದ್ದಾರೆ ಎಂದು ವರದಿಯಾಗಿದೆ.

"ಎಲ್ಲರೂ" ಅಂದರೆ ಯಾರು? ಯಾರ ಒತ್ತಡಕ್ಕೆ ಮಣಿದು ಯಡಿಯೂರಪ್ಪರವರು ಸರ್ಕಾರದ ಪರವಾಗಿ ನೀಡಿದ ತೀರ್ಮಾನವನ್ನು ಬದಲಾಯಿಸಿದ್ದಾರೆ? ಯಡಿಯೂರಪ್ಪನವರ ಈ ನಡೆ ಈಗಾಗಲೇ ತಮ್ಮವರನ್ನು ಕಳೆದುಕೊಂಡು ಸಂತ್ರಸ್ಥರಾದ ಆ ಕುಟುಂಬಗಳಿಗೆ ಅವಮಾನದ ಬರೆಯನ್ನು ಎಳೆದಂತಾಗಿದೆ. ದು:ಖತೃಪ್ತ ಕುಟುಂಬಗಳನ್ನು ಈ ರೀತಿ ನೋಯಿಸುವುದು ಅಕ್ಷಮ್ಯ.

ಪೊಲೀಸರು ತಮ್ಮ ವೈಫಲ್ಯವನ್ನು ಮತ್ತು ಅತಿರೇಖದ ಕ್ರಮವನ್ನು ಮರೆಮಾಚುವ ಉದ್ದೇಶದಿಂದ ಮೃತಪಟ್ಟ ಜಲೀಲ್ ಮತ್ತು ನೌಶೀನ್ ರವರ ಹೆಸರುಗಳನ್ನು ಆರೋಪ ಪಟ್ಟಿಯಲ್ಲಿ ಸೇರಿಸಿದ್ದಾರೆ. ಗೋಲಿಬಾರ್ ಅನಗತ್ಯವಾಗಿತ್ತು, ಹಿಂಸಾಚಾರ ನಿಯಂತ್ರಣ ಮೀರಿರಲಿಲ್ಲ, ಕಲ್ಲು ತೂರಾಟದಿಂದ ಪೊಲೀಸರಿಗೆ ಗಂಭೀರ ಸ್ವರೂಪದ ಗಾಯಗಳಾಗಿರಲಿಲ್ಲ, ರಾಜ್ಯದ ಬೇರೆ ಯಾವ ಸ್ಥಳದಲ್ಲಿಯೂ ಗೋಲಿಬಾರ್ ನಡೆದಿಲ್ಲ, ಮಂಗಳೂರಿನಲ್ಲಿ ನಡೆದ ಗೋಲಿಬಾರ್ ಪೂರ್ವಯೋಜಿತವಾಗಿತ್ತು, ಎಂಬ ಮಾತುಗಳು ಚರ್ಚೆಯಾಗುತ್ತಿದ್ದಂತೆ ಮೃತಪಟ್ಟವರ ಹೆಸರುಗಳನ್ನು ಪೊಲೀಸರ ಮೂಲಕ ಆರೋಪ ಪಟ್ಟಿಯಲ್ಲಿ ಸೇರಿಸಲಾಯಿತು. ಆಗ ಎಚ್ಚರಗೊಂಡ ಯಡಿಯೂರಪ್ಪ ನಂಬಿಗಸ್ತ ಸಲಹೆಗಾರರು ಮತ್ತು ಅಧಿಕಾರಿಗಳು ಪರಿಹಾರದ ಘೋಷಣೆಗೆ ತಡೆ ನೀಡುವಂತೆ ಸಲಹೆ ನೀಡಿದ್ದಾರೆ. ಯಡಿಯೂರಪ್ಪನವರು ಯಾವ ಸಂಕೋಚವೂ ಇಲ್ಲದೆ ಹಿಮ್ಮುಖದ ಘೋಷಣೆ ಮಾಡಿದ್ದಾರೆ.

ಪೊಲೀಸ್ ಗೋಲಿಬಾರ್‌ನಲ್ಲಿ ಪ್ರಾಣ ಕಳೆದುಕೊಂಡವರಿಗೆ ನೀಡಬೇಕಾದ ಪರಿಹಾರದಲ್ಲೇ ಬಿಜೆಪಿಗರು ರಾಜಕೀಯ ಮಾಡುತ್ತಿರುವುದು ಖಂಡನೀಯ. ಗಲಭೆಗೆ ಸಂಬಂಧಿಸಿದಂತೆ ಮುಕ್ತವಾದ ತನಿಖೆಯಾಗಬೇಕು. ಆದರೆ ತನಿಖೆಗಿಂತ ಮೊದಲೇ ಮೃತಪಟ್ಟವರನ್ನು ಅಪರಾಧಿಗಳೆಂದು ಬಿಂಬಿಸುವುದು ಬಿಜೆಪಿಗರ ಕೀಳು ರಾಜಕೀಯ ಅಲ್ಲದೆ ಬೇರೇನೂ ಅಲ್ಲ. ತನಿಖೆಯ ಮೊದಲೇ ತೀರ್ಮಾನಕ್ಕೆ ಬರುವುದಾದರೆ ಇನ್ನು ತನಿಖೆ ಯಾಕೆ ಬೇಕು? ಸಿಐಡಿ ತನಿಖೆಯನ್ನು ಸಹ ಸರ್ಕಾರ ಹಿಂಪಡೆಯಲಿ! ಸರ್ಕಾರ ಈಗಾಗಲೇ ಅಪರಾಧಿಗಳ ಬಗ್ಗೆ ತೀರ್ಮಾನಕ್ಕೆ ಬಂದಿರುವುದರಿಂದ ಸಿಐಡಿ ತನಿಖೆಯ ಮೂಲಕ ಸರ್ಕಾರ ಕ್ರಿಮಿನಲ್ ಕೃತ್ಯವೆಸಗಿದ ಪೊಲೀಸರನ್ನು ರಕ್ಷಿಸಬಹುದಷ್ಟೆ.

'ಗೋಲಿಬಾರ್‌ನಲ್ಲಿ ಮೃತಪಟ್ಟವರು ಅಮಾಯಕರು ಎಂದು ಹೇಳಲಾಗದು' ಎಂದು ಮಂತ್ರಿ ಸಿ.ಟಿ. ರವಿ ಹೇಳಿದ್ದಾರೆ. 'ಆರೋಪ ಪಟ್ಟಿಯಲ್ಲಿ ಹೆಸರುಳ್ಳವರ ಕುಟುಂಬಕ್ಕೆ ಪರಿಹಾರ ನೀಡೋದು ಸರಿಯಲ್ಲ' ಎಂದು ಗೃಹಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಮೃತಪಟ್ಟವರು ಅಮಾಯಕರಲ್ಲ ಎನ್ನಲು ಏನಿದೆ ಸಾಕ್ಷಿ? ಇವರು ಮಾರಕಾಸ್ತ್ರಗಳನ್ನು ಹಿಡಿದುಕೊಂಡಿದ್ದರೆ? ಬೆಂಕಿ ಹಚ್ಚುತ್ತಿದ್ದರೆ? ಸಾರ್ವಜನಿಕ ಆಸ್ತಿ ನಾಶ ಮಾಡುತ್ತಿದ್ದರೆ? ಇವರು ಹಿಂದೆ ಕ್ರಿಮಿನಲ್ ಚಟುವಟಿಕೆಗಳಲ್ಲಿ ಭಾಗವಹಿಸಿದ ಹಿನ್ನೆಲೆ ಉಳ್ಳವರೆ? ಇಂತಹ ಯಾವ ಪುರಾವೆಗಳು ಇಲ್ಲದೆ ಅವರನ್ನು ಅಪರಾಧಿಗಳು ಎಂದು ಬಿಂಬಿಸುವುದು ನ್ಯಾಯವೆ?

ಮಂಗಳೂರು ಗಲಭೆ ಸರ್ಕಾರ ಪ್ರಾಯೋಜಿತ, ಪೂರ್ವ ನಿರ್ಧಾರಿತ ದುಷ್ಕೃತ್ಯ ಎಂಬಂತೆ ಕಾಣುತ್ತದೆ. ಗೋಲಿಬಾರ್ ನಡೆಸಲೇಬೇಕಾದ ಅನಿವಾರ್ಯತೆ ಇರಲಿಲ್ಲ. ರಾಜ್ಯದೆಲ್ಲೆಡೆ ಪೌರತ್ವ ತಿದ್ದುಪಡಿ ಕಾಯ್ದೆ ವಿರುದ್ಧ ಬೃಹತ್ ಪ್ರತಿಭಟನೆಗಳು ನಡೆದಿದ್ದರೂ ಎಲ್ಲಿಯೂ ಗೋಲಿಬಾರ್ ನಡೆಯಲಿಲ್ಲ. ಅಂತಹ ಪರಿಸ್ಥಿತಿ ಉಂಟಾಗಲಿಲ್ಲ. ಮಂಗಳೂರಿನಲ್ಲಿ ದುರುದ್ದೇಶಪೂರ್ವಕವಾಗಿ ಅಮಾಯಕರ ಮೇಲೆ ಗುಂಡುಹಾರಿಸಿ ಇಬ್ಬರನ್ನು ಬಲಿತೆಗೆದುಕೊಳ್ಳಲಾಗಿದೆ. ಇಲ್ಲಿ ಸರ್ಕಾರದ ನಿರ್ದೇಶನದ ಮೇರೆಗೇ ಪೊಲೀಸರು ಗೋಲಿಬಾರ್ ಮಾಡಿದ್ದಾರೆ.

ಸಿಐಡಿ ಎಂಬ ರಾಜ್ಯ ಸರ್ಕಾರದ ಪೊಲೀಸ್‌ರಿಂದ ನಡೆಯುವ ತನಿಖೆಯಿಂದ ಸತ್ಯಾಸತ್ಯತೆ ಹೊರಬರುವ ಸಾಧ್ಯತೆ ಇಲ್ಲ. ಹಾಲಿ ಹೈಕೋರ್ಟಿನ ನ್ಯಾಯಾಧೀಶರೊಬ್ಬರ ನೇತೃತ್ವದ ತನಿಖೆಯಲ್ಲಿ ಮಾತ್ರ ಸಾಧ್ಯವಾಗಬಹುದು. ಮೃತಪಟ್ಟವರನ್ನು ಅಪರಾಧಿಗಳೆಂದು ಶಂಕಿಸಿ, ಪರಿಹಾರವನ್ನು ಹಿಂತೆಗೆದುಕೊಂಡ ಕ್ರಮಕ್ಕಾಗಿ ಮುಖ್ಯಮಂತ್ರಿ ಯಡಿಯೂರಪ್ಪನವರು ಆ ಸಂತ್ರಸ್ತ ಕುಟುಂಬಗಳ ಕ್ಷಮೆ ಕೋರುವಂತಾಗಬೇಕು.

ಬೈಂದೂರು: ಹಿರಿಯ ನಾಗರಿಕರ ಬೃಹತ್ ಸಮಾವೇಶ

ಬೈಂದೂರು ತಾಲೂಕು ಹಿರಿಯ ನಾಗರಿಕರ ವೇದಿಕೆ ಆಶ್ರಯದಲ್ಲಿ ಹಿರಿಯ ನಾಗರಿಕರ ಬೃಹತ್ ಸಮಾವೇಶವು 21 ಡಿಸೆಂಬರ್ 2019 ರಂದು ಬೈಂದೂರಿನ ಬಂಕೇಶ್ವರ ಮಹಾಕಾಳಿ ದೇವಸ್ಥಾನದ ಸಭಾಂಗಣದಲ್ಲಿ ಯಶಸ್ವಿಯಾಗಿ ಜರಗಿತು. ಬೈಂದೂರಿನ ಯುವ ಮುಂದಾಳು ತಗ್ಗರ್ಸೆ ಕೃಷ್ಣ ಪೂಜಾರಿ ಸಮಾವೇಶದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡುತ್ತಾ, ಹಿರಿಯ ನಾಗರಿಕರಿಗೆ ಸರಕಾರದಿಂದ ದೊರಕುವ ವಿವಿಧ ಸೌಲಭ್ಯಗಳ ಬಗ್ಗೆ ವಿವರಿಸಿದರು. ಆಧಾರ ಕಾರ್ಡು ತಿದ್ದುಪಡಿ, ಮತದಾರನ ಗುರುತು ಚೀಟಿ, ಕುಟುಂಬದ ಪಡಿತರ ಚೀಟಿ, ಜಾತಿ, ಆದಾಯ ಧೃಡೀಕರಣ ಪತ್ರ, ಪ್ರಧಾನ ಮಂತ್ರಿ ಆಯುಷ್ಮಾನ್ ಆರೋಗ್ಯ ಕಾರ್ಡು ಇತ್ಯಾದಿ ಡಿಜಿಟಲ್ ಆನ್ ಲೈನ್ ಮುಖಾಂತರ ಸೌಲಭ್ಯ ಪಡೆಯಲು ವಹಿಸಬೇಕಾದ ಕ್ರಮದ ಕುರಿತು ಸಭೆಗೆ ವಿವರಿಸಿದರು. ಕರ್ನಾಟಕ ಸರಕಾರದ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ 60 ವರ್ಷ ದಾಟಿದ ಹಿರಿಯ ನಾಗರಿಕರಿಗೆ ಗುರುತಿನ ಚೀಟಿ ಪಡೆದು ಕೊಂಡಲ್ಲಿ, ವಿಮಾನ ಪ್ರಯಾಣದ ಟಿಕೆಟ್ ದರ ರಿಯಾಯ್ತಿ, ರೈಲು ಪ್ರಯಾಣ ಟಿಕೆಟ್ ದರ ರಿಯಾಯ್ತಿ, ಕೆ.ಎಸ್.ಆರ್.ಟಿ.ಸಿ ಮತ್ತು ಬಿ.ಎಂ.ಟಿ.ಸಿ. ಬಸ್ ಪಾಸ್ ಮತ್ತು ಪ್ರಯಾಣ ದರ ರಿಯಾಯ್ತಿ ಆದಾಯ ತೆರಿಗೆ ವಿನಾಯ್ತಿ, ಹಿರಿಯ ನಾಗರಿಕರ ಪೋಷಣಾ ಭತ್ಯೆ, ಸೌಲಭ್ಯ ಪಡೆಯುವುದರ ಬಗ್ಗೆ ವಿವರಿಸಿದರು. ನಾಗೇಶ ಶೇರುಗಾರ ಆರಂಭ ಗೀತೆ ಹಾಡಿದರು. ಹಿರಿಯ ನಾಗರಿಕರ ವೇದಿಕೆಯ ಜತೆ ಕಾರ್ಯದರ್ಶಿ ನಿವೃತ್ತ ಅಧ್ಯಾಪಕ ತಿಮ್ಮಪ್ಪಯ್ಯ ಮಾಸ್ತರ್ ಸಭೆಯಲ್ಲಿ ಕೆಲವು ಹಾಸ್ಯ ತುಣುಕು ಹೇಳಿ ಸಭಿಕರ ಮನ ರಂಜಿಸಿದರು. ವೆಂಕಟೇಶ ಕೋಣಿ ಅತಿಥಿಗಳ ಪರಿಚಯ ಮಾಡಿ,ಗೌರವಿಸಿದರು. ಹಿರಿಯ ನಾಗರಿಕರ ವೇದಿಕೆ ಬೈಂದೂರು ತಾಲೂಕು ಅಧ್ಯಕ್ಷ ಎಚ್. ವಸಂತ್ ಹೆಗ್ಡೆ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ನಿವೃತ್ತ ಅಧ್ಯಾಪಕ ರಾಮ ಶೇರುಗಾರ್ ಧನ್ಯವಾದ ಹೇಳಿದರು.



ಪಡುವರಿ: ಕಟ್ಟಡ ಕಾರ್ಮಿಕರ ಬೃಹತ್ ಸಮಾವೇಶ



ಬೈಂದೂರು ತಾಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘ(ಸಿಐಟಿಯು)ದ ಪಡುವರಿ ಗ್ರಾಮ ಸಮಿತಿಯ ಸರ್ವ ಸದಸ್ಯರ ಸಭೆಯು 23 ಡಿಸೆಂಬರ್ 2019 ರಂದು ಬೈಂದೂರು ಸಿಐಟಿಯು ಕಚೇರಿ ಸಭಾಂಗಣದಲ್ಲಿ ಯಶಸ್ವಿಯಾಗಿ ಜರಗಿತು. ಸಿಐಟಿಯು ಬೈಂದೂರು ತಾಲೂಕು ಸಂಚಾಲಕ ರೊನಾಲ್ಡ್ ರಾಜೇಶ್ ಕ್ವಾಡ್ರಸ್ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ನಮ್ಮ ಸಂಘಟನೆಯ ರಾಜ್ಯಮಟ್ಟದ ನಿರಂತರ ಹೋರಾಟದ ಫಲವಾಗಿ, ಕಟ್ಟಡ ಕಾರ್ಮಿಕರಿಗೆ ಕಲ್ಯಾಣ ಮಂಡಳಿಯಿಂದ ನಿವೃತ್ತಿ ವೇತನವನ್ನು ರೂಪಾಯಿ 2,000 ಗೆ ಹೆಚ್ಚಿಸಲು ಸಾಧ್ಯವಾಯಿತು. ಅಲ್ಲದೆ ಪಿಂಚಣಿದಾರನ ಕುಟುಂಬಕ್ಕೂ ಪೆನ್ಶನ್ ಸೌಲಭ್ಯ ವಿಸ್ತರಿಸಲಾಗಿದೆ. ಇದು ನಮ್ಮ ಹೋರಾಟಕ್ಕೆ ಸಂದ ಜಯವಾಗಿದೆ ಎಂದು ಹೇಳಿದರು. ಕಾರ್ಮಿಕ ಮುಂದಾಳು ವೆಂಕಟೇಶ ಕೋಣಿ ಸಭೆಯನ್ನುದ್ದೇಶಿಸಿ ಮಾತನಾಡಿ, ಕೇಂದ್ರ ಸರಕಾರದ ಜನವಿರೋಧಿ, ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಿ ಹಾಗೂ ದಿನಬಳಕೆ ಅಹಾರ ವಸ್ತುಗಳ ಬೆಲೆ ಏರಿಕೆ ವಿರೋಧಿಸಲು ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆ ಬಲಪಡಿಸಲು ಒತ್ತಾಯಿಸಿ, ದೇಶದ 10 ಕಾರ್ಮಿಕ ಸಂಘಗಳ ಜಂಟಿ ಸಭೆಯ ಕರೆಯಂತೆ 8 ಜನವರಿ 2020 ರಂದು ಜರಗುವ ಅಖಿಲ ಭಾರತ ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿ ಗೊಳಿಸಬೇಕು ಎಂದು ಕರೆ ನೀಡಿದರು.ಪಡುವರಿ ಗ್ರಾಮದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಸಂಘದ ಕಾರ್ಯದರ್ಶಿ ವಿಠಲ್ ಪಡುವರಿ, ಮುಖಂಡರಾದ ರೋನಿ ನಜರತ್ ಪಡುವರಿ, ನಾಗರತ್ನ ಪಡುವರಿ, ಉಪಸ್ಥಿತರಿದ್ದರು.

ವರದಿ: ವೆಂಕಟೇಶ ಕೋಣಿ



ಡಿವೈಎಫ್‌ಐ ಉರ್ವಸ್ಟೋರ್ಸ್ ಘಟಕದ ವತಿಯಿಂದ ಸೂರ್ಯಗ್ರಹಣ ವೀಕ್ಷಣೆ

26 ಡಿಸೆಂಬರ್ 2019 ರಂದು ಗುರುವಾರ ಸೂರ್ಯ ಗ್ರಹಣದ ಪ್ರಯುಕ್ತ ಡಿವೈಎಫ್‌ಐ ಉರ್ವಸ್ಟೋರ್ಸ್ ಘಟಕದ ವತಿಯಿಂದ ಸೂರ್ಯಗ್ರಹಣ ವೀಕ್ಷಣೆ ಮತ್ತು ಫಲಾಹಾರ ಸೇವಿಸುವ ಕಾರ್ಯಕ್ರಮ ಉರ್ವಸ್ಟೋರ್ಸ್ ಸುಂಕದಕಟ್ಟೆ ಪ್ರದೇಶದಲ್ಲಿ ನಡೆಯಿತು. ಈ ಕಾರ್ಯಕ್ರಮದ ಮೂಲಕ ಪ್ರದೇಶದ ಜನರಿಗೆ ಸೂರ್ಯಗ್ರಹಣ ನಡೆಯುವ ವೈಜ್ಞಾನಿಕ ಕಾರಣಗಳ ಬಗ್ಗೆ ತಿಳಿ ಹೇಳಲಾಯಿತು. ಇದರ ಬಗ್ಗೆ ಜನರಿಗೆ ಇರುವ ಮೂಢನಂಬಿಕೆಗಳನ್ನು ಹೋಗಲಾಡಿಸುವ ಪ್ರಯತ್ನ ನಡೆಯಿತು.



ಮಂಗಳೂರು ಪೊಲೀಸ್ ಕಮೀಷನರ್ ಡಾ ಹರ್ಷ ಅವರನ್ನು ಅಮಾನತುಗೊಳಿಸಿ ಅಮಾಯಕರನ್ನು ಪ್ರಕರಣದಿಂದ ಕೈಬಿಡುವಂತೆ ಡಿವೈಎಫ್‌ಐ ಒತ್ತಾಯ

ಪೌರತ್ವ ತಿದ್ದುಪಡಿ ಮತ್ತು ಪೌರತ್ವ ನೋಂದಣಿ ಕಾಯ್ದೆಯನ್ನು ವಿರೋಧಿಸಿ ಮಂಗಳೂರಿನಲ್ಲಿ ನಡೆದ ಪ್ರತಿಭಟನೆಯ ಸಂದರ್ಭ ಪ್ರತಿಭಟನಾಕಾರರ ಮೇಲೆ ನಡೆಸಿದ ಪೊಲೀಸ್ ದಾಳಿಯನ್ನು ಖಂಡಿಸುತ್ತೇವೆ. ಹಾಗೂ ಅಮಾಯಕರ ಮೇಲೆ ದಾಖಲಿಸಿರುವ ಎಲ್ಲಾ ಪ್ರಕರಣಗಳನ್ನು ಕೈಬಿಡುವಂತೆ ಡಿವೈಎಫ್‌ಐ ದಕ ಜಿಲ್ಲಾ ಸಮಿತಿ ಕಾರ್ಯದರ್ಶಿ ಸಂತೋಷ್ ಬಜಾಲ್ ಒತ್ತಾಯಿಸಿದ್ದಾರೆ.

ಗೋಲಿಬಾರ್ ನಲ್ಲಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರನ್ನು ಇಂದು ಡಿವೈಎಫ್‌ಐ ನಿಯೋಗ ಭೇಟಿ ಮಾಡಿ ಆರೋಗ್ಯ ವಿಚಾರಿಸಿದ ನಂತರ ಮಾತನಾಡಿದ ಅವರು ಶಾಂತಿಯುತವಾಗಿ ನಡೆಯುತ್ತಿದ್ದ ಪ್ರತಿಭಟನಾಕಾರರ ಮೇಲೆ ಗೋಲಿಬಾರ್ ನಡೆಸಿ ಇಬ್ಬರು ಅಮಾಯಕ ನಾಗರೀಕರ ಸಾವಿಗೆ ಕಾರಣರಾದ ಮಂಗಳೂರು ಪೊಲೀಸ್ ಕಮೀಷನರ್ ಡಾ ಹರ್ಷ ಅವರನ್ನು ಕೂಡಲೇ ಅಮಾನತುಗೊಳಿಸುವಂತೆ ಆಗ್ರಹಿಸಿದರು. ಘಟನೆಯ ಬಗ್ಗೆ ಕಮೀಷನರ್ ನೀಡುತ್ತಿರುವ ಹೇಳಿಕೆಗಳು ಹಲವು ರೀತಿಯ ಅನುಮಾನಗಳನ್ನು ಹುಟ್ಟು ಹಾಕುತ್ತಿದೆ ನೂರರಷ್ಟು ಜನರಿಲ್ಲದ ಗುಂಪನ್ನು ಚದುರಿಸಲು ಗೋಲಿಬಾರ್ ಮಾಡುವ ಅವಶ್ಯಕತೆ ಏನಿತ್ತು ಎಂದು ಪ್ರಶ್ನಿಸಿರುವ ಅವರು ಇಡೀ ಪ್ರಕರಣವನ್ನು ನಿಭಾಯಿಸಲು ಕಮಿಷನರ್ ಪೊಲೀಸ್ ನೀತಿಯನ್ನು ಅನುಸರಿಸುವ ಬದಲು ಕಲ್ಲಡ್ಕ ಪ್ರಭಾಕರ ಭಟ್ಟರ ಆಜ್ಞೆಯನ್ನು ಪಾಲಿಸಿದಂತಿದೆ. ರಾಜ್ಯದಲ್ಲೇ ಅತ್ಯಂತ ಸೂಕ್ಷ್ಮ ನಗರ ಆಗಿರುವ ಮಂಗಳೂರಲ್ಲಿ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ನಿಷ್ಪಕ್ಷಪಾತವಾಗಿ ಕಾರ್ಯ ನಿರ್ವಹಿಸುವ ಅಧಿಕಾರಿಯನ್ನು ಪೊಲೀಸ್ ಕಮಿಷನರ್ ಆಗಿ ನೇಮಕ ಮಾಡಬೇಕು ಮತ್ತು ಗೋಲಿಬಾರಿನಲ್ಲಿ ಇಬ್ಬರ ಸಾವಿಗೆ ಕಾರಣವಾದ ಕಮಿಷನರ್ ಹರ್ಷ ಅವರನ್ನು ಸೇವೆಯಿಂದ ವಜಾಗೊಳಿಸಬೇಕು ಮತ್ತು ಸಾಯಿಸುವ ಉದ್ದೇಶದಿಂದಲೇ ಗುಂಡು ಹಾರಿಸಿರುವ ಪೊಲೀಸ್ ಇನ್ಸೆಕ್ಟರ್ ಶಾಂತಾರಾಮ್ ಕುಂದರ್ ರನ್ನು ಬಂಧಿಸಿ ಜೈಲಿಗಟ್ಟಬೇಕು ಹಾಗೂ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಳಪಡಿಸಬೇಕೆಂದು ಒತ್ತಾಯಿಸಿದರು. ಗಾಯಾಳುಗಳನ್ನು ಭೇಟಿ ಮಾಡಿದ ಡಿವೈಎಫ್‌ಐ ನಿಯೋಗದಲ್ಲಿ ಡಿವೈಎಫ್‌ಐ ಜಿಲ್ಲಾಧ್ಯಕ್ಷ ಬಿಕೆ ಇಮ್ತಿಯಾಜ್, ಜಿಲ್ಲಾ ಮುಖಂಡರಾದ ರಫೀಕ್ ಹರೇಕಳ, ಗ್ರಾಮ ಪಂಚಾಯತ್ ಸದಸ್ಯರಾದ ಅಶ್ರಫ್ ಹರೇಕಳ ಮತ್ತಿತರರು ಉಪಸ್ಥಿತರಿದ್ದರು.

ಪೌರತ್ವ ತಿದ್ದುಪಡಿ ಕಾಯಿದೆ ವಿರುದ್ಧ ಮಂಗಳೂರಿನಲ್ಲಿ ಡಿವೈಎಫ್‌ಐ ಎಸ್‌ಎಫ್‌ಐ ಪ್ರತಿಭಟನೆ

ವರದಿ: ವಾ.ಉ.

ಲೋಕಸಭೆ ಹಾಗೂ ರಾಜ್ಯ ಸಭೆಗಳಲ್ಲಿ ಅಂಗೀಕಾರ ಪಡೆದು ಕಾಯ್ದೆಯಾಗಿರುವ ಪೌರತ್ವ ತಿದ್ದುಪಡಿ ಕಾಯಿದೆ ಹಾಗೂ ಎನ್‌ಆರ್‌ಸಿ ವಿರುದ್ಧ ರಾಜ್ಯಾದ್ಯಂತ ಡಿಸೆಂಬರ್ 16 ರಂದು ಪ್ರತಿಭಟನೆಗೆ ಡಿವೈಎಫ್‌ಐ ರಾಜ್ಯ ಸಮಿತಿ ಕರೆ ನೀಡಿದ ಮೇರೆಗೆ ಮಂಗಳೂರಿನಲ್ಲಿ ಡಿವೈಎಫ್‌ಐ ಮತ್ತು ಎಸ್‌ಎಫ್‌ಐ ದ.ಕ.ಜಿಲ್ಲಾ ಸಮಿತಿ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಪ್ರತಿಭಟನೆ ನಡೆಸಿರುತ್ತದೆ.

ಪ್ರತಿಭಟನೆಯನ್ನು ಉದ್ದೇಶಿಸಿ ಡಿವೈಎಫ್‌ಐ ರಾಜ್ಯ ಸಮಿತಿ ಅಧ್ಯಕ್ಷ ಮುನೀರ್ ಕಾಟಿಪಳ್ಳ, ಡಿಎಸ್‌ಎಸ್(ಪ್ರೊ.ಬಿ. ಕೃಷ್ಣಪ್ಪ ಸ್ಥಾಪಿತ) ಮುಖಂಡ ಎಂ.ದೇವದಾಸ್, ಡಿವೈಎಫ್‌ಐ ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ಸಂತೋಷ್ ಬಜಾಲ್ ಮಾತನಾಡಿದರು.

ಕಲ್ಲಡ್ಕದ ಶ್ರೀರಾಮ ವಿದ್ಯಾಕೇಂದ್ರವು ಆರೆಸ್ಸೆಸ್ ಮುಖಂಡ ಕಲ್ಲಡ್ಕ ಪ್ರಭಾಕರ ಭಟ್ ಸಂಚಾಲಕತ್ವದ ಶಾಲೆಯಾಗಿದ್ದು, ಈ ಕಾರ್ಯಕ್ರಮದ ಹಿಂದಿನ ದಿನ ಶಾಲೆಯ ಕ್ರೀಡೋತ್ಸವದಲ್ಲಿ ಬಾಬರಿ ಮಸೀದಿ ಧ್ವಂಸದ ಅಣಕು ಪ್ರದರ್ಶನವನ್ನು ಕ್ರೀಡೋತ್ಸವದ ಒಂದು ಕಾರ್ಯಕ್ರಮವಾಗಿ ಶಾಲಾ ಮಕ್ಕಳಿಂದ ಮಾಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಪುದುಚೇರಿ ಗವರ್ನರ್ ಕಿರಣ್‌ಬೇಡಿ, ಕೇಂದ್ರ ಸಚಿವ ಸದಾನದ ಗೌಡ, ರಾಜ್ಯದ ಕೆಲವು ಶಾಸಕರು, ಕೆಲವು ಪೊಲೀಸ್ ಅಧಿಕಾರಿಗಳು ಭಾಗವಹಿಸಿದ್ದರು. ಸರಕಾರೀ ಮಾನ್ಯತೆ ಪಡೆದ ಶಾಲೆಯಲ್ಲಿ ಕಾನೂನುಬಾಹಿರ ಕ್ರಿಮಿನಲ್ ಕೃತ್ಯವೊಂದನ್ನು ಸಮರ್ಥಿಸುವ ಅಣಕು ಪ್ರದರ್ಶನವನ್ನು ನಡೆಸಿ ಶಾಲಾ ಮಕ್ಕಳ ನಡುವೆ ಮತೀಯ ವಿಷಬಿತ್ತುವ ಕೃತ್ಯವು ಗಂಭೀರ ಅಪರಾಧವಾಗಿದೆ ಎಂಬುದಾಗಿ ಮುನೀರ್ ಕಾಟಿಪಳ್ಳ ಟೀಕಿಸಿದರು.



ಜೆಸಿಟಿಯು ಹಾಸನ ಜಿಲ್ಲಾ ಸಮಾವೇಶ

ಕೇಂದ್ರದ ಎನ್.ಡಿ.ಎ ಸರ್ಕಾರ ಕಾರ್ಮಿಕರ ವಿರೋಧಿ ನೀತಿಯನ್ನು ಅನುಸರಿಸುತ್ತಿದೆ. ಬಂಡವಾಳಶಾಯಿ ವ್ಯವಸ್ಥೆಯಿಂದ ಬೆಲೆ ಏರಿಕೆಯಾಗಿ ಜನಸಾಮಾನ್ಯರ ಕೊಳ್ಳುವ ಶಕ್ತಿ ಕಡಿಮೆಯಾಗಿದೆ ಎಂದು ಎಐಟಿಯುಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ವಿಜಯ ಭಾಸ್ಕರ್ ಹೇಳಿದರು. ನಗರದ ಸ್ವಾಭಿಮಾನಿ ಭವನದಲ್ಲಿ ಕಾರ್ಮಿಕ ಸಂಘಟನೆಗಳ ಜಂಟಿವೇದಿಕೆಯಿಂದ ಆಯೋಜಿಸಿದ್ದ ಜಿಲ್ಲಾ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ದೊಡ್ಡ ಕಂಪನಿಗಳು ಗುತ್ತಿಗೆ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳುತ್ತಿವೆ. ಪ್ರತಿ ವರ್ಷ ನಿರುದ್ಯೋಗ ಜಾಸ್ತಿಯಾಗುತ್ತಿದ್ದು 15 ಲಕ್ಷಕ್ಕೂ ಹೆಚ್ಚು ನಿರುದ್ಯೋಗಿಗಳಿದ್ದಾರೆ. ಉದ್ಯೋಗ ಸೃಷ್ಠಿಗೆ ಈ ಸರ್ಕಾರ ಗಮನ ಹರಿಸುತ್ತಿಲ್ಲ. ನರೆಗಾ ಕ್ಷೇತ್ರದಲ್ಲಿ ಉದ್ಯೋಗವನ್ನು ಕಡಿತ ಮಾಡಲಾಗುತ್ತಿದೆ. ರೈತರು ಬೆಳೆದ ಬೆಳೆಗೆ ಬೆಂಬಲ ಬೆಲೆ ಸಿಗುತ್ತಿಲ್ಲ. ಜನಸಾಮಾನ್ಯರ ತೆರಿಗೆ ಹಣವನ್ನು ಕೇಂದ್ರ ಸರ್ಕಾರ ಕಾರ್ಪೋರೇಟ್ ಕಂಪನಿಗಳಿಗೆ ತೆರಿಗೆ ವಿನಾಯಿತಿಯ ರೂಪದಲ್ಲಿ ನೀಡುತ್ತಿದೆ. ಲಾಭದಾಯಕ ಉದ್ದಿಮೆಗಳನ್ನು ಖಾಸಗೀಕರಣ ಮಾಡುತ್ತಿದ್ದು, ಕೆಲಸದ ಭದ್ರತೆ ಇಲ್ಲದೆ ಜನರು ಬೀದಿಪಾಲಾಗುತ್ತಿದ್ದಾರೆ. 7 ಸಾವಿರ ಕೋಟಿ ಕಟ್ಟಡ ನಿರ್ಮಾಣ ಕ್ಷೇಮಾಭಿವೃದ್ಧಿಯ ಹಣವನ್ನು ಶೇರು ಮಾರುಕಟ್ಟೆಗೆ ಹಾಕುತ್ತಿದ್ದಾರೆ. ಚಿ ಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳಕ್ಕೆ ಅವಕಾಶ ಕಲ್ಪಿಸಲಾಗಿದೆ. ಇದರಿಂದ ಚಿಲ್ಲರೆ ವ್ಯಾಪಾರಿಗಳು ಬೀದಿಪಾಲಾಗುವಂತಾಗಿದೆ. ಆದ್ದರಿಂದ ಜನವರಿ 8 ರ ಹೋರಾಟಕ್ಕೆ ಚಿಲ್ಲರೇ ವ್ಯಾಪಾರಿಗಳು ಬೆಂಬಲ ಕೊಡಬೇಕೆಂದು ವಿನಂತಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಸಿಐಟಿಯುನ ರಾಜ್ಯ ಕಾರ್ಯದರ್ಶಿ ಧರ್ಮೇಶ್ ರವರು ಮಾತನಾಡಿ ಕೇಂದ್ರದ ಎನ್‌ಡಿಎ ಸರ್ಕಾರ ಕಾರ್ಮಿಕರಿಗೆ ದಿನಭತ್ಯೆ ಕನಿಷ್ಠಕೂಲಿ 178 ರೂ ಅನ್ನು ನಿಗಧಿ ಮಾಡಿದೆ ಇದರಿಂದ ರೈತರು ಮತ್ತು ಎಲ್ಲಾ ವಿಭಾಗದ ಕಾರ್ಮಿಕರು ಸಂಕಷ್ಟದಲ್ಲಿದ್ದಾರೆ. ಬಿಎಸ್‌ಎನ್‌ಎಲ್ ನಲ್ಲಿ 95 ಸಾವಿರ ನೌಕರರು ಕೆಲಸಕಳೆದುಕೊಳ್ಳುತ್ತಿದ್ದಾರೆ, ಸಾಮಾನ್ಯ ಜನರಿಗೆ ಬ್ಯಾಂಕ್‌ಗಳಿಂದ ಸಾಲ ಸೌಲಭ್ಯಗಳು ದೊರಕುತಿಲ್ಲ ಇದರಿಂದಾಗಿ ಖಾಸಗಿ ಫೌನಾನ್ಸ್ ಕಂಪನಿಗಳೂ ಬಲಿಷ್ಟವಾಗುತ್ತಿವೆ. ಕಾರ್ಮಿಕರ ಬದುಕಿನಲ್ಲಿ ಯಾವುದೇ ಬದಲಾವಣೆ ಕಾಣುತ್ತಿಲ್ಲ. ಜನಸಾಮಾನ್ಯರ ಕೊಳ್ಳುವ ಶಕ್ತಿ ಜಾಸ್ತಿಯಾದರೆ ಮಾತ್ರ ದೇಶದ ಸಂಪೂರ್ಣ ಅಭೀವೃದ್ಧಿ ಸಾಧ್ಯ. ಕಾರ್ಪೋರೇಟರ್‌ಗಳ ಆಸ್ತಿಯಲ್ಲಿ 20 ಸಾವಿರ ಕೋಟಿ ಹೆಚ್ಚಳವಾಗಿದೆ. ಜನಸಾಮಾನ್ಯರ, ರೈತ–ಕಾರ್ಮಿಕರ ನಷ್ಟ ಕಾರ್ಪೋರೇಟ್ ಸಂಸ್ಥೆಗಳೀಗೆ ಲಾಭ. ಕೇಂದ್ರ ಸರ್ಕಾರದ ಜನವಿರೋಧಿ, ರೈತ–ಕಾರ್ಮಿಕರ ವಿರೋಧಿ, ವಿದ್ಯಾರ್ಥಿ ಯುವಜನರ ವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಲು ರಾಷ್ಟ್ರಾದ್ಯಂತ ನಡೆಯುವ ಜನವರಿ 8 2020 ರ ಸಾರ್ವತ್ರಿಕ ಮುಷ್ಕರಕ್ಕೆ ಚಿಲ್ಲರೆ ವ್ಯಾಪಾರಿಗಳು, ಕಟ್ಟಡ ಕಾರ್ಮಿಕರು, ಹಮಾಲಿ ಕೂಲಿ ಕಾರ್ಮಿಕರನ್ನು ಒಳಗೊಂಡಂತೆ ಪ್ರತಿಯೊಬ್ಬ ಕಾರ್ಮಿಕರು ಮುಷ್ಕರವನ್ನು ಯಶಸ್ವಿಯಾಗಲು ಶ್ರಮಿಸಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಗುಣಶೇಖರ್, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪುಷ್ಪ, ಎಲ್‌ಐಸಿ ಮಂಜುನಾಥ್ ಹಾಗೂ ಅಧ್ಯಕ್ಷತೆಯನ್ನು ಜಿ.ಪಿ. ಸತ್ಯನಾರಾಯಣರವರು ವಹಿಸಿ ಮಾತನಾಡಿದರು.



ಪೌರತ್ವ ತಿದ್ದುಪಡಿ ಕಾಯ್ದೆ ಕುರಿತು ದುಂಡು ಮೇಜಿನ ಸಭೆ



ನಿಷೇಧಾಜ್ಞೆ ಹೇರಿ, ಇಂಟರ್ನೆಟ್ ಸಂಪರ್ಕ ಕಡಿತಗೊಳಿಸಿದರೂ, ಸರ್ಕಾರಗಳ ಜನವಿರೋಧಿ ನೀತಿಗಳ ವಿರುದ್ಧ ಹೋರಾಟ ನಿಲ್ಲದು ಎಂದು ಸುಪ್ರೀಂ ಕೋರ್ಟಿನ ವಿಶ್ರಾಂತ ನ್ಯಾಯಮೂರ್ತಿ ವಿ.ಗೋಪಾಲಗೌಡ ಹೇಳಿದರು.

20 ಡಿಸೆಂಬರ್ 2019 ರಂದು ಶಾಸಕರ ಭವನ ಸಭಾಂಗಣದಲ್ಲಿ ಭಾರತ ವಿದ್ಯಾರ್ಥಿ ಫೆಡರೇಶನ್ ಆಯೋಜಿಸಿದ್ದ, ಪೌರತ್ವ ತಿದ್ದುಪಡಿ ಕಾಯ್ದೆ–2019 ಕುರಿತ ದುಂಡು ಮೇಜಿನ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು.

ಸರ್ಕಾರಗಳ ಯಾವುದೇ ನೀತಿ, ಆದೇಶಗಳು ಇರಲಿ.ಈ ಬಗ್ಗೆ ಮುಕ್ತವಾಗಿ ಚರ್ಚೆ ನಡೆಸಿ, ಅನಿಸಿಕೆ ವ್ಯಕ್ತಪಡಿಸುವ ಹಕ್ಕುಗಳನ್ನು ನಮ್ಮ ಸಂವಿಧಾನ ನೀಡಿದೆ.ಆದರೆ, ಉದ್ದೇಶ ಪೂರ್ವಕವಾಗಿ ನಿಷೇಧಾಜ್ಞೆ ಹೇರಿ, ಜನರ ಆಕ್ರೋಶ ಹತ್ತಿಕ್ಕಲು ಸಾಧ್ಯವಿಲ್ಲ. ಅಲ್ಲದೆ, ಇಂಟರ್ನೆಟ್ ಇಲ್ಲದ ಕಾಲದಲ್ಲಿಯೂ, ಜನ ಸಾಮಾನ್ಯರ ಹೋರಾಟಗಳು ಇತಿಹಾಸದ ಪುಟಗಳಲ್ಲಿ ಸೇರಿವೆ ಎಂದರು.

ಪೌರತ್ವ ತಿದ್ದುಪಡಿ ಕಾಯ್ದೆ ಸಂವಿಧಾನ ವಿರೋಧವಾಗಿದೆ. ಅಲ್ಲದೆ, ಧರ್ಮ ಆಧಾರಿತ ನೀತಿಗಳನ್ನು ಪ್ರಜಾಪ್ರಭುತ್ವದಲ್ಲಿ ಒಪ್ಪುವುದಿಲ್ಲ ಎಂದ ಅವರು, ಸಂವಿಧಾನಕ್ಕೆ 110 ತಿದ್ದುಪಡಿ ಆಗಿವೆ. ನೈಸರ್ಗಿಕ ವಾಗಿ ಹಕ್ಕುಗಳನ್ನು ನೀಡಲಾಗಿದೆ ಎಂದು ತಿಳಿಸಿದರು.

ಪೌರತ್ವ ತಿದ್ದುಪಡಿ ಕಾಯ್ದೆಯಡಿ ಪಾಕಿಸ್ತಾನ, ಬಾಂಗ್ಲಾ ಮತ್ತು ಅಫ್ಘಾನಿಸ್ತಾನದ ಹಿಂದೂಗಳು, ಕ್ರೈಸ್ತರು, ಬೌದ್ಧರು, ಪಾರ್ಸಿ, ಜೈನರಿಗೆ ಭಾರತದ ಪೌರತ್ವ ನೀಡಲಾಗುತ್ತದೆ. ಆದರೆ ಇಲ್ಲಿ ದೌರ್ಜನ್ಯಕ್ಕೊಳಗಾಗುವ ಮುಸ್ಲಿಮರನ್ನು ಹೊರಗಿಡಲಾಗಿದೆ. ಧರ್ಮದ ಆಧಾರದಲ್ಲಿ ರೂಪಿತವಾಗಿರುವ ಈ ಮಸೂದೆಯು ಸಂವಿಧಾನದ ತತ್ವಗಳಿಗೆ ವಿರುದ್ಧವಾಗಿದೆ.

ಅಲ್ಲದೆ, ಶ್ರೀಲಂಕಾದಲ್ಲಿ 80 ಲಕ್ಷ ಹಿಂದೂಗಳು ಕಷ್ಟಕರ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಭೂತನ್, ಮಯನ್ಮಾರ್ ನಲ್ಲೂ ಇದೆ ಪರಿಸ್ಥಿತಿ ಉಂಟಾಗಿದೆ. ಅವರನ್ನು ಏಕೆ, ಈ ಕಾಯ್ದೆಯಲ್ಲಿ ಸೇರಿಸಿಲ್ಲ ಎಂದು ಖಾರವಾಗಿ ಪ್ರಶ್ನೆ ಮಾಡಿದರು.

ನಿಷೇಧಾಜ್ಞೆ ಬೇಡ, ದೇಶ ಗಂಡಾಂತರ ಪರಿಸ್ಥಿತಿ ಎದುರಿಸುತ್ತಿದೆ. ಕರ್ನಾಟಕ ರಾಜ್ಯದಲ್ಲಿ ನಿಷೇಧಾಜ್ಞೆ ಜಾರಿಯಾಗಿದೆ. ಆದರೆ, ಇತಂಹ ಅಪಾಯಕಾರಿ ಬೆಳವಣಿಗೆ ಗಮನಿಸಿದಾಗ, ಪ್ರಜಾಪ್ರಭುತ್ವ ಉಳಿದಿದೆಯೇ ಎಂಬ ಪ್ರಶ್ನೆ ಮೂಡುತ್ತದೆ. ಹಾಗಾಗಿ, ಈ ಕೂಡಲೇ ನಿಷೇಧಾಜ್ಞೆ ತೆಗೆದು, ಸಂವಿಧಾನದ ಮೂಲಭೂತ ಹಕ್ಕುಗಳನ್ನು ಕಾಪಾಡಬೇಕು ಎಂದು ಗೋಪಾಲಗೌಡರು ನುಡಿದರು.

ಚಿಂತಕ ಮಹೇಂದ್ರ ಕುಮಾರ್ ಮಾತನಾಡಿ, ದೇಶದಲ್ಲಿ ಆರ್ಥಿಕ ಹಿಂಜರಿತ, ಉದ್ಯೋಗ ನಷ್ಟ, ಬೆಲೆ ಏರಿಕೆಯಂತಹ ಸಮಸ್ಯೆಗಳ ನಡುವೆ ಕೇಂದ್ರ ಸರಕಾರ ಉದ್ದೇಶ ಪೂರ್ವಕವಾಗಿ ಎನ್‌ಆರ್‌ಸಿ ಮತ್ತು ಸಿಎಎ ತರಲು ಮುಂದಾಗಿದೆ. ಈ ಮೂಲಕ ಬೆಂಕಿ ಹಚ್ಚುವ ಕೆಲಸ ಮಾಡುತ್ತಿದ್ದಾರೆ ಎಂದು ಅಪಾದಿಸಿದರು.

ಸಿಎಎ ಮುಖ್ಯವಲ್ಲ, ಎನ್‌ಆರ್‌ಸಿ ಅಪಾಯ. ಎನ್‌ಆರ್‌ಸಿಯಲ್ಲಿ ಪಾಕಿಸ್ತಾನ, ಬಾಂಗ್ಲಾ ಸೇರಿದಂತೆ ಇತರೆ ಕಡೆಗಳಿಂದ ಬರುವ ಹಿಂದು, ಕ್ರೈಸ್ತ, ಬೌದ್ಧ, ಸಿಖ್, ಪಾರ್ಸಿಗಳಿಗೆ ಪೌರತ್ವ ಕೊಡಲಾಗುತ್ತದೆ ಅಂತಾರೆ. ಅವರಿಗೆ ನೀಡುವ ರೀತಿಯಲ್ಲಿಯೇ ನಮ್ಮ ದೇಶದಲ್ಲಿ ದಾಖಲೆ ನೀಡದವರಿಗೆ ಪೌರತ್ವ ನೀಡುತ್ತಾರೆ. ಅನಂತರ ಪೌರತ್ವ ಪಡೆದವರಿಗೆ ಯಾವುದೇ ಹಕ್ಕುಗಳನ್ನು ನೀಡಲ್ಲ. ಆಗ ಏನು ಮಾಡಲು ಸಾಧ್ಯವಾಗುತ್ತದೆ ಎಂದ ಅವರು ಈಗ ಬೆಂಬಲ ವ್ಯಕ್ತಪಡಿಸುವವರೇ ಆಗ ಏನೂ ಮಾಡಲಾಗದ ಸ್ಥಿತಿಗೆ ತಲುಪಿರುತ್ತಾರೆ ಎಂದು ಹೇಳಿದರು.

ರಾಜಕೀಯ ಪಕ್ಷಗಳು ಮತ ಪಡೆಯುವಾಗ ಎಲ್ಲರೂ ನಮ್ಮವರು ಎನ್ನುತ್ತಾರೆ. ಈಗ ಈ ಕಾಯ್ದೆಯ ವಿರುದ್ಧ ಎಲ್ಲರೂ ಬೀದಿಗೆ ಇಳಿಯಬೇಕು. ಉದ್ದೇಶ ಪೂರ್ವಕವಾಗಿ ಭಯ ಹುಟ್ಟಿಸುವ ಕೆಲಸ ಮಾಡುತ್ತಿದ್ದಾರೆ. ಭಯ ಹೋಗಲಾಡಿಲು ರಾಯಕೀಯ ಫಲಾನುಭವಿಗಳು ಕೆಲಸ ಮಾಡಬೇಕು. ಬರೀ ಮುಸ್ಲಿಮ್‌ರು ಬೀದಿಗೆ ಇಳಿಯುವುದು ಸರಿಯಲ್ಲ. ದೇಶದ ಪ್ರತಿಯೊಬ್ಬರ, ಪ್ರಜಾಪ್ರಭುತ್ವದ ಸಮಸ್ಯೆ ಇದಾಗಿದೆ. ಅರ್ಥ ಮಾಡಿಸುವ ಕೆಲಸ ತಾಳ್ಮೆಯಿಂದ ಮಾಡಬೇಕಿದೆ.

ಹೋರಾಟಗಾರ ಶ್ರೀಪಾದ್ ಭಟ್ ಮಾತನಾಡಿ, ದೇಶದಲ್ಲಿ ಬಿಜೆಪಿ ಅತ್ಯಂತ ಅಪಾಯಕಾರಿಯಾದುದಾಗಿದೆ. ನ್ಯಾಯಾಲಯಗಳೇ ಬಿಜೆಪಿ ಮಾಡಿರುವ ಸಂವಿಧಾನ ವಿರೋಧಿ ಕಾಯ್ದೆಯನ್ನು ವಿಚಾರಣೆ ನಡೆಸದೇ ಹಿಂದೆ ಸರಿದಿವೆ. ಅಂದರೆ, ಈಗ ಎನ್‌ಆರ್‌ಸಿ, ಸಿಎಎ ನಮ್ಮ ಕೈ ಮೀರಿ ಹೋಗಿದೆ. ನಾವೀಗ ಎಚ್ಚರಿಕೆಯಿಂದ ಹೆಜ್ಜೆ ಇಡಬೇಕಿದೆ ಎಂದು ಹೇಳಿದರು.

ಸರ್ವದರ್ಮ ಸಮಾನತೆಯ ಬಗ್ಗೆ ಮಾತನಾಡುವ ನಾವುಗಳು ಈಗ, ಧರ್ಮಗಳ ವಿಂಗಡನೆ ಮಾಡುವ ಕಾಯ್ದೆಯ ವಿರುದ್ಧ ಬೀದಿಗಳಿಯಲು ಹಿಂಜರಿಯುವ ಸ್ಥಿತಿ ನಿರ್ಮಾಣವಾಗಿದೆ. ಧರ್ಮವನ್ನು ಪ್ರಭುತ್ವದಲ್ಲಿ ತರಲಾಗಿದೆ. ಅದರ ಪರಿಣಾಮವಿಂದು ಅನುಭವಿಸುತ್ತಿದ್ದೇವೆ ಎಂದ ಅವರು, ಬಹುಸಂಖ್ಯಾತರು ಮುಂಚೂಣಿಗೆ ಬರಬೇಕು.ಸಿಎಎ ಮುಸ್ಲಿಂ ವಿರುದ್ಧ ಅಷ್ಟೇ ಅಲ್ಲ ಆದಿವಾಸಿಗಳ, ಬುಡಕಟ್ಟುಗಳ ವಿರುದ್ಧವೂ ಕಾಯ್ದೆ ಎಂದು ಅವರಿಗೆ ಮನವರಿಕೆ ಮಾಡಿಕೊಡಬೇಕು ಎಂದು ಹೇಳಿದರು.

ತಾಯಿ ಒಬ್ಬರು ಭಾರತದಲ್ಲಿ ಹುಟ್ಟಿದ್ದರೆ ಅವರು ಭಾರತದ ಪ್ರಜೆ ಆಗ್ತಾರೆ ಎಂದು ಈ ಕಾಯ್ದೆಯಲ್ಲಿ ಹೇಳಲಾಗಿದೆ. ಈ ಮೂಲಕ ಕೋಟ್ಯಾಂತರ ಜನರನ್ನು ದೇಶದಿಂದ ಹೊರದಬ್ಬು ಹುನ್ನಾರ ಮಾಡಲಾಗಿದೆ ಎಂದರು.

ದೇಶದಲ್ಲಿ ಅರಾಜಕತೆ ಸೃಷ್ಟಿಸಲಾಗುತ್ತಿದೆ. ಹಳ್ಳಿ ಮಟ್ಟದಿಂದಲೇ ಧರ್ಮದ ಹೆಸರಿನಲ್ಲಿ ಜನರನ್ನು ವಿಂಗಡಿಸುವ ಕೆಲಸ ಮಾಡಲಾಗುತ್ತಿದೆ. ಇದು ಎರಡನೆಯ ಸ್ವಾತಂತ್ರ್ಯ ಚಳವಳಿಯಲ್ಲಿ ರೀತಿಯಲ್ಲಿ ಹೋರಾಟ ನಡೆಯಬೇಕಿದೆ. ಮುಸ್ಲಿಂರು ಅಷ್ಟೇ ಏಕಾಂಗಿ ಹೋರಾಟ ಮಾಡುವುದರ ಬದಲಿಗೆ, ಎಲ್ಲರನ್ನೂ ಒಗ್ಗೂಡಿಸಿಕೊಳ್ಳಬೇಕು ಎಂದು ಹೇಳಿದರು.

SFI ರಾಜ್ಯ ಕಾರ್ಯದರ್ಶಿ ಗುರುರಾಜ ದೇಸಾಯಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಮಾಜಿ ಸಚಿವೆ ಬಿ.ಟಿ ಲಲಿತಾ ನಾಯಕ್, ಲೇಖಕಿ ಕೆ ಷರೀಫಾ, ಚಿಂತಕ ಕೆ.ಪ್ರಕಾಶ್, ಮಂಗಳೂರು ವಿಜಯ, ಯಡೂರ ಮಾಹಬಲ, ಪಲ್ಲವಿ ಇಡೂರು, ಪ್ರಕಾಶ ಕಮ್ಮರಡಿ, ಕೆ.ಎಸ್ ವಿಮಲಾ, ಜನಾರ್ಧನ, AISF ನ ಜ್ಯೋತಿ ಕೆ, AISA ಕಿಶನ್, AIDSO ಸುಭಾಷ್, VJDS ನ ಹರಿಪ್ರಸಾದ್, DSF ನ ರಾಜಶೇಖರ್, KVS ನ ರಾಜೇಂದ್ರ, ರೈತ ಮುಖಂಡ ನವೀನ್ ಕುಮಾರ್, SFI ವಾಸುದೇವರೆಡ್ಡಿ, ಗಾಯತ್ರಿ, ದಿಲೀಪ್, ಸಾಗರ, ಅಂಜಿ, ಅಭಿಷೇಕ, ರಾಮು, ನರೇಂದ್ರ, ದರ್ಶನ, ವೆಂಕಟೇಶ ಸೇರಿದಂತೆ ಅನೇಕರು ಹಾಜರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು SFI ರಾಜ್ಯಾಧ್ಯಕ್ಷ ವಿ.ಅಂಬರೀಶ್ ವಹಿಸಿದ್ದರು.

ಇದೇ ವೇಳೆ ರಾಜಾರಾಂ ತಲ್ಲೂರ ರವರ, ಬಹುರೂಪಿ ಪ್ರಕಾಶನದ ಏನಿದು ಪೌರತ್ವ ತಿದ್ದುಪಡಿ ಕಾಯ್ದೆ–2019 ಪುಸ್ತಕ ಬಿಡುಗಡೆ ಮಾಡಲಾಯಿತು.



ಹಾಸ್ಟೆಲ್ ಅಂತಸ್ತಿನಿಂದ ಬಿದ್ದು ಸಾವಿನಪ್ಪಿದ ಕಾವ್ಯ ಬೆನ್ನೂರ ವಿದ್ಯಾರ್ಥಿನಿಯ ಕುಟುಂಬಕ್ಕೆ ಪರಿಹಾರ ಹಾಗೂ ಸರಕಾರಿ ಉದ್ಯೋಗ ನೀಡಲು ಎಸ್‌ಎಫ್‌ಐ ಆಗ್ರಹ



ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಹಾವೇರಿ ಜಿಲ್ಲಾ ಸಮಿತಿಯು ಸಲ್ಲಿಸಿದ ಮನವಿಯಲ್ಲಿ ಈ ಕೆಳಗಿನಂತೆ ಒತ್ತಾಯಿಸಿದೆ. ರಾಣೇಬೆನ್ನೂರ ನಗರದ ಹೊರ ವಲಯದಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಯರ ಹಾಸ್ಟೆಲಿನಲ್ಲಿ 19 ಅಕ್ಟೋಬರ್ 2019 ಶನಿವಾರ ಬೆಳಿಗ್ಗೆ ವಿದ್ಯಾಭ್ಯಾಸ ಮಾಡಲು ಬೇಗನೆ ಎದ್ದು ಹೊರಗಡೆ ಬರುವಾಗ ಮೂರು ಅಂತಸ್ತಿನ ಕಟ್ಟಡದಿಂದ 12 ನೇ ತರಗತಿ ಓದುತ್ತಿರುವ ವಿದ್ಯಾರ್ಥಿನಿ ಕಾವ್ಯಾ ಬೆನ್ನೂರ ಕೆಳಗಡೆ ಬಿದ್ದು ಸಾವನಪ್ಪಿದ್ದು, ಈ ಘಟನೆಗೆ ಭದ್ರತೆ ಇಲ್ಲದೇ ಕಟ್ಟಡದಲ್ಲಿ ಹಾಸ್ಟೆಲ್ ನಡೆಸುತ್ತಿರುವುದೇ ಕಾರಣವಾಗಿದ್ದು ಘಟನೆ ನಡೆದು 3 ತಿಂಗಳು ಕಳೆದರೂ ಸಾವನ್ನಪ್ಪಿದ ವಿದ್ಯಾರ್ಥಿನಿಗೆ ನ್ಯಾಯ ಸಿಕ್ಕಿಲ್ಲ. ಅದೇ ರೀತಿ ವಿದ್ಯಾರ್ಥಿನಿಯ ಬಡ ಕುಟುಂಬಕ್ಕೆ ಪರಿಹಾರ ನೀಡುವುದಾಗಿ ರಾಜ್ಯ ಸರ್ಕಾರ ಐದು ಲಕ್ಷ ರೂಪಾಯಿ ಘೋಷಣೆ ಮಾಡಿತು. ಆದರೆ ಇದುವರೆಗೂ ಕೂಡ ಸರ್ಕಾರದಿಂದ ಸಂದಾಯ ಆಗಿಲ್ಲ. ತಲುಪಿಸಬೇಕಾದ ಪರಿಹಾರ ಆದಷ್ಟು ಬೇಗ ನೀಡಬೇಕೆಂದು ಎಸ್‌ಎಫ್‌ಐ ಆಗ್ರಹಿಸುತ್ತದೆ.

ವಿದ್ಯಾರ್ಥಿನಿಯ ಕುಟುಂಬ ಕಡು ಬಡತನದಲ್ಲಿದ್ದು ತುಂಬಾ ಸಂಕಷ್ಟ ಪರಿಸ್ಥಿತಿ ಎದುರಿಸುತ್ತಿದೆ. ಆದಕಾರಣ ವಿದ್ಯಾರ್ಥಿನಿ ಕಾವ್ಯ ಬೆನ್ನೂರ ಕುಟುಂಬದ ಸದಸ್ಯರಲ್ಲಿ ಒಬ್ಬರಿಗೆ ಸರಕಾರಿ ಉದ್ಯೋಗ ನೀಡಬೇಕು, ಕುಟುಂಬದ ಹಿತ ಕಾಪಾಡಬೇಕೇಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಹಾವೇರಿ ಜಿಲ್ಲಾ ಸಮಿತಿಯು ಮನವಿ ಮಾಡಿಕೊಳ್ಳತ್ತದೆ.ಇಂತಹ ಘಟನೆ ಮರುಕಳಿಸದಂತೆ ಅಧಿಕಾರಿಗಳು ಮುನ್ನೆಚ್ಚರಿಕೆ ಕ್ರಮ ಒದಗಿಸಬೇಕು. ಜಿಲ್ಲೆಯಲ್ಲಿ ಅನೇಕ ಹಾಸ್ಟೆಲ್ ಗಳು ಮೂಲಭೂತ ಸೌಲಭ್ಯ ಭದ್ರತೆ ಇಲ್ಲದೇ ಇರುವ ಅಂಶವನ್ನು ಎಸ್‌ಎಫ್‌ಐ ಸಂಘಟನೆ ಅಧಿಕಾರಿಗಳಿಗೆ ತಿಳಿಸುತ್ತಾ ಬರುತ್ತಿದೆ. ಆದರೆ ಅಧಿಕಾರಿಗಳ ನಿರ್ಲಕ್ಷತೆ ಮುಂದುವರೆದಿದೆ. ಎಲ್ಲ ವಿದ್ಯಾರ್ಥಿ ನಿಲಯಗಳಿಗೆ ಸೂಕ್ತ ಭದ್ರತೆ ಒದಗಿಸಲು ಮುಂದಾಗಬೇಕೇಂದು ಆಗ್ರಹಿಸಲಾಯಿತು.

ಈ ಸಂದರ್ಭದಲ್ಲಿ ಎಸ್‌ಎಫ್‌ಐ ಜಿಲ್ಲಾ ಸಹಕಾರ್ಯದರ್ಶಿ ಬಸವರಾಜ ಭೋವಿ, ಜಿಲ್ಲಾ ಉಪಾಧ್ಯಕ್ಷೆ ಜ್ಯೋತಿ ದೊಡ್ಡಮನಿ ಕುಟುಂಬ ವರ್ಗದ ಪಾಲಕರಾದ ಅಶೋಕಪ್ಪ ಬೆನ್ನೂರ, ಲಕ್ಷ್ಮವ್ವ ಬೆನ್ನೂರ, ವಿದ್ಯಾ ಬೆನ್ನೂರ, ನಿಂಗಪ್ಪ ಬೆನ್ನೂರ, ಶಿವಬಸಪ್ಪ ಕಾಟ್ಟೆನಹಳ್ಳಿ, ಬೀರಪ್ಪ ಬೆನ್ನೂರ ಇದ್ದರು.

ಎಸ್‌ಎಫ್‌ಐ 50 ನೇ ವರ್ಷದ ಆಚರಣಾ ಸಮಿತಿ

ಎಸ್.ಎಫ್.ಐ 50 ನೇ ವರ್ಷದ ಆಚರಣಾ ಸಮಿತಿ ಸಭೆಯನ್ನು ಸಮಿತಿಯ ಅಧ್ಯಕ್ಷರಾದ ಸುಪ್ರೀಂ ಕೋರ್ಟಿನ ವಿಶ್ರಾಂತ ನ್ಯಾಯಮೂರ್ತಿಗಳಾದ ಶ್ರೀ ವಿ. ಗೋಪಾಲಗೌಡ ರವರ ಅಧ್ಯಕ್ಷತೆಯಲ್ಲಿ 24/12/2019 ರಂದು ಬೆಂಗಳೂರಿನಲ್ಲಿ ನಡೆಯಿತು. ಸಭೆಯಲ್ಲಿ ಈ ಕೆಳಗಿನಂತೆ ತೀರ್ಮಾನಗಳನ್ನು ಕೈಗೊಳ್ಳಲಾಗಿದೆ.

ಕಾರ್ಯಕ್ರಮಗಳು

1. ಡಿಸೆಂಬರ್ 30, 2019 ರಂದು ಎಸ್.ಎಫ್,ಐ ಸಂಸ್ಥಾಪನಾ ದಿನಾಚರಣೆಯ ಭಾಗವಾಗಿ ವಿಚಾರ ಸಂಕಿರಣ ನಡೆಸುವ ಮೂಲಕ ಎಸ್.ಎಫ್,ಐ 50 ವರ್ಷಾಚರಣೆಗೆ ಚಾಲನೆ ನೀಡುವುದು.
2. ಜನವರಿ 11, 2020 ರಂದು ಜಿಲ್ಲಾ ಕೇಂದ್ರಗಳಲ್ಲಿ ಎಸ್.ಎಫ್.ಐ ಧ್ವಜಾರೋಹಣ ಕಾರ್ಯಕ್ರಮ ನಡೆಸುವುದು. ಎಸ್.ಎಫ್.ಐ 50 ರ ಹೆಸರಿನಲ್ಲಿ ಜಿಲ್ಲಾ ಮಟ್ಟದಲ್ಲಿ ಆಚರಣಾ ಸಮಿತಿ ರಚಿಸುವುದು.
3. ಫೆಬ್ರವರಿ 14 ರಿಂದ 16 ರವರೆಗೆ 15 ನೇ ರಾಜ್ಯ ಸಮ್ಮೇಳನವನ್ನು ಬೆಂಗಳೂರಿನ ಕೊಂಡಜ್ಜಿ ಬಸಪ್ಪ ಭವನದಲ್ಲಿ ಆಯೋಜಿಸುವುದು.
4. ಸಮ್ಮೇಳನದ ನಂತರದಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗಾಗಿ ಜಾಥಾ ಮತ್ತು ರಾಜ್ಯ ಮಟ್ಟದ ಹೋರಾಟವನ್ನು ಸಂಘಟಿಸುವುದು.
5. ಸುವರ್ಣ ಮಹೋತ್ಸವದ ಅಂಗವಾಗಿ ರಾಜ್ಯ ಮಟ್ಟದ ವಿಚಾರ ಸಂಕಿರಣ, ಸಂವಾದ, ಪ್ರಬಂಧ, ಕವಿಗೋಷ್ಠಿ, ಕ್ರೀಡಾ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವಿವಿಧ ಜಿಲ್ಲೆಗಳಲ್ಲಿ ಹಮ್ಮಿಕೊಳ್ಳುವುದು.
6. ಕರ್ನಾಟಕದಲ್ಲಿ ಎಸ್.ಎಫ್.ಐ ಚಳುವಳಿ ಬೆಳೆದು ಬಂದ ದಾರಿ, ಸಂಘಟನೆ ಮತ್ತು ಹೋರಾಟದ ಅನುಭವ ಕುರಿತು ಕಿರು ಪುಸ್ತಕಗಳನ್ನು ಹೊರತರುವುದು.
7. ನವೆಂಬರ್ ತಿಂಗಳಲ್ಲಿ ಸುವರ್ಣ ಮಹೋತ್ಸವದ ಸಮಾರೋಪವನ್ನು ಬೆಂಗಳೂರಿನಲ್ಲಿ ಆಯೋಜಿಸುವುದು.



ವೃತ್ತಿ ಪರಿಣಿತರು ಮತ್ತು ಬಂಡವಾಳವಾದ



ಪ್ರೊ.ವಿ.ಎನ್. ಲಕ್ಷ್ಮೀನಾರಾಯಣ

> **ಆಧುನಿಕ ಬಂಡವಳಿಗರು ಅಂದರೆ ಕೈಗಾರಿಕೋದ್ಯಮಿಗಳು ಮತ್ತು ವ್ಯಾಪಾರೋದ್ಯಮಿಗಳು ತಮ್ಮ ಉದ್ಯಮಗಳ ಲಾಭದಾಯಕ ಅಸ್ತಿತ್ವ ಮತ್ತು ನಿರಂತರ ವಿಸ್ತರಣೆಗಾಗಿ ಅನೇಕ ವಿಧದ ವೃತ್ತಿಪರ ಪರಿಣಿತರ ಸಹಾಯವನ್ನು ಪಡೆಯುತ್ತಾರೆ. ಅವರಲ್ಲಿ ಬಹು ಮುಖ್ಯವಾದವರು ವರ್ತನಶಾಸ್ತ್ರ ಪರಿಣಿತರು, ಕಾನೂನು ತಜ್ಞರು, ತೆರಿಗೆ ಸಲಹೆಗಾರರು, ಆರ್ಥಿಕ ತಜ್ಞರು, ಮಾರಾಟ ವ್ಯೂಹಗಳ ಪರಿಣಿತರು, ಮತ್ತು ಮಾನವ ಸಂಪನ್ಮೂಲವನ್ನು ಗರಿಷ್ಠ ಮಟ್ಟದಲ್ಲಿ ಬಳಸಿಕೊಳ್ಳಲು ಸಹಾಯ ಮಾಡುವ ವ್ಯವಸ್ಥಾಪಕ ತಜ್ಞರು.**
> **ಮನೋವಿಜ್ಞಾನದ ಪ್ರಮುಖ ಆಧುನಿಕ ಶಾಖೆಯಾದ ವರ್ತನಶಾಸ್ತ್ರದ ಪರಿಣಿತರಲ್ಲಿ ಎರಡು ಬಗೆ. ಒಂದು: ಮಾನವ ಸಂಪನ್ಮೂಲವನ್ನು ವ್ಯರ್ಥಮಾಡದೆ, ಕಾರ್ಮಿಕ ಮತ್ತು ವ್ಯವಸ್ಥಾಪಕ ಸಿಬ್ಬಂದಿಯಿಂದ ಗರಿಷ್ಠ ಕೆಲಸ ತೆಗೆಯುವುದು ಹೇಗೆಂಬ ಬಗ್ಗೆ ಇವರು ಸಂಸ್ಥೆಗೆ ಸಲಹೆ- ಸೂಚನೆಗಳನ್ನು ಕೊಡುತ್ತಾರೆ. ಆಗಿಂದಾಗ್ಗೆ ಸಾಂಸ್ಕೃತಿಕ ಮತ್ತು ಸಮ್ಮತಿ ಉತ್ತೇಜಕ ವರ್ತನ ವಿಧಾನಗಳ ಕಾರ್ಯಾಗಾರಗಳನ್ನು ನಡೆಸಿ ಕಾರ್ಮಿಕರು ಮತ್ತು ವ್ಯವಸ್ಥಾಪಕ ಸಿಬ್ಬಂದಿಯ ಪ್ರತಿಭಟನಾ ಮನಸ್ಥಿತಿಯನ್ನು ಮೊಳಕೆಯಲ್ಲೇ ಶಮನಗೊಳಿಸಿ ನಿಯಂತ್ರಿಸುತ್ತಾರೆ. ಎರಡು: ಮಾರುಕಟ್ಟೆಯಲ್ಲಿನ ಗಿರಾಕಿಗಳು ಮತ್ತು ಬಳಕೆದಾರರ ಮನಸ್ಸನ್ನು ಸಂಸ್ಥೆಯ ಉತ್ಪಾನೆಗಳತ್ತ ಒಲಿಸಿಕೊಳ್ಳಲು ಬೇಕಾದುದೇನು ಎಂಬುದನ್ನು ಸಮೀಕ್ಷೆಗಳ ಮೂಲಕ ಅಭ್ಯಸಿಸಿ, ವ್ಯೂಹಾತ್ಮಕವಾದ ಜಾಹಿರಾತುಗಳನ್ನು, ವ್ಯಾಪಾರೀ ತಂತ್ರಗಳನ್ನು ಇವರು ರೂಪಿಸುತ್ತಾರೆ.**

ಜೀವನಾಗತ್ಯ ವಸ್ತುಗಳು, ಸಾಧನಗಳು ಮತ್ತು ಮಾಹಿತಿ-ಜ್ಞಾನ ಇತ್ಯಾದಿಗಳನ್ನು ಹಣದ ಮೂಲಕ ವಿನಿಮಯಮಾಡುವ ವ್ಯವಸ್ಥೆಯಾದ ವ್ಯಾಪಾರವು ಬಂಡವಾಳಶಾಹಿ ಮಾರುಕಟ್ಟೆಯ ದೇಹ. ಹಣ ಅದರಲ್ಲಿ ಪ್ರವಹಿಸುವ ರಕ್ತ. ಶ್ರಮಿಕರ ಶ್ರಮಶಕ್ತಿ ಅದಕ್ಕೆ ಜೀವ ಕೊಡುವ ಚೈತನ್ಯ. ಲಾಭಗಳಿಕೆ ಮಾರುಕಟ್ಟೆಯ ಅಂತರಾಳ.

ಬಂಡವಾಳ ಎನ್ನುವುದು ಸಂಚಿತ ಶ್ರಮ. ಅದಕ್ಕೆ ಜೀವವಿಲ್ಲ. ಶ್ರಮಿಕರ ಸಜೀವಶ್ರಮವನ್ನು ಬಂಡವಾಳಕ್ಕೆ ಸೇರಿಸಿದರೆ ಮಾತ್ರ ಅದಕ್ಕೆ ಜೀವ ಬರುತ್ತದೆ. ಹೀಗೆ ಜೀವಪಡೆದ ಬಂಡವಾಳದ ಸಾಕಾರ ರೂಪವೇ ಬಂಡವಳಿಗ. ಶ್ರಮಿಕರು ತಮ್ಮ ಜೀವ ಬಸಿದು ಹರಿಸುವ ಸಜೀವ ಶ್ರಮದಿಂದ ವಸ್ತುಗಳ ಮೌಲ್ಯವನ್ನು ಸೃಷ್ಟಿಸದಿದ್ದರೆ, ಬಂಡವಾಳವು ಬೆಳೆಯುವುದು ಸಾಧ್ಯವೇ ಇಲ್ಲ. ಬಂಡವಾಳವು ಬೆಳೆಯುವುದೆಂದರೆ ಶ್ರಮಿಕರಿಂದ ಬಿಟ್ಟಿ ಶ್ರಮವನ್ನು ಅಥವಾ ಮಿಗುತಾಯ ಶ್ರಮವನ್ನು ಪಡೆಯುವುದು ಅಂದರೆ ಶೋಷಿಸುವುದು. ಬಂಡವಾಳ ಬೆಳೆಯದೆ ಬಂಡವಳಿಗ ಬೆಳೆಯಲಾರ.

ಮಿಗುತಾಯ ಮೌಲ್ಯದ ಮೂರು ರೂಪಗಳು, ಬಾಡಿಗೆ, ಲಾಭ ಮತ್ತು ಬಡ್ಡಿ. ಭೂಮಿ, ವಿವಿಧ ಸಾಧನಗಳು ಮತ್ತು ಜ್ಞಾನದ ಬಳಕೆಗಾಗಿ ಅವುಗಳ



ಮಾಲೀಕನಿಗೆ ಕೊಡುವುದು ಬಾಡಿಗೆ. ಉದಾಹರಣೆಗೆ, ಗೇಣಿ, ಕಟ್ಟಡದ ಬಾಡಿಗೆ, ಯಂತ್ರಗಳ ಬಾಡಿಗೆ ಮತ್ತು, ಕಂಪ್ಯೂಟರ್, ಟಿವಿ ಮುಂತಾದ ಡಿಜಿಟಲ್ ಸಾಧನಗಳನ್ನು ಬಳಸಲು ಸಾಫ್ಟ್‌ವೇರ್‌ಗಳಿಗಾಗಿ ಕೊಡುವ ಹಣ. ವಸ್ತುಗಳ ವ್ಯಾಪಾರದಲ್ಲಿ, ಅಂದರೆ ಹಣದ ಮೂಲಕ ನಡೆಯುವ ಸರಕುಗಳ ವಿನಿಮಯದಲ್ಲಿ ವ್ಯಾಪಾರಿಗಳು ಪಡೆಯುವ ಹೆಚ್ಚುವರಿ ಹಣವೇ ಲಾಭ. ಬ್ಯಾಂಕಿಂಗ್ ಅಥವಾ ಲೇವಾದೇವಿಯ ವಹಿವಾಟಿನಲ್ಲಿ ಪಡೆಯುವ ಹೆಚ್ಚಿನ ಹಣವೇ ಬಡ್ಡಿ. ಬಡ್ಡಿವ್ಯಾಪಾರವು ಹಣವನ್ನೇ ಸರಕನ್ನಾಗಿಸಿ ನಡೆಸುವ ವ್ಯಾಪಾರ.

ಆಧುನಿಕ ಬಂಡವಳಿಗರು ಅಂದರೆ ಕೈಗಾರಿಕೋದ್ಯಮಿಗಳು ಮತ್ತು ವ್ಯಾಪಾರೋದ್ಯಮಿಗಳು ತಮ್ಮ ಉದ್ಯಮಗಳ ಲಾಭದಾಯಕ ಅಸ್ತಿತ್ವ ಮತ್ತು ನಿರಂತರ ವಿಸ್ತರಣೆಗಾಗಿ ಅನೇಕ ವಿಧದ ವೃತ್ತಿಪರ ಪರಿಣಿತರ ಸಹಾಯವನ್ನು ಪಡೆಯುತ್ತಾರೆ. ಅವರಲ್ಲಿ ಬಹು ಮುಖ್ಯವಾದವರು ವರ್ತನಶಾಸ್ತ್ರ ಪರಿಣಿತರು, ಕಾನೂನು ತಜ್ಞರು, ತೆರಿಗೆ ಸಲಹೆಗಾರರು, ಆರ್ಥಿಕ ತಜ್ಞರು, ಮಾರಾಟ ವ್ಯೂಹಗಳ ಪರಿಣಿತರು, ಮತ್ತು ಮಾನವ ಸಂಪನ್ಮೂಲವನ್ನು ಗರಿಷ್ಠ ಮಟ್ಟದಲ್ಲಿ ಬಳಸಿಕೊಳ್ಳಲು ಸಹಾಯ ಮಾಡುವ ವ್ಯವಸ್ಥಾಪಕ ತಜ್ಞರು. ಈ ಎಲ್ಲ ಪರಿಣಿತರನ್ನು ಸಂಘಟಿಸಿ ತಮ್ಮ ಉದ್ಯಮ ಮತ್ತು ವ್ಯಾಪಾರೀ ಸಂಸ್ಥೆಗೆ ವರ್ಷ ವರ್ಷವೂ ಹೆಚ್ಚಿನ ಲಾಭ ಬರುವಂತೆ ನೋಡಿಕೊಳ್ಳಬಲ್ಲ ಮೇಲ್ವಿಚಾರಕರನ್ನು ಬಂಡವಳಿಗರು ಲಕ್ಷಗಟ್ಟಲೆ ಸಂಬಳಕೊಟ್ಟು ನೇಮಿಸಿಕೊಳ್ಳುತ್ತಾರೆ.

ಒಂದು ಉದ್ಯಮ ಸಮೂಹ ಅಥವಾ ವ್ಯಾಪಾರೀ ಸಂಸ್ಥೆಗಳ ಕೂಟದ ನೈತಿಕವಲ್ಲದ ಎಷ್ಟೋ ವಹಿವಾಟುಗಳಿಗೆ ದೇಶದ ಕಾನೂನಿನ ಚೌಕಟ್ಟನ್ನು ಹೊಂದಿಸಿಕೊಡುವುದು, ಅಥವಾ ಕಾನೂನಿನ ಕಣ್ಣಿಗೆ ಮಣ್ಣೆರಚಿ ಲಾಭ ಮಾಡಿಕೊಳ್ಳುವುದು, ತೆರಿಗೆಯಿಂದ ತಪ್ಪಿಸಿಕೊಳ್ಳುವುದು, ಅಧಿಕಾರಿಗಳಿಗೆ ಲಂಚಕೊಟ್ಟು ತೆರಿಗೆ ಭಾರವನ್ನು ಕಡಿಮೆಮಾಡಿಕೊಳ್ಳುವುದು ಹೇಗೆಂಬ ಬಗ್ಗೆ ತಮ್ಮ ಕಕ್ಷಿದಾರ ಸಂಸ್ಥೆಗೆ ಹೇಳಿಕೊಡುವುದು, ಕಾನೂನು ತಜ್ಞರ ಕೆಲಸ. ಅಕಸ್ಮಾತ್ ಸಿಕ್ಕಿ ಹಾಕಿಕೊಂಡರೆ ಸಂಬಂಧಿಸಿದ ನ್ಯಾಯಾಲಯದಲ್ಲಿ ತಮ್ಮ ಕಕ್ಷಿದಾರರ ಪರವಾಗಿ ವಾದಮಂಡಿಸಿ ಗೆಲ್ಲಿಸುವುದೂ ಇವರ ಕೆಲಸವೇ. ಬಂಡವಳಿಗ-ಕಾರ್ಮಿಕರ ನಡುವಿನ ಮಾತುಕತೆಗಳಲ್ಲಿ ಬಂಡವಳಿಗರ ಪರವಾಗಿ ಪಾಲ್ಗೊಳ್ಳುವುದು, ವಿವಾದಗಳು ನ್ಯಾಯಾಲಯದಲ್ಲಿ ಬಗೆಹರಿಯಬೇಕಾದ ಬಂಡವಳಿಗರ ಪರ ವಾದ ಮಂಡಿಸುವುದು ಈ ಕಾನೂನು ತಜ್ಞರು ಸಂಸ್ಥೆಗೆ ಒದಗಿಸುವ ಸೇವೆ. ಬಂಡವಳಿಗರು ಸಾರ್ವಜನಿಕರಿಗಾಗಿ ರಚಿಸುವ ನಿಯಮಾವಳಿಗಳಲ್ಲಿ ಯಾವ ನಿಬಂಧನೆಗಳನ್ನು 'ಸಣ್ಣಕ್ಷರ'ಗಳಲ್ಲಿ ನಮೂದಿಸಬೇಕೆಂದು ಹೇಳಿಕೊಡುವವರೂ ಇವರೇ.


ಮನೋವಿಜ್ಞಾನದ ಪ್ರಮುಖ ಆಧುನಿಕ ಶಾಖೆಯಾದ ವರ್ತನಶಾಸ್ತ್ರದ ಪರಿಣಿತರಲ್ಲಿ ಎರಡು ಬಗೆ. ಒಂದು: ಮಾನವ ಸಂಪನ್ಮೂಲವನ್ನು ವ್ಯರ್ಥಮಾಡದೆ, ಕಾರ್ಮಿಕ ಮತ್ತು ವ್ಯವಸ್ಥಾಪಕ ಸಿಬ್ಬಂದಿಯಿಂದ ಗರಿಷ್ಠ ಕೆಲಸ ತೆಗೆಯುವುದು ಹೇಗೆಂಬ ಬಗ್ಗೆ ಇವರು ಸಂಸ್ಥೆಗೆ ಸಲಹೆ- ಸೂಚನೆಗಳನ್ನು ಕೊಡುತ್ತಾರೆ. ಆಗಿಂದಾಗ್ಗೆ ಸಾಂಸ್ಕೃತಿಕ ಮತ್ತು ಸಮ್ಮತಿ ಉತ್ತೇಜಕ ವರ್ತನ ವಿಧಾನಗಳ ಕಾರ್ಯಾಗಾರಗಳನ್ನು ನಡೆಸಿ ಕಾರ್ಮಿಕರು ಮತ್ತು ವ್ಯವಸ್ಥಾಪಕ ಸಿಬ್ಬಂದಿಯ ಪ್ರತಿಭಟನಾ ಮನಸ್ಥಿತಿಯನ್ನು ಮೊಳಕೆಯಲ್ಲೇ ಶಮನಗೊಳಿಸಿ ನಿಯಂತ್ರಿಸುತ್ತಾರೆ. ಎರಡು: ಮಾರುಕಟ್ಟೆಯಲ್ಲಿನ ಗಿರಾಕಿಗಳು ಮತ್ತು ಬಳಕೆದಾರರ ಮನಸ್ಸನ್ನು ಸಂಸ್ಥೆಯ ಉತ್ಪಾನೆಗಳತ್ತ ಒಲಿಸಿಕೊಳ್ಳಲು ಬೇಕಾದುದೇನು ಎಂಬುದನ್ನು ಸಮೀಕ್ಷೆಗಳ ಮೂಲಕ ಅಭ್ಯಸಿಸಿ, ವ್ಯೂಹಾತ್ಮಕವಾದ ಜಾಹಿರಾತುಗಳನ್ನು, ವ್ಯಾಪಾರೀ ತಂತ್ರಗಳನ್ನು ಇವರು ರೂಪಿಸುತ್ತಾರೆ.

ಎರಡನೆಯ ಬಗೆಯ ವರ್ತನಶಾಸ್ತ್ರ ಪರಿಣಿತರು, ಸಂಸ್ಥೆಯ ಸರಕುಗಳಿಗೆ ಗಿರಾಕಿಗಳು ಮತ್ತು ಬಳಕೆದಾರರರನ್ನು ಆಕರ್ಷಿಸುವುದು ಮತ್ತು ಅವರಲ್ಲಿ ಸಮ್ಮತಿಯ ಮನಸ್ಥಿತಿಯನ್ನು ರೂಪಿಸಿ ಉತ್ತೇಜಿಸುವ ಕಾರ್ಯದಲ್ಲಿ ಆರ್ಥಿಕತಜ್ಞರು ಮತ್ತು ಮಾರಾಟವ್ಯೂಹ ಪರಿಣಿತರೊಂದಿಗೆ ಕೈಜೋಡಿಸಿ ಕೆಲಸಮಾಡುತ್ತಾರೆ, ಹೀಗಾಗಿ ವರ್ತನಶಾಸ್ತ್ರವು ಆಧುನಿಕ ಅರ್ಥಶಾಸ್ತ್ರದ ಒಂದು ಮುಖ್ಯ ಶಾಖೆಯಾಗಿ ಕೆಲಸ ಮಾಡುವಷ್ಟು ದೊಡ್ಡದಾಗಿ ಬೆಳೆದಿದೆ. ಇಂದಿನ ಡಿಜಿಟಲ್ ಯುಗದ ಬಂಡವಾಳವಾದ ಮತ್ತು ಮಾರುಕಟ್ಟೆ ಆರ್ಥಿಕತೆಯು ಮಾಹಿತಿ ತಂತ್ರಜ್ಞಾನ, ಆಲ್ಗೊರಿದಮ್ ತಂತ್ರಭಾಷೆ ಮತ್ತು ಜಾಗತೀಕರಣವು ಕೊಡಮಾಡಿರುವ ಅಗಾಧರೀತಿಯ ಸೌಲಭ್ಯಗಳನ್ನು ಕೋಟಿಗಟ್ಟಲೆ ಲಾಭಗಳಿಸಲು ಬಳಸುವುದರಿಂದ ವರ್ತನಶಾಸ್ತ್ರೀಯ ಅರ್ಥಶಾಸ್ತ್ರವು ಡಿಜಿಟಲ್ ಮಾರುಕಟ್ಟೆಯ ಎಲ್ಲ ಅಂಗಗಳನ್ನೂ ವ್ಯಾಪಿಸಿಬಿಟ್ಟಿದೆ.

ಹಿಂದಿನ ಎಲ್ಲ ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಗಳಿಗಿಂತಲೂ ಕ್ರಾಂತಿಕಾರಕವಾಗಿ ಭಿನ್ನವಾದ ಬಂಡವಾಳಶಾಹಿ ವ್ಯವಸ್ಥೆಯು ತನ್ನ ಉತ್ಪಾದನಾ ಸಂಬಂಧಗಳಲ್ಲಿನ ಅಮಾನುಷತೆ, ಕ್ರೌರ್ಯ ಹಾಗೂ ಹಿಂಸಾತ್ಮಕತೆಗಳನ್ನು ಹುಸಿಪ್ರಜಾಪ್ರಭುತ್ವ, ಅಮೂರ್ತರೂಪದ ಮಾನವಹಕ್ಕುಗಳು, ಅಮೂರ್ತರೂಪದ ಆಸ್ತಿಹಕ್ಕುಗಳು, ಸಂವಿಧಾನ, ಶಾಂತಿ, ಕಾನೂನಾತ್ಮಕನ್ಯಾಯ, ವೃತ್ತಿಪರತೆಯ ಪಾವಿತ್ರ್ಯ ಮುಂತಾದ ಬಂಡವಳಿಗರ ಪರವಾದ ಅಥವಾ ಬಂಡವಳಿಗರ ಜೀವನಕ್ರಮಕ್ಕೆ ಚ್ಯುತಿಬರದಂಥ ಪರಿಕಲ್ಪನೆಗಳ ಮೂಲಕ ಮರೆಮಾಚುತ್ತದೆ. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ, ಸಾಮಾಜಿಕ ನ್ಯಾಯ, ಶೋಷಣಾರಹಿತ ಸಂಬಂಧ, ಮಾನವೀಯತೆ ಮುಂತಾದ ಆದರ್ಶಗಳನ್ನು ಜನಸಾಮಾನ್ಯರ ದೈನಂದಿನ ಜೀವನದ ಸಂದರ್ಭಗಳಲ್ಲಿ ಅನುಷ್ಠಾನಗೊಳಿಸುವ ಯತ್ನಗಳು ನಡೆದಾಗಲೆಲ್ಲಾ ಶಾಂತಿ, ಅಹಿಂಸೆ, ಉದಾರವಾದ, ಕಾನೂನುಬದ್ಧತೆ, ನಾಗರಿಕ ಸುವ್ಯವಸ್ಥೆ, ಮುಂತಾದ ಏಕಮುಖವಾದ ಸ್ವರಕ್ಷಣಾತ್ಮಕ ಪರಿಕಲ್ಪನೆಗಳನ್ನು ಬಳಸಿ ತನ್ನ ಅಸ್ತಿತ್ವ ಮತ್ತು ಹಿತಾಸಕ್ತಿಗಳನ್ನು ಕಾಯ್ದುಕೊಳ್ಳಲು ಯತ್ನಿಸುತ್ತದೆ. ಜನಸಾಮಾನ್ಯರ ಆಗ್ರಹಗಳು ಈ ಎಲ್ಲಾ ಯತ್ನಗಳನ್ನೂ ಮೀರಿ ತೀವ್ರವಾದಾಗ ಪೋಲೀಸು, ಸೈನ್ಯ ಮತ್ತು ಜನಾಂಗೀಯ ಹತ್ಯೆಗಳ ಮೂಲಕ ತನ್ನ ಕ್ರೌರ್ಯ, ಹಿಂಸಾತ್ಮಕತೆ ಮತ್ತು ಅಮಾನುಷತೆ, ಅನಾಗರಿಕತೆಗಳ ನಗ್ನ ಮುಖವನ್ನು ತೋರಿಸುತ್ತದೆ.

ಬಂಡವಳಿಗರು ಮತ್ತು ತಮ್ಮ ಅಸ್ತಿತ್ವ ಮತ್ತು ಲಾಭಗಳಿಕೆಗಾಗಿ ಅಮಾನುಷರಾಗುವುದು ಅವರ ವ್ಯಕ್ತಿತ್ವದಲ್ಲಿನ ರಾಕ್ಷಸತನದಿಂದಾಗೋ ಅಥವಾ ಅವರೇ ಸೃಷ್ಟಿಸಿಕೊಂಡ ರಾಕ್ಷಸ ವ್ಯವಸ್ಥೆಯು ಅವರ ಕುತ್ತಿಗೆ ಹಿಡಿದು ಅವರನ್ನು ಅಮಾನುಷರನ್ನಾಗಿ ಮಾಡುತ್ತದೆಯೋ ಎಂಬ ಪ್ರಶ್ನೆಗೆ ವಿವರವಾದ ಉತ್ತರ ಪಡೆಯಲು ಮತ್ತೆ ವರ್ತನಶಾಸ್ತ್ರದ ಮೊರೆಹೋಗಬೇಕು. ನೈತಿಕವಾದಿಗಳು ಮನುಷ್ಯನಲ್ಲೇ ಅಂತರ್ಗತವಾಗಿರುವ ದುರಾಸೆಯೇ ವ್ಯವಸ್ಥೆಯಲ್ಲಿನ ರಾಕ್ಷಸತನಕ್ಕೆ ಕಾರಣವೆಂದೂ, ಮನುಷ್ಯರು ನೀತಿವಂತರಾದರೆ, ನೈತಿಕ ಮೌಲ್ಯಗಳನ್ನು ಅಳವಡಿಸಿಕೊಂಡರೆ ವ್ಯವಸ್ಥೆಯು ತಾನೇ ತಾನಾಗಿ ಬದಲಾಗುತ್ತದೆಯೆಂದು ನಂಬುತ್ತಾರೆ ಮತ್ತು ಹಾಗೆಂದು ಪ್ರಚಾರ ಮಾಡುತ್ತಾರೆ. ಆದರೆ ಮನುಷ್ಯರೆಲ್ಲರಲ್ಲದಿದ್ದರೂ ಕೆಲವರಾದರೂ ಯಾಕೆ ಕ್ರೌರ್ಯ, ಅಮಾನುಷತೆ ಮತ್ತು ದುರಾಸೆಗಳನ್ನು ಯಾಕೆ ಅಂತರ್ಗತಮಾಡಿಕೊಂಡಿದ್ದಾರೆಂಬ ಪ್ರಶ್ನೆ ಹಾಗೆಯೇ ಉಳಿಯುತ್ತದೆ. ಅಂಥ ವ್ಯಕ್ತಿಗಳೇ ಬಂಡವಳಿಗರಾಗಿ ವ್ಯವಸ್ಥೆಯನ್ನು ತಮ್ಮ ಕೈಲಿಟ್ಟುಕೊಂಡು ಇಡೀ ಸಮಾಜವನ್ನೇ ನರಳಿಸುತ್ತಿದ್ದಾರೋ ಅಥವಾ ಶ್ರಮಸಂಬಂಧಗಳಿಂದಾಗಿ ಕಲವೇ ವ್ಯಕ್ತಿಗಳು ರಾಕ್ಷಸರಾಗಿದ್ದಾರೋ ಎಂಬ ಪ್ರಶ್ನೆಯನ್ನು ವರ್ತನಶಾಸ್ತ್ರದ ಅಥವಾ ಯಾವುದೇ ವೃತ್ತಿ ಪರಿಣಿತರು ಬಗೆಹರಿಸಬಲ್ಲರೆ?

ಮಾರ್ಕ್ಸ್ ಮತ್ತು ಎಂಗೆಲ್ಸ್ ಕಮ್ಯುನಿಸ್ಟ್ ಪ್ರಣಾಳಿಕೆಯಲ್ಲಿ ಮಂತ್ರವಾದಿಯು ಸೃಷ್ಟಿಸಿದ ರಾಕ್ಷಸನು ಮಂತ್ರವಾದಿಯ ಕೊರಳನ್ನೇ ಹಿಚುಕುವಂತೆ ಬಂಡವಾಳವು ಜಾಗತಿಕವಾಗಿ ಬೆಳೆದಿದೆ ಎಂಬರ್ಥ ಬರುವಂತೆ ಹೇಳುತ್ತಾರೆ. ಈಗ ಆಗಿರುವುದು ಅದೇ ಅಲ್ಲವೆ? ●











ಸರ್ವಾಧಿಕಾರಶಾಹಿಗೆ ಎದುರಾಗಿ ಪ್ರತಿಭಟನೆ, ಪ್ರತಿರೋಧದ ಉಬ್ಬರ

ಸಂಸತ್ತು ಪೌರತ್ವ (ತಿದ್ದುಪಡಿ) ಮಸೂದೆಯನ್ನು ಅಂಗೀಕರಿಸಿದ ಎರಡು ವಾರಗಳಲ್ಲಿ ಭಾರತದ ಇತ್ತೀಚಿನ ರಾಜಕೀಯ ಇತಿಹಾಸದಲ್ಲಿನ ಒಂದು ಮಹತ್ವದ ಕ್ಷಣವನ್ನು ಕಾಣುತ್ತಿದ್ದೇವೆ. ಇದು ಎರಡು ಪರಸ್ಪರ ಸಂಬಂಧಿಸಿರುವ, ಆದರೆ ತದ್ವಿರುದ್ಧ ಸ್ವರೂಪದ ಆಯಾಮಗಳನ್ನು ಪ್ರಕಟಪಡಿಸಿದೆ. ಮೊದಲನೆಯದೆಂದರೆ, ಮೋದಿ ಸರಕಾರ ಒಂದು ಪೂರ್ಣ ಪ್ರಮಾಣದ ಸರ್ವಾಧಿಕಾರಶಾಹಿ ಆಳ್ವಿಕೆಯಾಗಿ ಎದ್ದು ಬಂದಿದೆ. ಎರಡನೇ ಆಯಾಮವೆಂದರೆ, ಸಿಎಎ ಮತ್ತು ಎನ್‌ಸಿಆರ್ ವಿರುದ್ಧ ದೇಶವ್ಯಾಪಿ ಪ್ರತಿಭಟನೆಗಳು. ಇವು ಜಾತ್ಯತೀತ ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಮೇಲಿನ ದಾಳಿಗಳಿಗೆ ಪ್ರತಿರೋಧ ಎದ್ದು ಬರುತ್ತಿದೆ ಎಂಬುದನ್ನು ತೋರಿಸುತ್ತಿವೆ.

ಕೇಂದ್ರದಲ್ಲಿನ ಮೋದಿ ಸರಕಾರ ಮತ್ತು ಬಿಜೆಪಿ ಆಳ್ವಿಕೆಯ ರಾಜ್ಯಗಳು ನಾಗರಿಕರ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ, ಸಭೆ ಸೇರುವ, ಶಾಂತಿಯುತವಾಗಿ ಪ್ರತಿಭಟಿಸುವ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕುಗಳ ಮೇಲೆ ಒಂದು ನೇರ ದಾಳಿಯನ್ನು ಹರಿಯ ಬಿಟ್ಟಿವೆ. ನಾಲ್ಕಕ್ಕಿಂತ ಹೆಚ್ಚು ವ್ಯಕ್ತಿಗಳು ಸಭೆ ಸೇರುವುದನ್ನು ನಿಷೇಧಿಸುವ ದಂಡ ಸಂಹಿತೆಯ ಸೆಕ್ಷನ್ 144ನ್ನು ಬಿಜೆಪಿ ನಡೆಸುವ ಎಲ್ಲ ರಾಜ್ಯಗಳಲ್ಲಿ ಮತ್ತು ಕೇಂದ್ರದ ಕೈಯಲ್ಲಿ ಪೋಲೀಸ್ ಮತ್ತು ಕಾನೂನುವ್ಯವಸ್ಥೆ ಇರುವ ದಿಲ್ಲಿಯಲ್ಲಿ ವ್ಯಾಪಕವಾಗಿ ಬಳಸಲಾಗಿದೆ. ಇದರ ಅತ್ಯಂತ ಉಗ್ರ ಸ್ವರೂಪವು ಉತ್ತರಪ್ರದೇಶದಲ್ಲಿ ಕಾಣ ಬಂದಿದೆ. ಅಲ್ಲಿ ಇಡೀ ರಾಜ್ಯದಲ್ಲಿ ನಿಷೇಧಾಜ್ಞೆಯನ್ನು ಹಾಕಲಾಗಿದೆ.

ದಂಡ ವಿಧಾನ ಸಂಹಿತೆಯಲ್ಲಿ ಪುನರುಜ್ಜೀವನಗೊಳಿಸಿರುವ ವಸಾಹತುಶಾಹೀ ಕಾಲದ ಸೆಕ್ಷನ್ 144ರ ಈ ತೆರನ ಬಳಕೆ ಸಂವಿಧಾನಿಕವಾಗಿ ಮಂಜೂರಾಗಿರುವ ಪ್ರತಿಭಟನೆಯ ಹಕ್ಕನ್ನು ಹಾಸ್ಯಾಸ್ಪದಗೊಳಿಸಿದೆ.

ಸೆಕ್ಷನ್ 144ನ್ನು ಮನಬಂದಂತೆ ಬಳಸುವುದರ ಜೊತೆಗೆ ಇಂಟರ್ನೆಟ್‌ನ್ನು ಸ್ಥಗಿತಗೊಳಿಸುವ ಕೆಲಸಕ್ಕೆ ಆಡಳಿತ ಕೈಹಾಕಿದೆ. ಅಸ್ಸಾಂನಲ್ಲಿ ಒಂಭತ್ತು ದಿನಗಳ ಕಾಲ ಅದನ್ನು ಸ್ಥಗಿತಗೊಳಿಸಲಾಯಿತು, ಹೈಕೋರ್ಟ್ ಅದನ್ನು ಮೊದಲಿನ ಸ್ಥಿತಿಗೆ ತರಬೇಕು ಎಂದು ಆದೇಶ ನೀಡಿದ ಮೇಲೆ ಸ್ಥಗಿತದ ಕ್ರಮವನ್ನು ತೆಗೆಯಲಾಯಿತು. ಇದು ಕಾಶ್ಮೀರದಲ್ಲಿ ನಾಲ್ಕು ತಿಂಗಳಿಗೂ ಹೆಚ್ಚು ಕಾಲದ ಅತ್ಯಂತ ದೀರ್ಘವಾದ, ಅಂತರ್‍ರಾಷ್ಟ್ರೀಯ ದಾಖಲೆಯನ್ನೇ ನಿರ್ಮಿಸಿದ ಇಂಟರ್ನೆಟ್ ಸ್ಥಗಿತದ ಹಿನ್ನೆಲೆಯಲ್ಲಿ ಬಂದಿತ್ತು.

ಅತ್ಯಂತ ಪಾಶವೀ ಪ್ರಭುತ್ವ ದಮನ ಉತ್ತರಪ್ರದೇಶದಲ್ಲಿ ನಡೆಯುತ್ತಿದೆ. ಪೋಲೀಸ್ ಗೋಲೀಬಾರಿನಲ್ಲಿ ಇದುವರೆಗೆ 20 ಮಂದಿ ಸತ್ತಿದ್ದಾರೆ, ಹತ್ತಾರು ಜನಗಳು ಗಾಯಗೊಂಡಿದ್ದಾರೆ. ಆದರೂ ಪೋಲೀಸ್ ಬುಲೆಟ್‌ಗಳಿಂದ ಯಾರೊಬ್ಬರೂ ಸತ್ತಿಲ್ಲ ಎಂದು ಹೇಳುತ್ತಿದ್ದಾರೆ. ಮರಣೋತ್ತರ ಪರೀಕ್ಷೆಯ ವರದಿಗಳನ್ನು ದಮನಿಸಿಡಲಾಗಿದೆ. ನಂತರ ಒಂದು ಕೇಸಿನಲ್ಲಿ ಮಾತ್ರವೇ ಪೋಲೀಸ್ ಅಧಿಕಾರಿ 'ಆತ್ಮರಕ್ಷಣೆ'ಗೆ ಗುಂಡು ಹಾರಿಸಿದಾಗ ಒಬ್ಬ ಸತ್ತಿದ್ದಾನೆ ಎಂದು ಒಪ್ಪಿಕೊಂಡಿದ್ದಾರೆ. ಮುಖ್ಯಮಂತ್ರಿ ಆದಿತ್ಯನಾಥ 'ಬದ್ಲಾ' ಅಂದರೆ ಪ್ರತೀಕಾರದ ಕರೆ ನೀಡಿದ್ದಾರೆ, ಸಾರ್ವಜನಿಕ ಆಸ್ತಿಗಳ ನಾಶಕ್ಕೆ ಹೊಣೆಯಾದವರು ಅದರ ವೆಚ್ಚವನ್ನು ತೆರುವಂತೆ ಮಾಡಲಾಗುವುದು ಎಂದಿದ್ದಾರೆ. ಈ ಪ್ರಕಟಣೆ ಅಲ್ಪಸಂಖ್ಯಾತ ಸಮುದಾಯದ ಮೇಲೆ ಪೋಲೀಸ್ ದಮನವನ್ನು ತೀವ್ರಗೊಳಿಸಿದೆ, ದಂಡ ತೆರಲು ನೋಟೀಸುಗಳನ್ನು ಕೊಡುವ ಪ್ರಕ್ರಿಯೆ ಆರಂಭವಾಗಿದೆ. ಉದಾಹರಣೆಗೆ, ರಾಂಪುರ ಜಿಲ್ಲೆಯಲ್ಲಿ 28 ಜನರಿಗೆ 14 ಲಕ್ಷ ರೂ. ಗಳನ್ನು ತೆರಬೇಕೆಂದು ಹೇಳಲಾಗಿದೆ. ಇದು ಬ್ರಿಟಿಶರು ಪಂಜಾಬಿನಲ್ಲಿ ರೌಲಟ್ ಕಾಯ್ದೆಯನ್ನು ತಂದ ಮೇಲೆ ನಡೆಸಿದ ಅತ್ಯಾಚಾರಗಳನ್ನು ನೆನಪಿಸುತ್ತಿದೆ.

ಅಭಿವ್ಯಕ್ತಿ ಸ್ವಾತಂತ್ರ್ಯದ ಮತ್ತು ಭಿನ್ನಮತ ವ್ಯಕ್ತಪಡಿಸುವ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಕೆಲಸ ವ್ಯಾಪಕವಾಗಿ ನಡೆಯುತ್ತಿದೆ. ಸಿಎಎ ಮತ್ತು ಎನ್‌ಆರ್‌ಸಿ ವಿರುದ್ಧ ಸಾಮಾಜಿಕ ಮಾಧ್ಯಮಗಳಲ್ಲಿ ಬರೆದವರ ಮೇಲೆ ಕೇಸು ದಾಖಲಿಸಲಾಗುತ್ತಿದೆ; ಸಿಎಎ ವಿರುದ್ಧ ಒಂದು ಪ್ರತಿಭಟನಾ ಸಭೆಯ ವಿಷಯವನ್ನು ಹಂಚಿಕೊಂಡದ್ದಕ್ಕೆ ಒಬ್ಬ ವಿದ್ಯಾರ್ಥಿಯನ್ನು ಆತನ ಕಾಲೇಜಿನಿಂದ ತೆಗೆದು ಹಾಕಲಾಗಿದೆ; ಸುದ್ದಿ ಮತ್ತು ಪ್ರಸಾರ ಇಲಾಖೆ ತುರ್ತು ಪರಿಸ್ಥಿತಿಯನ್ನು ನೆನಪಿಸುವ ಎರಡು 'ಸಲಹಾ ಆದೇಶ'ಗಳನ್ನು ಸುದ್ದಿ ವಾಹಿನಿಗಳಿಗೆ ಕೊಟ್ಟಿದೆ. ಮಾಧ್ಯಮಗಳು ಹಿಂಸಾಚಾರವನ್ನು ಪ್ರಚೋದಿಸಬಹುದಾದ ಅಥವ ಒಂದು ರಾಷ್ಟ್ರ-ವಿರೋಧಿ ನಿಲುವನ್ನು ಪ್ರೋತ್ಸಾಹಿಸಬಹುದಾದ ಸುದ್ದಿಗಳನ್ನು ಬಿತ್ತರಿಸಬಾರದು ಎಂದು ಎಚ್ಚರಿಸಲಾಗಿದೆ. ಎರಡನೆಯ ಆದೇಶ "ದೇಶದ ಸಮಗ್ರತೆಯನ್ನು ಬಾಧಿಸಬಹುದಾದ ಯಾವುದೇ ವಿಷಯ ಇರುವುದನ್ನು" ತೋರಿಸಬಾರದು ಎನ್ನುತ್ತದೆ. ಮೋದಿ ಸರಕಾರಕ್ಕೆ ಸಿಎಎ ಯ ಟೀಕೆ ಒಂದು ರಾಷ್ಟ್ರ-ವಿರೋಧಿ ನಿಲುವಾಗಿ ಕಾಣುತ್ತದೆ.

ಸರ್ವಾಧಿಕಾರಶಾಹೀ ಆಡಳಿತ ವಿದ್ಯಾರ್ಥಿಗಳ ಮೇಲೆ ಮತ್ತು ಪ್ರತಿಭಟನೆಗಳು ಆರಂಭವಾದ ವಿಶ್ವವಿದ್ಯಾಲಯಗಳ ಮೇಲೆ ಗುರಿಯಿಟ್ಟಿದೆ. ಜಾಮಿಯ ಮಿಲಿಯ ವಿಶ್ವವಿದ್ಯಾಲಯ ಮತ್ತು ಅಲಿಗಡ ಮುಸ್ಲಿಂ ವಿಶ್ವವಿದ್ಯಾಲಯ(ಎಎಂಯು) ಈ ಎರಡೂ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳನ್ನು ಅಮಾನುಷ ದಮನಕ್ಕೆ ಗುರಿಯಾಗಿಸಲಾಯಿತು. ಜಾಮಿಯಾ ಆವರಣದಲ್ಲಿ ಪೋಲಿಸರು ಪ್ರವೇಶಿಸಿ ಲೈಬ್ರೆರಿಯ ಒಳಗೆ ವಿದ್ಯಾರ್ಥಿಗಳನ್ನು ನಿರ್ದಯವಾಗಿ ಥಳಿಸಿದರು. ಬ್ರಿಟಿಶ್ ಆಳ್ವಿಕೆಯಲ್ಲೂ ಕೇಳಿರದ ಘಟನೆಯಿದು. ಎಎಂಯುನಲ್ಲಿ ಪೋಲೀಸರು ಸ್ಟನ್ ಗ್ರೆನೇಡುಗಳನ್ನು ಬಳಸಿದರು. ಪೋಲೀಸರ ಪ್ರಹಾರಗಳು ಎಷ್ಟು ತೀವ್ರವಾಗಿದ್ದವೆಂದರೆ ಒಬ್ಬ ವಿದ್ಯಾರ್ಥಿಯ ಕೈಯನ್ನು ಅಂಗಚ್ಛೇದ ಚಿಕಿತ್ಸೆಗೆ ಒಳಪಡಿಸಬೇಕಾಯಿತು.

ವಿದ್ಯಾರ್ಥಿಗಳ ಮೇಲೆ ಈ ದಾಳಿಗಳು ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿ ಭಿನ್ನಾಭಿಪ್ರಾಯವನ್ನು ದಮನ ಮಾಡುವ ಮತ್ತು ದಬ್ಬಾಳಿಕೆ ಮತ್ತು ಬೆದರಿಕೆಯ ವಾತಾವರಣವನ್ನು ಸೃಷ್ಟಿಸುವ ನಿರಂತರ ಪ್ರಯತ್ನಗಳನ್ನು ಅನುಸರಿಸಿ ಬಂದಿವೆ.

ಮೋದಿ ಆಳ್ವಿಕೆಯ ಅಸಹನೆ ಮತ್ತು ಫ್ಯಾಸಿಸ್ಟ್ ತೆರನ ನಿಲುವು ಪ್ರದರ್ಶನಗೊಳ್ಳುತ್ತಲೇ ಇದೆ. ಪ್ರಧಾನ ಮಂತ್ರಿಗಳಿಂದ ಹಿಡಿದು ಕೆಳಗಿನವರ ವರೆಗೆ ಪ್ರತಿಭಟನಾಕಾರರನ್ನು ನಗರ ನಕ್ಸಲರು ಪ್ರಚೋದಿಸುತ್ತಿದ್ದಾರೆ, ಅಥವ ಅವರ ನಡುವೆ ಮಾವೋವಾದಿಗಳು ಮತ್ತು ಜಿಹಾದಿಗಳು ನುಸುಳಿದ್ದಾರೆ ಎಂದು ಹಣೆಪಟ್ಟಿ ಹಚ್ಚುತ್ತಿದ್ದಾರೆ.

ಇದು ಹಿಂದುತ್ವ ಸರ್ವಾಧಿಕಾರಶಾಹಿಯ ದುಷ್ಟ ಮುಖವಾಗಿದ್ದರೆ, ವಿರೋಧ ಮತ್ತು ಎದ್ದೆದ್ದು ಬರುತ್ತಿರುವ ಪ್ರತಿಭಟನೆಗಳು ದೇಶವನ್ನು ಆವರಿಸುತ್ತಿರುವುದು ಈ ಚಿತ್ರದ್ರ ಇನ್ನೊಂದು ಮುಖ. ಪ್ರತಿಭಟನೆಗಳು, ಸಭೆಗಳು ಮತ್ತು ಸಾಮೂಹಿಕ ಪ್ರತಿಭಟನೆಯ ಇತರ ಸ್ವರೂಪಗಳು ಕಾಣದಿರುವ ದಿನವೇ ಇಲ್ಲವಾಗುತ್ತಿದೆ. ಎಷ್ಟೇ ದಮನ ನಡೆಸಿದರೂ ಜನಜನಿತ ಪ್ರತಿಭಟನೆಗಳನ್ನು ನಿಲ್ಲಿಸಲಾಗದು. ವಿದ್ಯಾರ್ಥಿಗಳು ಮತ್ತು ಯುವಜನರು ಈ ಪ್ರತಿಭಟನಾ ಆಂದೋಲನದ ಮುಂಚೂಣಿ ಯಲ್ಲಿದ್ದಾರೆ. ಸಂವಿಧಾನವನ್ನು ಮತ್ತು ಪ್ರಜಾಪ್ರಭುತ್ವ ಮೌಲ್ಯಗಳನ್ನು ರಕ್ಷಿಸುವ ಗುರಿಯಲ್ಲಿನ ಐಕ್ಯತೆ ಗಮನಾರ್ಹ. ಸಿಎಎ-ಎನ್‌ಆರ್‌ಸಿ ಕ್ರಮಗಳನ್ನು ತರುವಲ್ಲಿ ಬಿಜೆಪಿ ಆಳರಸರ ಕುಯುಕ್ತಿಗಳ ಒಂದು ಸ್ಪಷ್ಟ ಕಣ್ಣೋಟ ಈ ಯುವಜನರಲ್ಲಿದೆ. ವಿವಿಧ ವಿಭಾಗಗಳ ಜನಗಳ ದೃಢ ಸ್ಪಂದನೆ ಸಂವಿಧಾನ ಮತ್ತು ಜಾತ್ಯತೀತತೆಯ ರಕ್ಷಣೆಯನ್ನು ಆಧರಿಸಿದ ಒಂದು ವಿಸ್ತಾರವಾದ ಐಕ್ಯತೆಯನ್ನು ಬೆಸೆಯುತ್ತಿದೆ.

ಜಾತ್ಯತೀತ ಪ್ರಜಾಪ್ರಭುತ್ವದ ಭವಿಷ್ಯಕ್ಕಾಗಿಯೇ ನಡೆಸಿರುವ ಈ ವಿಸ್ತಾರಗೊಳ್ಳುತ್ತಿರುವ ಸಮರವೇ ಸಿಎಎ-ಎನ್‌ಪಿಆರ್-ಎನ್‌ಆರ್‌ಸಿ ತ್ರಿವಳಿಯ ಹಿಂದಿರುವ ಕೋಮುವಾದಿ ಅಜೆಂಡಾವನ್ನು ವಿಫಲಗೊಳಿಸಲಿದೆ. ಬಿಜೆಪಿ ಈ ವಿಭಜನಕಾರೀ ಅಜೆಂಡಾವನ್ನು ಮುಂದಕ್ಕೆ ತಳ್ಳಲು ಸರ್ವಪ್ರಯತ್ನ ನಡೆಸುತ್ತಿರುವ ಸಂದರ್ಭದಲ್ಲಿಯೇ ಝಾರ್ಖಂಡ್ ವಿಧಾನಸಭಾ ಚುನಾವಣೆಗಳಲ್ಲಿ ಅದಕ್ಕೆ ಸೋಲುಂಟಾಗಿದೆ.


ಈ ವಿಭಜನಕಾರೀ ಕೋಮುವಾದಿ ಕಸರತ್ತನ್ನು ನಿರ್ಲಕ್ಷಿಸಿ ದುಡಿಯುವ ಜನಗಳು ಜನವರಿ 8 ರಂದು ಒಂದು ಶಕ್ತಿಶಾಲೀ ಸಾರ್ವತ್ರಿಕ ಮುಷ್ಕರವನ್ನು ನಡೆಸಿ ಸರ್ವಾಧಿಕಾರಶಾಹೀ ಆಳ್ವಿಕೆಗೆ ತಕ್ಕ ಪ್ರತ್ಯುತ್ತರವನ್ನು ನೀಡಲಿದ್ದಾರೆ.

ಪ್ರಕಾಶ ಕಾರಟ್

ಮೋದಿ ಆಳ್ವಿಕೆಯ ಅಸಹನೆ ಮತ್ತು ಫ್ಯಾಸಿಸ್ಟ್ ತೆರನ ನಿಲುವು ಪ್ರದರ್ಶನಗೊಳ್ಳುತ್ತಲೇ ಇದೆ. ಇದು ಹಿಂದುತ್ವ ಸರ್ವಾಧಿಕಾರಶಾಹಿಯ ದುಷ್ಟ ಮುಖವಾಗಿದ್ದರೆ, ವಿರೋಧ ಮತ್ತು ಎದ್ದೆದ್ದು ಬರುತ್ತಿರುವ ಪ್ರತಿಭಟನೆಗಳು ದೇಶವನ್ನು ಆವರಿಸುತ್ತಿರುವುದು ಈ ಚಿತ್ರದ ಇನ್ನೊಂದು ಮುಖ. ಪ್ರತಿಭಟನೆಗಳು, ಸಭೆಗಳು ಮತ್ತು ಸಾಮೂಹಿಕ ಪ್ರತಿಭಟನೆಯ ಇತರ ಸ್ವರೂಪಗಳು ಕಾಣದಿರುವ ದಿನವೇ ಇಲ್ಲವಾಗುತ್ತಿದೆ. ವಿದ್ಯಾರ್ಥಿಗಳು ಮತ್ತು ಯುವಜನರು ಈ ಪ್ರತಿಭಟನಾ ಆಂದೋಲನದ ಮುಂಚೂಣಿಯಲ್ಲಿದ್ದಾರೆ. ಸಿಎಎ-ಎನ್‌ಆರ್‌ಸಿ ಕ್ರಮಗಳನ್ನು ತರುವಲ್ಲಿ ಬಿಜೆಪಿ ಆಳರಸರ ಕುಯುಕ್ತಿಗಳ ಒಂದು ಸ್ಪಷ್ಟ ಕಣ್ಣೋಟ ಈ ಯುವಜನರಲ್ಲಿದೆ. ವಿವಿಧ ವಿಭಾಗಗಳ ಜನಗಳ ದೃಢ ಸ್ಪಂದನೆ ಸಂವಿಧಾನ ಮತ್ತು ಜಾತ್ಯತೀತತೆಯ ರಕ್ಷಣೆಯನ್ನು ಆಧರಿಸಿದ ಒಂದು ವಿಸ್ತಾರವಾದ ಐಕ್ಯತೆಯನ್ನು ಬೆಸೆಯುತ್ತಿದೆ. ಮತ್ತೊಂದೆಡೆಯಲ್ಲಿ ಜನವರಿ 8ರಂದು ಒಂದು ಶಕ್ತಿಶಾಲೀ ಸಾರ್ವತ್ರಿಕ ಮುಷ್ಕರವನ್ನು ನಡೆಸಿ ದುಡಿಯುವ ಜನಗಳು ಸರ್ವಾಧಿಕಾರಶಾಹೀ ಆಳ್ವಿಕೆಗೆ ತಕ್ಕ ಪ್ರತ್ಯುತ್ತರವನ್ನು ನೀಡಲಿದ್ದಾರೆ.



ವ್ಯಂಗ್ಯಚಿತ್ರ: ಶೇಖರ್ ಗುರೇರ



ವ್ಯಂಗ್ಯಚಿತ್ರ: ಮಂಜುಲ್, ಫಸ್ಟ್‌ಪೋಸ್ಟ್

ಶತಮಾನೋತ್ಸವ ಲೇಖನ ಮಾಲೆ-8

ಕಟಕಟೆಯಿಂದಲೇ ಸಾಮ್ರಾಜ್ಯಶಾಹಿಗಳಿಗೆ ಸವಾಲೆಸೆದ ಮೀರತ್ ಪಿತೂರಿ ಪ್ರಕರಣ



ಈ ಮೊಕದ್ದಮೆಯ ವಿಚಾರಣೆ ಜಗತ್ತಿನಾದ್ಯಂತ ವ್ಯಾಪಕ ಪ್ರಚಾರ ಪಡೆಯಿತು ಮತ್ತು ಕಾರ್ಮಿಕ ವರ್ಗದ ಸೌಹಾರ್ದತೆಯನ್ನು ಪ್ರೇರೇಪಿಸಿತು. ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯವು ಬಂಧನವನ್ನು ಖಂಡಿಸಿತು ಮತ್ತು ಬ್ರಿಟಿಷ್ ಕಾರ್ಮಿಕರು ಹಾಗೂ ಕಮ್ಯುನಿಸ್ಟರು ಒಂದು ದೃಢ ಸೌಹಾರ್ದ ಆಂದೋಲನವನ್ನು ಕಟ್ಟಿದರು, 1929 ರಿಂದ 1933 ರ ಕೊನೆಯವರೆಗೆ, ಮೀರಟ್ ಬಂಧಿತರಿಗಾಗಿನ ಸೌಹಾರ್ದದ ಚಳುವಳಿ ಒಂದು ಸಮರಶೀಲ ರಾಜಕೀಯ ಚಳುವಳಿಯಾಗಿ ಪರಿವರ್ತನೆಗೊಂಡಿತು; ಅದು ಭಾರತದ ಸ್ವಾತಂತ್ರ್ಯ ಚಳುವಳಿಗೆ ಬೆಂಬಲವಾಗಿ ಸಾರ್ವಜನಿಕ ಅಭಿಪ್ರಾಯವನ್ನು ಮೂಡಿಸುವಲ್ಲಿ ಸಹಾಯಕವಾಯಿತು.

ಕನ್ನಡಕ್ಕೆ ಟಿ. ಸುರೇಂದ್ರ ರಾವ್

ಮೀರತ್ ಪಿತೂರಿ ಪ್ರಕರಣವು(1929) ಭಾರತದ ರಾಷ್ಟ್ರೀಯ ವಿಮೋಚನಾ ಚಳುವಳಿಯ ಇತಿಹಾಸದಲ್ಲಿ ಒಂದು ಮಹತ್ವದ ಮೈಲಿಗಲ್ಲು. ಇಡೀ ಬಂಡವಾಳಶಾಹಿ ಜಗತ್ತು 'ಮಹಾ ಆರ್ಥಿಕ ಕುಸಿತ'ದಲ್ಲಿ ತತ್ತರಿಸುತ್ತಿದ್ದಾಗಲೇ, ಆಗ ತಾನೇ ಜನ್ಮತಾಳಿದ್ದ ಸಮಾಜವಾದಿ ದೇಶ ಸೋವಿಯತ್ ರಷ್ಯಾವು ಅದ್ಭುತ ಸಾಧನೆಗಳನ್ನು ಮಾಡುತ್ತಿದ್ದ ಸಮಯದಲ್ಲಿ ಅದು ಘಟಿಸಿತು. ಈ ಅವಧಿಯಲ್ಲಿ, ಸಮರಶೀಲ ಕಾರ್ಮಿಕ ವರ್ಗದ ಹೋರಾಟಗಳು, ಅವುಗಳಲ್ಲಿ ಬಹುಪಾಲು ಕಮ್ಯುನಿಸ್ಟರು ಮತ್ತು ಕ್ರಾಂತಿಕಾರಿಗಳ ನೇತೃತ್ವದಲ್ಲಿ ಉಚ್ಛ್ರಾಯ ಸ್ಥಿತಿ ತಲುಪಿದ್ದವು.

1921ರಲ್ಲಿ (ಖಿಲಾಫತ್ ಅಸಹಕಾರ ಚಳುವಳಿಯ ಅವಧಿಯಲ್ಲಿ) ಒಂದು ಉನ್ನತ ಮಟ್ಟಕ್ಕೇರಿದ್ದ ಕಾರ್ಮಿಕರ ಮುಷ್ಕರಗಳ ಸಂಖ್ಯೆ ಅಸಹಕಾರ ಚಳುವಳಿಯನ್ನು ಹಿಂತೆಗೆದುಕೊಳ್ಳುವುದರೊಂದಿಗೆ ಕೆಳಗಿಳಿಯಿತು. ಆದರೆ 1921 ರ ಉತ್ತರಾರ್ಧದಲ್ಲಿ ಮತ್ತೆ ಮುಷ್ಕರಗಳಿಂದಾಗಿ ಮಾನವ ದಿನಗಳ ನಷ್ಟ ಹೆಚ್ಚಾಗಿದ್ದನ್ನು ಕಾಣುತ್ತೇವೆ. ಅದನ್ನು 1928–29ರಲ್ಲಿ ನೋಡಬಹುದು, ಆಗ 203 ಮುಷ್ಕರಗಳಿಂದ 3,16,47,404 ಮಾನವ ದಿನಗಳು ನಷ್ಟವಾಗಿದ್ದವು.

1929 ರ ಅಂತ್ಯದಲ್ಲಿ ಆರಂಭವಾದ ಮಹಾ ಕುಸಿತವು ಭಾರತವನ್ನು ಹಲವಾರು ವಿಧಗಳಲ್ಲಿ ಬಾಧಿಸಿತು; ಅದರ ಪರಿಣಾಮವು ಕಾರ್ಮಿಕ ವರ್ಗ ಮತ್ತು ರೈತಾಪಿ ಜನರನ್ನು ತೀವ್ರ ಬಾಧಿಸಿತು; ಅದರಿಂದಾಗಿ ಅವರು ಇನ್ನೂ ದೊಡ್ಡ ರೀತಿಯಲ್ಲಿ ಹೋರಾಟಗಳಲ್ಲಿ ಇಳಿಯುವುದು ಅನಿವಾರ್ಯವಾಯಿತು. ಈ ವಿದ್ಯಮಾನಗಳು 1930ರ ಆರಂಭದ ವರ್ಷಗಳವರೆಗೂ ಮುಂದುವರಿದವು. ಕಾರ್ಮಿಕ ವರ್ಗದ ಚಳುವಳಿಯೊಂದಿಗೆ ರಾಜಕೀಯ ತಿಳುವಳಿಕೆ ಹೆಚ್ಚುತ್ತಿರುವುದನ್ನು ಕಾರ್ಮಿಕರ ಹೋರಾಟಗಳ ತೀವ್ರತೆಯು ಪ್ರದರ್ಶಿಸಿತು.

ಕಾರ್ಮಿಕ ವರ್ಗದ ಮತ್ತು ರೈತರ ಬಹುಪಾಲು ಹೋರಾಟಗಳು ಕಮ್ಯುನಿಸ್ಟರ ನಾಯಕತ್ವದಲ್ಲಿ ಕಾರ್ಮಿಕರ ಮತ್ತು ರೈತರ ಪಕ್ಷಗಳ(ಡಬ್ಲ್ಯುಪಿಪಿ) ಅಡಿಯಲ್ಲಿ ನಡೆಯುತ್ತಿದ್ದವು. 1928ರಲ್ಲಿ, ಬಾರ್ಡೋಲಿ ಆಂದೋಲನವು ರೈತರನ್ನು ಅಣಿನೆರೆಸುವಲ್ಲಿ ಅತ್ಯಂತ ಯಶಸ್ವೀ ಹೋರಾಟಗಳಲ್ಲಿ ಒಂದು; ಮತ್ತು ಅದೇ ಸಮಯದಲ್ಲಿ ಬೊಂಬಾಯಿಯಲ್ಲಿ ಬಟ್ಟೆ ಗಿರಣಿ ಕಾರ್ಮಿಕರ ಮುಷ್ಕರ ಕೂಡ ನಡೆಯುತ್ತಿತ್ತು. ಈ ಎರಡು ಹೋರಾಟಗಳ ನಡುವೆ ಯಾವುದೇ ಸಂಘಟನಾತ್ಮಕ ಸಂಬಂಧಗಳು ಇರದೇ ಇದ್ದಾಗ್ಯೂ, ಬ್ರಿಟಿಷರು ಅವೆರಡರ ನಡುವೆ ಸಂಬಂಧವಿದೆಯೆಂದು ಹೆದರಿದ್ದರು; ಬಾರ್ಡೋಲಿಯಲ್ಲಿ ಸರ್ಕಾರ ಏನಾದರೂ ಕ್ರಮ ತೆಗೆದುಕೊಂಡರೆ ಆ ಸನ್ನಿವೇಶವನ್ನು ಕಮ್ಯುನಿಸ್ಟರು ಖಂಡಿತವಾಗಿ ಬಳಸಿಕೊಳ್ಳುತ್ತಾರೆ ಎಂಬ ಭಯ ಅವರಿಗಿತ್ತು. ಅಂತಹ ಭಯ ಕಮ್ಯುನಿಸ್ಟರ ಬಗ್ಗೆ ಬ್ರಿಟಿಷರಲ್ಲಿ ಇತ್ತು.

ಕಮ್ಯುನಿಸ್ಟರ ಮತ್ತು ಡಬ್ಲುಪಿಪಿಯ ಚಟುವಟಿಕೆಗಳು ಸಾಮಾನ್ಯ ಜನರಲ್ಲಿ ಪ್ರಜ್ಞೆಯ ಬೆಳವಣಿಗೆಗೆ ನೆರವಾದವು. ಅವರು ಈಗ ಸ್ವಾತಂತ್ರ್ಯಕ್ಕಾಗಿ ಹೋರಾಟವನ್ನು ವಿಶ್ವವ್ಯಾಪೀ ಸಾಮ್ರಾಜ್ಯಶಾಹಿ–ವಿರೋಧಿ ಹೋರಾಟದ ಭಾಗ ಎಂದು ಗುರುತಿಸಿಕೊಳ್ಳುವುದು ಅವರಿಗೆ ಈಗ ಸಾಧ್ಯವಾಗಿತ್ತು. ಕಾಂಗ್ರೆಸ್ ಕೂಡ ಈ ವಾಸ್ತವವನ್ನು ಒಪ್ಪಿಕೊಳ್ಳಲೇಬೇಕಾಯಿತು. ಮತ್ತೊಂದು ಪ್ರಧಾನವಾದ ಪರಿಣಾಮ ಡಬ್ಲುಪಿಪಿಯ ಕೆಲಸಗಳು ಈ ಅವಧಿಯಲ್ಲಿ ಬೀರಿದ್ದು ಕ್ರಾಂತಿಕಾರಿ ರಾಷ್ಟ್ರೀಯವಾದಿಗಳ ಮೇಲೆ. ಅವರಲ್ಲಿ ಅನೇಕರು ಕಮ್ಯುನಿಸ್ಟ್ ಚಿಂತನೆಗಳ ಪ್ರಭಾವಕ್ಕೆ ಒಳಗಾದರು. ಅವರ ಮನೋಭಾವದಲ್ಲಿ ಗಮನಾರ್ಹ ಬದಲಾವಣೆಯ ಮೊದಲ ಸಂಕೇತವು ಕಮ್ಯುನಿಸ್ಟ್ ಚಳುವಳಿಯ ಬೆಳವಣಿಗೆಯಲ್ಲಿ ಕಂಡಿತು. ಅಂತಹ ಬದಲಾವಣೆಯ ಸ್ಪಷ್ಟ ಪುರಾವೆ ದೊರೆತದ್ದು ಭಗತ್ ಸಿಂಗ್ ಅವರ ನಾಯಕತ್ವದಲ್ಲಿ ಹಿಂದೂಸ್ತಾನ್ ಸೋಶಿಯಲಿಸ್ಟ್ ರಿಪಬ್ಲಿಕನ್ ಅಸೋಸಿಯೇಷನ್ ಸ್ಥಾಪನೆಯಾಗುವುದರ ಮೂಲಕ. ಅಂದಿನ ದಿನಗಳಲ್ಲಿ ಸಾಮಾನ್ಯ ಜನರು 'ಬಾಂಬ್ ರಾಜಕೀಯ' ಅಥವಾ ಗಾಂಧಿಯ ಅಹಿಂಸೆಯ ಬಗ್ಗೆಯಷ್ಟೇ ಯೋಚಿಸುತ್ತಿದ್ದಾಗ, ಡಬ್ಲುಪಿಪಿ ಮತ್ತು ಕಮ್ಯುನಿಸ್ಟ್ ಪಕ್ಷ ನಡೆಸಿದ ಪ್ರಚಾರವು 'ಕಾರ್ಮಿಕ ವರ್ಗದ ರಾಜಕೀಯ'ವನ್ನು ಮುನ್ನೆಲೆಗೆ ತಂದಿತು. ಕಮ್ಯುನಿಸ್ಟರ್ ಪ್ರತಿಪಾದಿಸುತ್ತಿದ್ದಂತೆ, ಯುವಜನರು ನೇರ ಕಾರ್ಯಾಚರಣೆ ಮತ್ತು ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಎಲ್ಲಾ ದುಡಿಯುವ ಜನರನ್ನು ಅಣಿನೆರೆಸಬೇಕೆಂಬ ಚಿಂತನೆಯತ್ತ ಆಕರ್ಷಿತರಾದರು.

ಈ ರೀತಿಯಲ್ಲಿ ಜನಸಮುದಾಯದಲ್ಲಿ ಕಮ್ಯುನಿಸ್ಟ್ ಪ್ರಭಾವ ಹರಡುತ್ತಿರುವುದನ್ನು ಕಂಡೇ ಬ್ರಿಟಿಷರು ಬೆದರಿದರು ಮತ್ತು ಕಮ್ಯುನಿಸ್ಟ್ ಚಟುವಟಿಕೆಗಳನ್ನು ನಿಗ್ರಹಿಸಲು ತಡವಿಲ್ಲದೇ ಕ್ರಮ ಕೈಗೊಳ್ಳಲು ಮುಂದಾದರು. ಡಿಸೆಂಬರ್ 1928ರಲ್ಲಿ, 'ಪ್ರಸ್ತಾಪಿತ ಪಿತೂರಿ ವಿಚಾರಣೆ'ಯ ಸಂಬಂಧದಲ್ಲಿ ಸರ್ಕಾರವು ಮಾಹಿತಿಗಳನ್ನು ಕಲೆಹಾಕುತ್ತಿದೆ ಎಂದು ಬ್ರಿಟಿಷ್ ಗೃಹ ಕಾರ್ಯದರ್ಶಿಯು ವೈಸ್‌ರಾಯಿ ಹತ್ತಿರ ಹೇಳಿಕೊಂಡ. ವೈಸ್‌ರಾಯ್ ಇರ್ವಿನ್ ಬಂಗಾಳದ ಗೌರ್ನರಿಗೆ ಪತ್ರ ಬರೆದು(ಜನವರಿ 18, 1929): "ಈ ಜನಗಳ ವಿರುದ್ಧ ಒಂದು ಸಮಗ್ರ ಪಿತೂರಿ ಪ್ರಕರಣವನ್ನು ನಡೆಸಲು ನಾವು ಈಗ ಸಮರ್ಥರಾಗಿದ್ದೇವೆ ಎಂದು ಸಾಕಷ್ಟು ಉತ್ತಮ ನಿರೀಕ್ಷೆಗಳನ್ನು ಹೊಂದಿದ್ದೇವೆ.. ನಾವಿದನ್ನು ಮಾಡಲು ಸಾಧ್ಯವಾದರೆ, ನಮ್ಮ ಅಭಿಪ್ರಾಯದಲ್ಲಿ ಅದು, ಭಾರತದ ಕಮ್ಯುನಿಸ್ಟ್ ಚಳುವಳಿಗೆ ಬೇರೆಯದಕ್ಕಿಂತ ತೀವ್ರತರದ ಹೊಡೆತವನ್ನು ಕೊಡಲಿದೆ" ಎಂದು ತಿಳಿಸಿದ.

ಹೀಗೆ ಆರಂಭಗೊಳಿಸಿದ ಮೀರಟ್ ಪಿತೂರಿ ಪ್ರಕರಣವು ಮಾರ್ಚ್ 15, 1929 ರಂದು ಮೀರಟ್‌ನ ಜಿಲ್ಲಾ ನ್ಯಾಯಾಧೀಶರು ಆರೋಪಿತ ವ್ಯಕ್ತಿಗಳಿಗೆ ವಾರಂಟುಗಳನ್ನು ನೀಡುವುದರ ಮೂಲಕ ಶುರುವಾಯಿತು. ಭಾರತೀಯ ದಂಡ ಸಂಹಿತೆ ವಿಭಾಗ 121ಎ ಅಡಿಯಲ್ಲಿ ಕಾನೂನು ಕ್ರಮ ಜರುಗಿಸಲು ಭಾರತದ ಗೌರ್ನರ್ ಜನರಲ್, ಲಾರ್ಡ್ ಇರ್ವಿನ್ ಒಂದು ದಿನ ಮುಂಚೆಯಷ್ಟೆ ಸಮ್ಮತಿಸಿದ್ದರು.

ಮಾರ್ಚ್ 20, 1929 ರಂದು ಭಾರತದ ವಿವಿಧ ಪ್ರದೇಶಗಳಲ್ಲಿ 31 ಕಮ್ಯುನಿಸ್ಟ್/ಕಾರ್ಮಿಕ ನಾಯಕರನ್ನು ಬಂಧಿಸಲಾಯಿತು. ಅವರಲ್ಲಿ ಬಹುತೇಕರು ಕಾರ್ಮಿಕ ಸಂಘಟನೆಗಳ ಮತ್ತು ಕಾರ್ಮಿಕ ವರ್ಗದ ಚಳುವಳಿಯ ಪ್ರಸಿದ್ಧ ವ್ಯಕ್ತಿಗಳಾಗಿದ್ದರು. ಅವರಲ್ಲಿ, ಬೊಂಬಾಯಿಯ 13 ಜನ, ಬಂಗಾಳದ 10 ಜನ, ಯುಪಿಯ 5 ಜನ, ಪಂಜಾಬಿನ 3 ಜನ ಹಾಗೂ 3 ಇಂಗ್ಲಿಷರಾಗಿದ್ದರು. ಬಂಧಿತರಲ್ಲಿ 8 ಜನ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸದಸ್ಯರಾಗಿದ್ದರು ಮತ್ತು ಆಗಷ್ಟೇ ಸ್ಥಾಪಿತವಾದ ಡಬ್ಲುಪಿಪಿಯ ಕಾರ್ಯಕಾರಿ ಸಮಿತಿಯ ಸುಮಾರಾಗಿ ಎಲ್ಲಾ ಸದಸ್ಯರೂ ಇದ್ದರು. ಬಂಧನಕ್ಕೆ ಮೊದಲು ಎಲ್ಲರ ಮನೆಯ ಮೇಲೆ ದಾಳಿ ನಡೆಸಿ ಆಮೂಲಾಗ್ರ ಶೋಧ ಮಾಡಲಾಗಿತ್ತು.

ವಿಚಾರಣೆಯ ಸ್ಥಳ ಮೀರಟ್ ಎಂದು ಮುಂಚೆಯೇ ಯೋಜಿಸಲಾಗಿತ್ತು. ಮುಖ್ಯವಾಗಿ, ನ್ಯಾಯದರ್ಶಿಮಂಡಳಿ(ಜ್ಯೂರಿ)ಯಿಂದ ವಿಚಾರಣೆ ನಡೆಸುವುದನ್ನು ತಪ್ಪಿಸಲು ಅಧಿಕಾರಿಗಳು ಬಯಸಿದ್ದರು. ಕಮ್ಯುನಿಸ್ಟ್ ಚಟುವಟಿಕೆಗಳ ಪ್ರಮುಖ ಕೇಂದ್ರಗಳಾದ ಬೊಂಬಾಯಿ ಮತ್ತು ಕಲ್ಕತ್ತಾ ಎರಡರಲ್ಲೂ ಒಂದು ಹೈಕೋರ್ಟಿನ ನ್ಯಾಯದರ್ಶಿ ಮಂಡಳಿಯಿಂದ ಪ್ರಕರಣದ ವಿಚಾರಣೆ ನಡೆಸಬಹುದಿತ್ತು. ಗೃಹ ಇಲಾಖೆಯ ಒಂದು 'ಅತ್ಯಂತ ಗುಪ್ತ' ದಾಖಲೆಯು ಬ್ರಿಟಿಷರ ನಿಜವಾದ ಉದ್ದೇಶ ಏನಿತ್ತು ಎಂಬುದನ್ನು ಬಯಲುಮಾಡಿತು: "ಈ ಪ್ರಕರಣವನ್ನು ಒಂದು ನ್ಯಾಯದರ್ಶಿ ಮಂಡಳಿಗೆ ಸಲ್ಲಿಸುವುದು ಸಾಧ್ಯವಾಗುತ್ತಿರಲಿಲ್ಲ. . . .ಪ್ರಕರಣ ಎಷ್ಟೇ ಒಳ್ಳೆಯದಿರಲಿ, ಮಂಡಳಿಯು ಶಿಕ್ಷೆ ನೀಡುತ್ತದೆ ಎಂಬ ಭರವಸೆ ಇರಲಿಲ್ಲ, ಅದು ಶಿಕ್ಷೆಯಲ್ಲಿ ಕೊನೆಗೊಳ್ಳುತ್ತದೆ ಎಂಬುದು ನಮಗೆ ಮನವರಿಕೆಯಾಗದ ಹೊರತು ಕೋರ್ಟಿಗೆ ಆ ಪ್ರಕರಣವನ್ನು ನೀಡುವುದು ಸಾಧ್ಯವಿರಲಿಲ್ಲ." ಅದೇ ದಾಖಲೆಯು ಮುಂದುವರಿದು: "ಬೊಂಬಾಯಿ ಮತ್ತು ಕಲ್ಕತ್ತಾ ಎರಡಲ್ಲೂ ದುಡಿಯುವ ಜನರಲ್ಲಿ ಪ್ರಚಲಿತವಿರುವ ಇವತ್ತಿನ ಅಪಾಯಕಾರಿ ವಾತಾವರಣದಲ್ಲಿ ಈ ಎರಡು ಸ್ಥಳಗಳಲ್ಲಿ ಕೂಡ ವಿಚಾರಣೆ ನಡೆಸುವುದು ನಿಸ್ಸಂದೇಹವಾಗಿಯೂ ಬಯಸತಕ್ಕದ್ದಲ್ಲ." ಎಂದು ಈ ಗುಪ್ತ ದಾಖಲೆಯು ಹೇಳಿತ್ತು.

ಅಲಹಾಬಾದ್ ಹೈಕೋರ್ಟಿನ ಅಂತಿಮ ತೀರ್ಪಿನಲ್ಲಿ ವ್ಯಾಖ್ಯಾನಿಸಿದಂತೆ ಆ ಪ್ರಕರಣವನ್ನು 'ಬೃಹತ್ ಪ್ರಮಾಣದಲ್ಲಿ' ನಡೆಸಲಾಯಿತು. ಕಲಾಪಗಳು ಸರಿ ಸುಮಾರು ನಾಲ್ಕೂವರೆ ವರ್ಷ ಮುಂದುವರಿದವು. ಪ್ರಕರಣದ ಸಾಕ್ಷ್ಯಾಧಾರಗಳು ದೊಡ್ಡ ಹಾಳೆ ಗಾತ್ರದ 25 ಮುದ್ರಿತ ಸಂಪುಟಗಳಲ್ಲಿ ಒಳಗೊಂಡಿದ್ದವು. ಅಲ್ಲಿ ಎಲಾ ಸೇರಿ, 3500 ಆಪಾದನೆಯ ದಸ್ತಾವೇಜುಗಳು, 1500 ಆರೋಪಿಗಳ ನಿರಾಕರಣೆ ದಸ್ತಾವೇಜುಗಳು ಮತ್ತು ಏನಿಲ್ಲೆಂದರೂ 320 ಸಾಕ್ಷಿಗಳನ್ನು ಪರೀಕ್ಷಿಸಲಾಗಿತ್ತು. ಆ ತೀರ್ಪು ದೊಡ್ಡ ಹಾಳೆಗಳ ಗಾತ್ರದ 676 ಪುಟಗಳ ಎರಡು ಮುದ್ರಿತ ಸಂಪುಟಗಳಾಗಿದ್ದವು. ಆ ಪ್ರಕರಣವನ್ನು ಹೈಕೋರ್ಟಿಗೆ ಸಲ್ಲಿಸುವುದಕ್ಕೆ ಮುಂಚೆಯೇ ಸರ್ಕಾರವು ಸಸಾರ್ವಜನಿಕ ಖಜಾನೆಯಿಂದ 16 ಲಕ್ಷ ರೂಪಾಯಿಗಳನ್ನು ವೆಚ್ಚಮಾಡಿತ್ತು.

ಹಿಂದಿನ 'ಕಮ್ಯುನಿಸ್ಟ್ ಪಿತೂರಿ' ಪ್ರಕರಣಗಳಿಗಿಂತ ಭಿನ್ನವಾಗಿ, ಮೀರಟ್‌ನ ಬಂಧಿಗಳು ನ್ಯಾಯಾಲಯದ ವೇದಿಕೆಯನ್ನು ಎಷ್ಟು ಸಾಧ್ಯವೋ ಅಷ್ಟು ತಮ್ಮ ಕಾರ್ಯಸೂಚಿಯನ್ನು ಪ್ರಚಾರ ಮಾಡಲು ಬಳಸಬೇಕೆಂದು ತೀರ್ಮಾನಿಸಿದರು. ರಾಜಕೀಯ ಹೇಳಿಕೆಗಳನ್ನು ನೀಡುವುದರ ಮೂಲಕ ಸೆಶನ್ಸ್ ಕೋರ್ಟನ್ನು ತಮ್ಮ ಪ್ರಚಾರದ ವೇದಿಕೆಯಾಗಿ ಪರಿವರ್ತಿಸಬೇಕು ಎಂದು ಮುಜಾಫರ್ ಅಹಮದ್ ಅವರು ಅಧಿಕಾರಿ ಅವರಿಗೆ ಹೇಳಿದ್ದರು; ಅದಕ್ಕಾಗಿ ಅವರು ಅಧ್ಯಯನದ ಮೂಲಕ ತಮ್ಮನ್ನು ತಾವು ಸಿದ್ಧಪಡಿಸಿಕೊಳ್ಳಬೇಕೆಂದು ನಿರ್ಧರಿಸಿದ್ದರು. ಎಲ್ಲಾ ಆರೋಪಿಗಳ ಪರವಾಗಿ ಒಂದು ಸಾಮಾನ್ಯ ಹೇಳಿಕೆಯನ್ನು ಆರ್.ಎಸ್.ನಿಂಬ್‌ಕರ್ ಔಪಚಾರಿಕವಾಗಿ ಮಂಡಿಸಿದರು.

ಹೆಚ್ಚುವರಿ ಸೆಶನ್ಸ್ ನ್ಯಾಯಾಧೀಶರು, ತಮ್ಮ ತೀರ್ಪಿನಲ್ಲಿ "ಈ ಅಪರಾಧಿಗಳ 'ಪ್ರಮುಖ ಸಾಧನೆಗಳೆಂದರೆ ಕಾರ್ಮಿಕರ ಮತ್ತು ರೈತರ

ಪುಟ 10 ನೋಡಿ



8 ಜನವರಿ 2020 | ಮತ್ತೊಂದು ಸಾರ್ವತ್ರಿಕ ಮುಷ್ಕರ ಏಕೆ ಈ ಮುಷ್ಕರ?


2020 ಜನವರಿ 8 ರಂದು ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯು (JCTU) 2019 ಸೆಪ್ಟೆಂಬರ್ 30 ರಂದು ನವದೆಹಲಿಯ ಸಂಸತ್ ಮಾರ್ಗದಲ್ಲಿ ನಡೆದ ಬೃಹತ್ ಕಾರ್ಮಿಕರ ಜಂಟಿ ಸಮಾವೇಶದಲ್ಲಿ ಕರೆ ನೀಡಿದೆ.

1991 ರಿಂದ ರಾಷ್ಟ್ರದಲ್ಲಿ ಆರಂಭಿಸಲಾದ ನವಉದಾರವಾದಿ ಆರ್ಥಿಕ ನೀತಿಗಳ ವಿರುದ್ಧ ನಿರಂತರವಾಗಿ 18 ಸಾರ್ವತ್ರಿಕ ಮುಷ್ಕರಗಳನ್ನು ಕೇಂದ್ರ ಕಾರ್ಮಿಕ ಸಂಘಟನೆಗಳು ಜಂಟಿಯಾಗಿ ನಡೆಸಿವೆ. ಇದೀಗ 19ನೇ ಸಾರ್ವತ್ರಿಕ ಮುಷ್ಕರಕ್ಕೆ ಮುಂದಾಗಿವೆ. ಅದರ ತಯಾರಿಯು ರಾಷ್ಟ್ರಾದ್ಯಂತ ಎಲ್ಲಾ ರಾಜ್ಯಗಳಲ್ಲೂ ಬಿರುಸಿನಿಂದ ನಡೆದಿವೆ. ರೈತರು, ಕೂಲಿಕಾರರು, ಮಹಿಳೆಯರು, ವಿದ್ಯಾರ್ಥಿಗಳು, ಯುವಜನತೆ, ನೌಕರರ ಸಂಘಟನೆಗಳು ಸಹಾ ಈ ಮುಷ್ಕರ ಬೆಂಬಲಿಸಿ ಭಾಗವಹಿಸುತ್ತಿವೆ.

BMS ಹೊರತುಪಡಿಸಿ ಉಳಿದೆಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳಾದ INTUC, HMS, AITUC, AIUTUC, AICCTU, CITU, LPF, SEVA, ಸ್ವತಂತ್ರ ನೌಕರರ ಒಕ್ಕೂಟಗಳು, ಬ್ಯಾಂಕ್, ವಿಮೆ, ಕೇಂದ್ರ–ರಾಜ್ಯ ಸರ್ಕಾರಿ ನೌಕರರ ಒಕ್ಕೂಟಗಳು ಜಂಟಿಯಾಗಿ ಈ ಮುಷ್ಕರಕ್ಕೆ ಕರೆ ನೀಡಿವೆ.

ಹಿಂದೆಂದಿಗಿಂತ ಈ ಬಾರಿಯ ಮುಷ್ಕರ ಅತ್ಯಂತ ಮಹತ್ವದಾಗಿದೆ. 1991ರಿಂದ ಕೇಂದ್ರ ಸರ್ಕಾರಗಳು ಮಾಡಲು ಹೊರಟಿದ್ದ ಕಾರ್ಮಿಕ ಕಾನೂನುಗಳ ಸುಧಾರಣೆ ನೆಪದ ಕಾರ್ಪೊರೇಟ್ ಬಂಡವಾಳ ಪರ ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡುವ ಸಂಹಿತಿಕರಣವನ್ನು ಹಾಲಿ ಕೇಂದ್ರ ಸರ್ಕಾರ ತೀವ್ರಗತಿಯಲ್ಲಿ ಮಾಡುತ್ತಿದೆ. ಈಗಾಗಲೇ ವೇತನ ಸಂಹಿತೆ–2019 ಅನ್ನು ಸಂಸತ್ತು ಅಂಗೀಕರಿಸಿದೆ. ಅದು ರಾಷ್ಟ್ರಪತಿಗಳ ಅಂಕಿತದೊಂದಿಗೆ ಜಾರಿಗೆ ಬರುತ್ತಿದೆ. ವೃತ್ತಿ ಸುರಕ್ಷತೆ, ಆರೋಗ್ಯ ಮತ್ತು ಸೇವಾ ಶರತ್ತುಗಳ ಸಂಹಿತೆ 2019 ಮಸೂದೆಯನ್ನು ಕೇಂದ್ರ ಸರ್ಕಾರವು ಸಂಸತ್ತಿನಲ್ಲಿ ಮಂಡಿಸಿದೆ, ಆಯ್ಕೆ ಸಮಿತಿಗೆ ಮಸೂದೆಯನ್ನು ಒಪ್ಪಿಸಲಾಗಿದೆ. ಕೈಗಾರಿಕಾ ಸಂಬಂಧಗಳ ಸಂಹಿತೆಯ ಮಸೂದೆ–2019 ಅನ್ನು ಸಹಾ ಸಂಸತ್ತಿನಲ್ಲಿ ಮಂಡಿಸಲಾಗಿದೆ. ಸಾಮಾಜಿಕ ಸುರಕ್ಷತಾ ಸಂಹಿತೆಯ ಕರಡನ್ನು ಕೇಂದ್ರ ಸರ್ಕಾರ ಪ್ರಕಟಿಸಿದೆ. ಅವುಗಳನ್ನು ಅಂಗೀಕರಿಸಲು ಅಗತ್ಯ ಇರುವ ಸಂಸತ್ತಿನಲ್ಲಿ ಸಂಖ್ಯಾಬಲವನ್ನು ಹಾಲಿ ಕೇಂದ್ರ ಸರ್ಕಾರವು ಹೊಂದಿದೆ.

ರಾಷ್ಟ್ರದ ಸ್ವಾವಲಂಬನೆ ಮತ್ತು ಆರ್ಥಿಕ ಶಕ್ತಿಯ ಆಧಾರವಾಗಿರುವ ಸಾರ್ವಜನಿಕ ಉದ್ದಿಮೆಗಳನ್ನು, ಲಾಭದಾಯಕ ಉದ್ದಿಮೆಗಳನ್ನು ಮತ್ತವುಗಳ ಆಸ್ತಿಗಳನ್ನು, ಬ್ಯಾಂಕ್, ವಿಮಾ ಕಂಪನಿಗಳು, ರಕ್ಷಣಾ ಇಲಾಖೆಯ ಉದ್ದಿಮೆ, ರೈಲ್ವೆ, ಪೆಟ್ರೋಲಿಯಂ ಕಂಪನಿಗಳನ್ನು ಖಾಸಗಿ ಜೂಜುಕೋರ ಬಂಡವಾಳಗಾರರಿಗೆ ಆರು ಕಾಸು ಮೂರು ಕಾಸಿಗೆ ಮಾರಲು ಮುಂದಾಗಿದೆ.



2016ರಲ್ಲಿ 9.4 ಶೇಕಡವಿದ್ದ ರಾಷ್ಟ್ರದ ಒಟ್ಟಾರೆ ಆಂತರಿಕ ಉತ್ಪನ್ನವು (GDP) 2019ರ ಜುಲೈ–ಸೆಪ್ಟೆಂಬರ್ ತ್ರೈಮಾಸಿಕದಲ್ಲಿ 4.3 ಶೇಕಡಕ್ಕೆ ಕುಸಿದಿದೆ. ಭಾರತೀಯ ರಿಸರ್ವ್ ಬ್ಯಾಂಕ್ ಸಹಾ 2019–20 ರ ಸಾಲಿನ GDP ದರವನ್ನು ತನ್ನ ಹಿಂದಿನ 6 ಶೇಕಡ ಅಂದಾಜಿನಿಂದ 5 ಶೇಕಡಕ್ಕೆ ಇಳಿಸಿದೆ. ವಾಸ್ತವದಲಿ ಕೇವಲ 1.5 ರಿಂದ 2.5 ಶೇಕಡ ಮಾತ್ರವಾಗಿದೆ ಎಂಬ ವಾದವು ಕೇಳಿ ಬರುತ್ತಿದೆ.

ವಾಹನ ಉತ್ಪನ್ನ–ವಾಹನ ಬಿಡಿ ಭಾಗ ತಯಾರಿಕಾ ಉದ್ಯಮವು ಬೇಡಿಕೆ ಕೊರತೆಯಿಂದಾಗಿ ತೀವ್ರ ಹಿನ್ನೆಡೆ ಅನುಭವಿಸುತ್ತಿದೆ. ಜವಳಿ ಉದ್ಯಮವು ಸಹಾ ಇಂತಹದೆ ಹಿನ್ನಡೆ ಅನುಭವಿಸುತ್ತಿರುವ ವರದಿಗಳಿವೆ. ಈಗಾಗಲೇ ರಾಷ್ಟ್ರಾದ್ಯಂತ ಒಂದು ಲಕ್ಷ ಖಾಯಂಯೇತ್ತರ ಕಾರ್ಮಿಕರನ್ನು ವಾಹನ ತಯಾರಿಕಾ ಉದ್ಯಮದಲ್ಲಿ ಕೆಲಸದಿಂದ ಹೊರ ಹಾಕಲಾಗಿದೆ. ಮತ್ತಷ್ಟು ಉದ್ಯೋಗಗಳು ನಷ್ಟವಾಗಲಿವೆ ಎಂದು ಮಾಲೀಕರ ಸಂಘಗಳೇ ಹೇಳುತ್ತಿವೆ.

ಕೇಂದ್ರ ಸಾಂಖ್ಯಿಕ ಸಂಘಟನೆ (CSO) ಪ್ರಕಟಿಸಬೇಕಿದ್ದ ನಿರುದ್ಯೋಗ ಕುರಿತು ಸರ್ವೇಕ್ಷಣ ವರದಿಯನ್ನು ಚುನಾವಣೆಗೂ ಮುನ್ನ ಪ್ರಕಟಿಸಲು ಬಿಡಲಿಲ್ಲ ಹಾಗಾಗಿ ಅದನ್ನು ಸಿದ್ದಪಡಿಸಿದ್ದ ಇಬ್ಬರು ಅಧಿಕಾರಿಗಳು ರಾಜೀನಾಮೆ ನೀಡಿದ್ದಾರೆ. ಚುನಾವಣೆ ನಂತರ ಪ್ರಕಟವಾಗಿರುವ ಅಂಕಿಅಂಶಗಳ ಪ್ರಕಾರ ಕಳೆದ 40 ವರ್ಷಗಳಲ್ಲೆ ಅತಿ ಹೆಚ್ಚು ನಿರುದ್ಯೋಗವು ಭಾರತದಲ್ಲಿ 2018–19 ರಲ್ಲಿ ದಾಖಲಾಗಿದೆ. ಅಜೀಂ ಪ್ರೇಮ್‌ಜಿ ವಿವಿ ಸಂಶೋಧನೆ ಪ್ರಕಾರ 50 ಲಕ್ಷ ಉದ್ಯೋಗಗಳು ಭಾರತದಲ್ಲಿ ಈ ಕಾಲಾವಧಿಯಲ್ಲಿ ನಷ್ಟವಾಗಿವೆ. ಪ್ರಮುಖವಾಗಿ ನೋಟು ರದ್ಧತಿಯು ಅದಕ್ಕೆ ಕೊಡುಗೆ ನೀಡಿದೆಯಂತೆ.

ಗ್ರಾಹಕ ಉಪಭೋಗ ದರವು ಕಳೆದ 50 ವರ್ಷಗಳಲ್ಲೆ ಅತ್ಯಂತ ಕೆಳಮಟ್ಟಕ್ಕೆ ಇಳಿದಿದೆ ಎಂಬ ಇತ್ತೀಚಿನ ವರದಿಯು ಆರ್ಥಿಕ ನಿಧಾನಗತಿಯು ಆರ್ಥಿಕ ಹಿಂಜರಿತಕ್ಕೆ ಎಡೆ ಮಾಡುತ್ತಿರುವ ಅಂಶವನ್ನು ತೋರುತ್ತದೆ.



2019 ರ ಜೂನ್‌ನಲ್ಲಿ ಆರ್ಥಿಕ ನಿಧಾನಗತಿಯಿಲ್ಲ ಎನ್ನುತ್ತಿದ್ದ ಕೇಂದ್ರ ಸರ್ಕಾರವು ಆಗಸ್ಟ್‌ನಲ್ಲಿ ಅದನ್ನು ಒಪ್ಪಿಕೊಂಡಿದೆ. ಸೆಪ್ಟೆಂಬರ್–ಅಕ್ಟೋಬರ್‌ನಲ್ಲಿ ನಿಧಾನಗತಿ ತಡೆಗಟ್ಟುವ ನೆಪದಲ್ಲಿ ಕಾರ್ಪೊರೇಟ್ ಬಂಡವಾಳಿಗರಿಗೆ 1 ಲಕ್ಷ 48 ಸಾವಿರ ಕೋಟಿ ರೂಗಳ ಕಾರ್ಪೊರೇಟ್ ತೆರಿಗೆ ರಿಯಾಯಿತಿ ಮುಂತಾದ ಕೊಡುಗೆಗಳನ್ನು ನೀಡಿದೆ. ಆದರೂ ಸಹಾ ವಾಹನ ಉತ್ಪಾದನ ತಯಾರಿಕಾ ವಲಯದ ನಿಧಾನಗತಿ ಚೇತರಿಸಿಕೊಂಡಿಲ್ಲ ಬದಲಾಗಿ ಅದು ಆಳಗೊಳ್ಳುತ್ತಿದೆ. ಹಲವು ಕೈಗಾರಿಕೆಗಳಲ್ಲಿ ಲೇ–ಆಫ್, ರಿಟ್ರೆಂಚ್‌ಮೆಂಟ್, ಒಂದೇ ಪಾಳಿ ಕೆಲಸ, ಉತ್ಪಾದನಾರಹಿತ ದಿನ, ಬಲವಂತದ ರಜೆ, ಬ್ಲಾಕ್ ಕ್ಲೋಶರ್‌ನಂತಹ ಕ್ರಮಗಳನ್ನು ಅನುಸರಿಸಲಾಗಿದೆ. ಕಾರ್ಮಿಕರ ಉದ್ಯೋಗ, ವೇತನ, ಗಳಿಕೆ ನಷ್ಟವಾಗುತ್ತಿದೆ. ಬಂಡವಾಳಗಾರರಿಗೆ ಲಕ್ಷಾಂತರ ಕೊಟಿ ರೂಗಳ ರಿಯಾಯಿತಿಗಳು ಸಿಗುತ್ತಿವೆ.

ಕೇಂದ್ರ ಸರ್ಕಾರವು ತನ್ನ 2019–20 ರ ಹಣಕಾಸು ವರ್ಷದ ಬಜೆಟ್‌ನಲ್ಲಿ ಲೆಕ್ಕಕ್ಕೆ ಸಿಗದ 1.75 ಲಕ್ಷ ಕೋಟಿ ರೂಗಳನ್ನು ಭರಿಸಲು, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಮೀಸಲು ನಿಧಿಯಿಂದ 1.75 ಲಕ್ಷ ಕೋಟಿ ರೂಗಳನ್ನು ಪಡೆದುಕೊಂಡಿದೆ. ಮೀಸಲು ನಿಧಿ ನೀಡಬೇಕೆಂಬ ಕೇಂದ್ರ ಸರ್ಕಾರದ ಒತ್ತಡವನ್ನು ಪರೋಕ್ಷವಾಗಿ ವಿರೋಧಿಸಿ ಇಬ್ಬರು ಗೌರ್ನರ್‌ಗಳು ರಾಜೀನಾಮೆ ನೀಡಿದ್ದಾರೆ. ಅಂತಿಮವಾಗಿ ಮೀಸಲು ನಿಧಿಯನ್ನು ಕೇಂದ್ರ ಸರ್ಕಾರವು ತನ್ನ ಖರ್ಚುಗಳಿಗೆ ಬಳಸಿಕೊಳ್ಳಲು ಪಡೆಯುವಲ್ಲಿ ಯಶಸ್ವಿಯಾಗಿದೆ. ಇದೀಗ ಖಃಖ ತನ್ನಲ್ಲಿನ ಚಿನ್ನದ ಮೀಸಲನ್ನು ಮಾರಲು ಸಹಾ ಮುಂದಾಗಿದೆ.

ಭಾರತದ 9 ಶ್ರೀಮಂತರ ಆಸ್ತಿಯು ಕೆಳಹಂತದ 50 ಶೇಕಡ ಜನಸಂಖ್ಯೆಯ ಆಸ್ತಿಗೆ ಸಮವಾಗಿದೆ. ರಾಷ್ಟ್ರೀಯ ಸಂಪತ್ತಿನ 51.3 ಶೇಕಡವು ಒಂದು ಶೇಕಡ ಜನರ ಕೈಯಲ್ಲಿದೆ. 77.4 ಶೇಕಡವು 10 ಶೇಕಡ ಜನರ ಕೈಯಲ್ಲಿದೆ. 2014 ರಿಂದ 2018ರ ನಡುವೆ ಮುಖೇಶ್ ಅಂಬಾನಿಯ ಆಸ್ತಿಯು 23 ಶತಕೋಟಿ ಡಾಲರ್‌ಗಳಿಂದ 55 ಶತಕೋಟಿ ಡಾಲರ್‌ಗೆ ಹೆಚ್ಚಾಗಿದೆ. (1,61,000 ಕೋಟಿಯಿಂದ 385000 ಕೋಟಿ ರೂಗಳಿಗೆ ಹೆಚ್ಚಿದೆ). ಗೌತಮ್ ಅದಾನಿ ಆಸ್ತಿಯು (ಮೋದಿಯವರು ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ) 5000 ಪಟ್ಟು ಹೆಚ್ಚಾಗಿದೆ. ಆತನ ಆಸ್ತಿಯು ಕಳೆದ 4 ವರ್ಷಗಳಲ್ಲಿ 2.6 ಶತಕೋಟಿ ಡಾಲರ್‌ಗಳಿಂದ 11.9 ಶತಕೋಟಿ ಡಾಲರ್‌ಗಳಿಗೆ ಹೆಚ್ಚಾಗಿದೆ, (18200 ಕೋಟಿ ರೂಗಳಿಂದ 83300 ಕೋಟಿ ರೂಗಳಿಗೆ ಹೆಚ್ಚಾಗಿದೆ). ರಾಮದೇವ್‌ರ ಪತಂಜಲಿ ಕಂಪನಿಯು 6 ಶತಕೋಟಿ ಡಾಲರ್ ಸಂಪನ್ನವಾಗಿದೆ. (42 ಸಾವಿರ ಕೋಟಿ ರೂ.ಗಳು) ಇಂದು ರಾಮದೇವ್ ರಾಷ್ಟ್ರದ 20 ಅತಿ ಶ್ರೀಮಂತರದಲ್ಲಿ ಒಬ್ಬರಾಗಿದ್ದಾರೆ. 1982ರಲ್ಲಿ ಕೇವಲ 6.2 ಶೇಕಡ ರಾಷ್ಟ್ರೀಯ ಆದಾಯ ಹೊಂದಿದ್ದ ಶ್ರೀಮಂತ ಒಂದು ಶೇಖಡ ಜನ, 2013–14ರಲ್ಲಿ 21.7 ಶೇಕಡವನ್ನು ರಾಷ್ಟ್ರೀಯ ಆದಾಯ ಹೊಂದಿದ್ದಾರೆ. ಪ್ರಸ್ತುತ ಶೇಕಡ 1 ರಷ್ಟು ಮನೆತನಗಳು ಒಟ್ಟು ಸಂಪತ್ತಿನ 60 ಶೇಕಡ ಹೊಂದಿವೆ. ಭಾರತದಲ್ಲಿ ಸಂಪತ್ತಿನ ಅಸಮಾನತೆ ಅಮೇರಿಕಾಗಿಂತ ಹೆಚ್ಚಾಗಿದೆ. ಒಟ್ಟಾರೆ ಶ್ರೀಮಂತರು ಮತ್ತು ಬಡವರ ನಡುವಿನ ಅಂತರವು ತೀವ್ರತರವಾಗಿ ಹೆಚ್ಚುತ್ತಿದೆ.

ರೈತರು ಬೆಳೆದ ಬೆಳೆಗಳಿಗೆ ನ್ಯಾಯಯುತ ಬೆಲೆ ಸಿಗುತ್ತಿಲ್ಲ. ರೈತರ ಆತ್ಮಹತ್ಯೆಗಳು ಹೆಚ್ಚುತ್ತಿವೆ. ನೆರೆ, ಬರ, ಪ್ರವಾಹ ಪೀಡಿತ ರೈತಾಪಿ ಜನತೆಗೆ ಅಗತ್ಯ ಪರಿಹಾರ ಇಲ್ಲದಾಗುತ್ತಿದೆ. ನಿರಂತರವಾಗಿ ರಾಷ್ಟ್ರೀಯ ಉತ್ಪನ್ನದಲ್ಲಿನ ಕೃಷಿ ವಲಯದ

ಪುಟ 10 ನೋಡಿ

ಮತ್ತೊಂದು ಸಾರ್ವತ್ರಿಕ ಮುಷ್ಕರ– ಏಕೆ ಈ ಮುಷ್ಕರ?

ಪುಟ 9 ರಿಂದ

ಪಾಲು ಇಳಿಮುಖವಾಗುತ್ತಿದೆ. ಕೃಷಿ ತ್ಯಜಿಸುವ, ಉಳಿಮೆಯೋಗ್ಯ ಭೂಮಿಯನ್ನು ಉಳಿಮೆ ಮಾಡದೆ ಬಿಡುವ ಪ್ರಮಾಣ ಹೆಚ್ಚುತ್ತಿದೆ. ರೈತಾಪಿ ಜನತೆಗೆ ಉದ್ಯೋಗ ಒದಗಿಸುವ ಗ್ರಾಮೀಣ ಉದ್ಯೋಗ ಖಾತ್ರಿಯನ್ನು ಅಗತ್ಯ ಬಜೆಟರಿ ಅನುದಾನವಿಲ್ಲದೆ ಸೊರಗಿಸಲಾಗುತ್ತಿದೆ. ಕೆಲಸ ನೀಡದ, ಮಾಡಿದ ಕೆಲಸಕ್ಕೆ ವೇತನ ನೀಡದ, ಸತಾಯಿಸುವ ಬೆಳವಣಿಗೆ ತೀವ್ರವಾಗುತ್ತಿದೆ. ವೇತನ ಸಂಹಿತೆ–2019 ರಿಂದ ಗ್ರಾಮೀಣ ಉದ್ಯೋಗ ಖಾತ್ರಿಯೋಜನೆಯನ್ನು ಹೊರಗಿಡಲಾಗಿದೆ. ರೈತರ ಸಾಲ ಮನ್ನಾಕ್ಕೆ ಕ್ರಮವಹಿಸುತ್ತಿಲ್ಲ. ಉತ್ಪಾದನಾ ವೆಚ್ಚಕ್ಕಿಂತ ಅರ್ಧಪಟ್ಟು ಹೆಚ್ಚು ಬೆಲೆ ನಿಗದಿ ಮಾಡಬೇಕೆಂಬ ಡಾ॥ ಸ್ವಾಮಿನಾಥನ್ ಆಯೋಗದ ಶಿಫಾರಸ್ಸನ್ನು ಜಾರಿಗೆ ತರುವ ಕುರಿತು ಚಕಾರ ಎತ್ತುತ್ತಿಲ್ಲ.

ನೂತನ ಶಿಕ್ಷಣ ನೀತಿಯ ಮೂಲಕ ಶಿಕ್ಷಣದ ಕೇಂದ್ರೀಕರಣ, ಖಾಸಗೀಕರಣ ವಾಣಿಜ್ಯೀಕರಣಕ್ಕೆ ಮುಂದಾಗಿದೆ. ಖಾಸಗಿ ವಿಶ್ವವಿದ್ಯಾಲಯಗಳಿಗೆ ಲಂಗು ಲಗಾಮಿಲ್ಲದೆ ಶಿಕ್ಷಣದ ಮಾರಾಟಕ್ಕೆ ಅನುವು ಮಾಡುತ್ತಿದೆ. ಶಿಕ್ಷಣದ ಕೋಮುವಾದಿಕರಣಕ್ಕೆ, ವಿದ್ಯಾರ್ಥಿಗಳ ಶಿಕ್ಷಕರ ಪ್ರಜಾಸತ್ತಾತ್ಮಕ ಹಕ್ಕುಗಳ ಹರಣಕ್ಕೆ ಮುಂದಾಗಿದೆ. ರಾಷ್ಟ್ರಮಟ್ಟದ ಅಡಳಿತ ಪ್ರವೇಶ ಪರೀಕ್ಷೆ (NEET) ಮೂಲಕ ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ಅನುಕೂಲ ಮಾಡುವ, ವಿದ್ಯಾರ್ಥಿ–ಪೋಷಕರ ಮೇಲೆ ಹೊರೆ ಹೊರಿಸುವ ಕ್ರಮ ವಹಿಸಿದೆ. ಜವಹರಲಾಲ್ ನೆಹರು ವಿ.ವಿ.ಯಂತಹ ವೈಚಾರಿಕ ಪ್ರತಿರೋಧದ ಕೇಂದ್ರಗಳನ್ನು ಅದರ ವಿದ್ಯಾರ್ಥ ಶಿಕ್ಷಕರನ್ನು ಗುರಿಯಾಗಿಸಿ ದಾಳಿ ನಡೆಸುತ್ತಿದೆ.

ಕಳೆದ 29 ವರ್ಷಗಳಿಂದ 18 ಮುಷ್ಕರಗಳ ಮೂಲಕ ಹಿಮ್ಮೆಟ್ಟಿಸಲಾಗಿದ್ದ ಈ ಸುಧಾರಣೆ ನೆಪದ ದುಡಿಯುವ ಜನತೆಯ ಹಕ್ಕುಗಳ ಮತ್ತು ಜನತೆಯ ಆಸ್ತಿಯ ದರೋಡೆಯನ್ನು ಹಾಲಿ ಕೇಂದ್ರ ಸರ್ಕಾರವು ತನಗೆ ಎರಡನೇ ಬಾರಿ ಲಭಿಸಿರುವ ಅಧಿಕಾರ ಮತ್ತು ಸಂಖ್ಯಾಬಲವನ್ನು ಬಳಸಿ ಮಾಡಿ ಮುಗಿಸಲು ಮುಂದಾಗಿದೆ.

ಅದೇ ವೇಳೆ ಜನತೆಯ ದಿಕ್ಕನ್ನು ಬದುಕಿನ ಈ ಪ್ರಶ್ನೆಗಳಿಂದ ಇತರೆಡೆಗೆ ಸೆಳೆಯುವ ಯತ್ನಗಳು ಆಳುವ ವರ್ಗದ ಭಾಗವಾಗಿ ತೀವ್ರವಾಗಿ ನಡೆದಿವೆ. ಹುಸಿ ರಾಷ್ಟ್ರೀಯತೆ, ಪೌರತ್ವದ ಪ್ರಶ್ನೆ, ಮಂದಿರ–ಮಸೀದಿ ವಿಚಾರ, ಭಯೋತ್ಪಾದನೆ–ಭ್ರಷ್ಟಾಚಾರ–ಕಪ್ಪುಹಣ ನಿರ್ಮೂಲನೆ ನೆಪದ ನೋಟು ರದ್ದತಿ, ಒಂದು ದೇಶ–ಒಂದು ತೆರಿಗೆ ಹೆಸರಿನ ಜನತೆಯ ಮೇಲೆ ಹೊರೆ ಹೊರಿಸುವ GST, ತ್ರಿಪಲ್ ತಲಾಕ್, ಕಾಶ್ಮೀರ 370 ರದ್ದತಿ ಮುಂತಾದ ಹಲವು ವಿಚಾರಗಳನ್ನು ಹರಿಬಿಟ್ಟು ಜಾರಿಗೊಳಿಸಲು ಕೇಂದ್ರ ಸರ್ಕಾರ ಮುಂದಾಗಿದೆ.

ಕೇಂದ್ರ ಸರ್ಕಾರದ ನೀತಿಗಳನ್ನು ಪ್ರಶ್ನೆ ಮಾಡುವವರನ್ನು ದೇಶದ್ರೋಹಿಗಳು, ಖಾನ್‌ಮಾರ್ಕೆಟ್ ಗ್ಯಾಂಗ್, ತುಕಡೆ–ತುಕಡೆ ಗ್ಯಾಂಗ್‌ಗಳು, ನಗರ ನಕ್ಸಲೀಯರು, ಗಂಜಿ ಗಿರಾಕಿಗಳು, ದೇಶದ್ರೋಹಿಗಳು ಎಂದೆಲ್ಲಾ ಬಿಂಬಿಸಲು ಯತ್ನಿಸಲಾಗಿದೆ. ಕಾನೂನುಗಳಿಗೆ ತಿದ್ದುಪಡಿ ತಂದು ಹೋರಾಟಗಾರರನ್ನು ಸಂಘಟಿತ ಅಪರಾಧ ವ್ಯಾಪ್ತಿಗೆ ತರಲು UAPA (ಕಾನೂನು ಬಾಹಿರ ಚಟುವಟಿಕೆಗಳ ನಿಯಂತ್ರಣ ಕಾಯ್ದೆ) ಗೆ ತಿದ್ದುಪಡಿ ಮಾಡಲಾಗಿದೆ. ಭಾರತೀಯ ಪೌರತ್ವ ಕಾಯ್ದೆಗೆ ತಿದ್ದುಪಡಿ ಮತ್ತು ರಾಷ್ಟ್ರವ್ಯಾಪಿ ನಾಗರೀಕರ ನೊಂದಾವಣಿಗೆ ಭಾರತದಲ್ಲಿನ ಅಕ್ರಮ ವಲಸಿಗರನ್ನು ಹೊರಹಾಕುವ ಹೆಸರಿನಲ್ಲಿ ಮುಂದಾಗಿದೆ. ವಾಸ್ತವದಲ್ಲಿ ಪ್ರಸ್ತುತ ಕೇಂದ್ರ ಸರ್ಕಾರದ ಮೊದಲ 3 ವರ್ಷಗಳಲ್ಲಿ (2014–17) 53 ಲಕ್ಷ ಅಕ್ರಮ ವಲಸಿಗರು ಭಾರತಕ್ಕೆ ಬಂದಿದ್ದಾರೆ, ಅದರ ಹಿಂದಿನ (2008–2013) ಐದು ವರ್ಷಗಳಲ್ಲಿ 29 ಲಕ್ಷ ಅಕ್ರಮ ವಲಸಿಗರು ಬಂದಿದ್ದಾರೆ, ರಾಜ್ಯದಲ್ಲಿ 59 ಅಕ್ರಮ ವಲಸಿಗರು ಇದ್ದಾರೆ, ಎಂದು ಅಂಕಿಸಂಖ್ಯೆ ತೋರುತ್ತದೆ. ವಲಸಿಗರು ಅಕ್ರಮವಾಗಿ ನುಸುಳಲು ಬಿಡುವವರು ಇವರೆ, ಅವರನ್ನು ಹೊರಹಾಕುವ ನೆಪದಲ್ಲಿ ಹಿಂದು–ಮುಸ್ಲಿಂ–ವೈರುತ್ವ ರೂಪಿಸಲು ಸಂವಿಧಾನದ, ಆಶಯಕ್ಕೆ ಭಿನ್ನವಾಗಿ ಧರ್ಮಾಧಾರಿತ ಪುರೌತ್ವ ರೂಪಿಸಲು ಹೊರಟಿರುವವರು ಇವರೆ ಎಂಬುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

ಮಹಿಳೆಯರು, ಅಲ್ಪಸಂಖ್ಯಾತರು ಮತ್ತು ದಲಿತರ ಮೇಲಿನ ಹಲ್ಲೆ, ಆಹಾರ, ಉಡುಪು, ಮುಂತಾದ ವಿಚಾರದಲ್ಲಿ ಮೌನವಹಿಸಿ ಒಟ್ಟಾರೆ ಕೇಂದ್ರ ಸರ್ಕಾರವು ತನ್ನ ವಿಫಲ ಆರ್ಥಿಕ ನೀತಿಗಳ ದುಷ್ಪರಿಣಾಮಗಳು ಮತ್ತು ಜನತೆಯ ಸಂಕಷ್ಟಗಳ ವಿರುದ್ಧ ಹೊರ ಹೊಮ್ಮುತ್ತಿರುವ ಪ್ರತಿರೋಧವನ್ನು ದಿಕ್ಕು ತಪ್ಪಿಸಲು ತೀವ್ರವಾಗಿ ಯತ್ನಿಸುತ್ತಿದೆ. ಸಾಮೂಹಿಕ ಹತ್ಯೆ (Mob lynching), ಮಹಿಳೆಯರ ಮೇಲೆ ದೌರ್ಜನ್ಯ ಮುಂತಾದವುಗಳು ವ್ಯಾಪಕವಾಗುತ್ತಿವೆ. ಅವುಗಳ ನಿಯಂತ್ರಣಕ್ಕೆ ಕ್ರಮಗಳಿಲ್ಲದಾಗಿವೆ. ಸಂವಿಧಾನದ ಮೂಲಭೂತ ಆಶಯಕ್ಕೆ ವ್ಯತಿರಿಕ್ತವಾಗಿ ಹಿಂದೂ ರಾಷ್ಟ್ರದ ಪ್ರತಿಪಾದನೆಯನ್ನು ಬಲಗೊಳಿಸಲಾಗುತ್ತಿದೆ.

ಈ ಎಲ್ಲಾ ಹಿನ್ನೆಲೆಯಲ್ಲಿ 12 ಅಂಶಗಳ ಬೇಡಿಕೆಗಳ ಆಧಾರಿತ ಪರ್ಯಾಯ ಆರ್ಥಿಕ ನೀತಿಗಳಿಗಾಗಿ ಕೇಂದ್ರ ಕಾರ್ಮಿಕ ಸಂಘಟನೆಗಳು 2020 ಜನವರಿ 8 ರ ಮತ್ತೊಂದು ಸಾರ್ವತ್ರಿಕ ಮುಷ್ಕರಕ್ಕೆ ಮುಂದಾಗಿವೆ.

ಸಾರ್ವತ್ರಿಕ ಮುಷ್ಕರದ 12 ಅಂಶಗಳ ಬೇಡಿಕೆಗಳು:

1. ಆರ್ಥಿಕ ನಿಧಾನಗತಿ– ಹಿಂಜರಿತಕ್ಕೆ ಕಾರಣವಾಗಿರುವ ನೀತಿಗಳನ್ನು ಬದಲಾಯಿಸಿ ಕಾರ್ಮಿಕರ ಉದ್ಯೋಗ, ವೇತನ, ಗಳಿಕೆ ರಕ್ಷಣೆಗೆ – ಉದ್ಯೋಗ ಸೃಷ್ಟಿಗೆ ಕ್ರಮವಹಿಸಿ
2. ಕಾರ್ಪೋರೇಟ್ ಬಂಡವಾಳ ಪರ ಕಾರ್ಮಿಕ ವಿರೋಧಿ ಕಾರ್ಮಿಕ ಕಾನೂನುಗಳ ಸಂಹಿತೀಕರಣ ಕೈಬಿಡಬೇಕು, ಕಾರ್ಮಿಕ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು, ಎಲ್ಲಾ ಜಿಲ್ಲೆಗಳಲ್ಲೂ ಕಾರ್ಮಿಕ ನ್ಯಾಯಾಲಯಗಳನ್ನು ಸ್ಥಾಪಿಸಬೇಕು. ಕಾರ್ಮಿಕ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು.
   ಎಲ್ಲಾ ಜಿಲ್ಲೆಗಳಲ್ಲೂ ಕಾರ್ಮಿಕ ನ್ಯಾಯಾಲಯಗಳನ್ನು ಸ್ಥಾಪಿಸಬೇಕು.
3. ರಾಷ್ಟ್ರವ್ಯಾಪಿ ಸಮಾನ ಕನಿಷ್ಠ ವೇತನ ರೂ. 21,000 ನಿಗದಿಪಡಿಸಿ
4. ಗುತ್ತಿಗೆ ಪದ್ಧತಿ ನಿಯಂತ್ರಣಕ್ಕಾಗಿ, ಸಮಾನ ಕೆಲಸಕ್ಕೆ ಸಮಾನ ವೇತನಕ್ಕಾಗಿ, FTE, NEEM, NEESA ಮುಂತಾದ ಪದ್ಧತಿ ರದ್ದತಿಗಾಗಿ
5. ಸಾರ್ವಜನಿಕ ಉದ್ದಿಮೆಗಳ ಷೇರು ವಿಕ್ರಯ – ಖಾಸಗೀಕರಣ ಕೈಬಿಡಬೇಕು:
6. ರಕ್ಷಣೆ, ಕಲ್ಲಿದ್ದಲು, ಬ್ಯಾಂಕಿಂಗ್, ವಿಮೆ ಮುಂತಾದ ನಿರ್ಣಾಯಕ ಆಯಕಟ್ಟಿನ ರಂಗಗಳಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಗೆ ಅವಕಾಶ ನೀಡಬಾರದು
7. ILO 87 ಮತ್ತು 98 ಸಮಾವೇಶಗಳ ಸಂಸ್ತಿನ ಅನುಮೋದನೆಗಾಗಿ ಮತ್ತು ಕಾರ್ಮಿಕ ಸಂಘಗಳ ಕಡ್ಡಾಯ ಮಾನ್ಯತೆಗೆ ಶಾಸನಕ್ಕಾಗಿ
8. ಸ್ಕೀಂ ನೌಕರರನ್ನು ನೌಕರರೆಂದು ಪರಿಗಣಿಸಬೇಕು, ಸ್ಕೀಂ ನೌಕರರಿಗೂ ಕನಿಷ್ಠ ವೇತನ ನೀಡಬೇಕು
9. ಅಸಂಘಟಿತಕಾರ್ಮಿಕರಿಗೆಶಾಸನಬದ್ಧಭವಿಷ್ಯನಿಧಿ ಹಾಗೂ ಕಲ್ಯಾಣ ಯೋಜನೆಗಳಿಗಾಗಿ
10. ಖಾತ್ರಿ ಪಿಂಚಣಿಗಾಗಿ, ಮಾಸಿಕ ಪಿಂಚಣಿ ಕನಿಷ್ಠ 10 ಸಾವಿರಕ್ಕಾಗಿ
11. ಬೆಲೆ ಏರಿಕೆ ನಿಯಂತ್ರಣಕ್ಕಾಗಿ ಸಾರ್ವತ್ರಿಕ ಪಡಿತರಕ್ಕಾಗಿ
12. ರೈತರ ಬೆಳೆಗಳಿಗೆ ನ್ಯಾಯಯುತ ಬೆಲೆಗಳಿಗಾಗಿ ಡಾ. ಸ್ವಾಮಿನಾಥನ್ ವರದಿ ಜಾರಿಗಾಗಿ, ಆತ್ಮಹತ್ಯೆ ತಡೆಗಾಗಿ, ಸಲ ಮನ್ನಾಕ್ಕಾಗಿ, ಗ್ರಾಮೀಣ ಉದ್ಯೋಗ ಖಾತ್ರಿ ಬಲಪಡಿಸಿ

ಕಟಕಟೆಯಿಂದಲೇ ಸಾಮ್ರಾಜ್ಯಶಾಹಿಗಳಿಗೆ ಸವಾಲೆಸೆದ ಮೀರತ್ ಪಿತೂರಿ ಪ್ರಕರಣ

ಪುಟ 8 ರಿಂದ

ಪಕ್ಷಗಳನ್ನು ಸ್ಥಾಪನೆ ಮಾಡಿದ್ದು' ಮತ್ತು 'ಗಂಭೀರ ಮಹತ್ವದ ಸಂಗತಿಯೆಂದರೆ ಬೊಂಬಾಯಿ ಪಕ್ಷದ ಸದಸ್ಯರು ಬೊಂಬಾಯಿ ಜವಳಿ ಕಾರ್ಖಾನೆಯ ಕಾರ್ಮಿಕರ ಮೇಲೆ ಹೊಂದಿದ್ದ ಹಿಡಿತ; 1928ರ ಮುಷ್ಕರದ ಸಮಯದಲ್ಲಿ ಅವರು ಚಲಾಯಿಸಿದ ನಿಯಂತ್ರಣದ ಹರವು ಎಷ್ಟಿತ್ತೆಂಬುದನ್ನು ಮತ್ತು ಮುಷ್ಕರ ಕೊನೆಗೊಂಡಮೇಲೆ ಗಿರಣಿ ಕಾಮಗಾರ್ ಸಂಘದಲ್ಲಿ ಆಮೂಲಾಗ್ರವಾದ ಕ್ರಾಂತಿಕಾರಿ ನೀತಿಯನ್ನು ಪ್ರತೀಕರಿಸುವಲ್ಲಿ ಅವರ ಸಾಧನೆಗಳು ಅವರು ಪಡೆದ ಯಶಸ್ಸನ್ನು ತೋರಿಸುತ್ತವೆ."

ಒಟ್ಟಾರೆಯಾಗಿ 27 ಆರೋಪಿಗಳು ಶಿಕ್ಷೆಗೆ ಒಳಗಾದರು. ಮುಜಾಫರ್ ಅಹಮದ್ ಅವರಿಗೆ ಜೀವಾವಧಿ ಗಡೀಪಾರು; ಎಸ್.ಎ.ಡಾಂಗೆ, ಫಿಲಿಪ್ ಸ್ಪ್ರಾಟ್, ಎಸ್.ವಿ.ಘಾಟೆ, ಕೆ.ಎನ್.ಜೋಗ್ಳೇಕರ್, ಆರ್.ಎಸ್.ನಿಂಬ್ಕರ್ ಅವರುಗಳಿಗೆ 20 ವರ್ಷಗಳ ಗಡೀಪಾರು; ಬಿ.ಎಫ್.ಬ್ರಾಡ್ಲಿ ಎಸ್.ಎಸ್.ಮೀರಜ್ಕರ್, ಶೌಕತ್ ಉಸ್ಮಾನಿ ಅವರುಗಳಿಗೆ 10 ವರ್ಷಗಳ ಗಡೀಪಾರು; ಮೀರ್ ಅಬ್ದುಲ್ ಮಜೀದ್, ಸೋಹನ್ ಸಿಂಗ್ ಜೋಶ್, ಧರಣೀಕಾಂತ ಗೋಸ್ವಾಮಿ ಅವರುಗಳಿಗೆ 7 ವರ್ಷಗಳ ಗಡೀಪಾರು; ಅಯೋಧ್ಯಾ ಪ್ರಸಾದ್, ಗಂಗಾಧರ್ ಅಧಿಕಾರಿ, ಪಿ.ಸಿ.ಜೋಶಿ, ಎಂ.ಜಿ.ದೇಸಾಯ್ ಅವರುಗಳಿಗೆ 5 ವರ್ಷಗಳ ಗಡೀಪಾರು; ಗೋಪೆನ್ ಚಕ್ರವರ್ತಿ, ಗೋಪಾಲ್ ಚಂದ್ರ ಬಸಕ್, ಹಚಿನ್ಸನ್, ರಾಧಾರಮಣ್ ಮಿತ್ರ, ಎಸ್.ಹೆಚ್. ಜಾಬ್‌ವಾಲಾ, ಕೆ.ಎನ್.ಸೆಹಗಲ್ ಅವರುಗಳಿಗೆ 4 ವರ್ಷಗಳ ಉಗ್ರಶಿಕ್ಷೆ; ಶಂಸುಲ್ ಹೂಡಾ, ಅರ್ಜುನ್ ಆತ್ಮಾರಾಮ್ ಅಳ್ವೆ, ಜಿ.ಆರ್.ಕಸ್ಲೆ, ಗೌರಿ ಶಂಕರ್ ಮತ್ತು ಎಲ್.ಆರ್.ಕದಮ್ ಅವರುಗಳಿಗೆ 3 ವರ್ಷಗಳ ಉಗ್ರಶಿಕ್ಷೆ.

ತೀರ್ಪು ಬಂದ ನಂತರ, ಎಲ್ಲಾ ಅಪರಾಧಿಗಳೂ ಅಲಾಹಾಬಾದ್ ಹೈಕೋರ್ಟಿಗೆ ಮನವಿ ಸಲ್ಲಿಸಿದರು; ಅದು ಆಗಸ್ಟ್ 1933 ರಲ್ಲಿ ತೀರ್ಪು ನೀಡಿತು. 9 ಜನರ ಮೇಲಿನ ಎಲ್ಲಾ ಆರೋಪಗಳನ್ನು ಹೈಕೋರ್ಟ್ ವಜಾಗೊಳಿಸಿತು; ಮತ್ತು ಇತರರಿಗೆ ಶಿಕ್ಷೆಯ ಪ್ರಮಾಣವನ್ನು ಕಠಿಣ ಶಿಕ್ಷೆಗೆ ಇಳಿಸಲಾಯಿತು. ಅವರೆಲ್ಲರೂ ಅದಾಗಲೇ ಜೈಲು ಶಿಕ್ಷೆ ಅನುಭವಿಸಿದ್ದನ್ನು ಪರಿಗಣಿಸಿ ನವಂಬರ್ 1933ರಲ್ಲಿ ಎಲ್ಲರನ್ನೂ ಬಿಡುಗಡೆ ಮಾಡಲಾಯಿತು.

ಇಡೀ ವಿಚಾರಣೆಯು ಜಗತ್ತಿನಾದ್ಯಂತ ವ್ಯಾಪಕ ಪ್ರಚಾರ ಪಡೆಯಿತು ಮತ್ತು ಕಾರ್ಮಿಕ ವರ್ಗದ ಸೌಹಾರ್ದತೆಯನ್ನು ಪ್ರೇರೇಪಿಸಿತು. ಮೀರಟ್ ವಿಚಾರಣೆಯು ಪ್ರಾಯಶಃ ಅದ್ವಿತೀಯವಾದದ್ದು. ಏಕೆಂದರೆ ಅದು ಭಾರತದಲ್ಲಿ ಮತ್ತು ವಿದೇಶಗಳಲ್ಲಿ ಮುಖ್ಯವಾಗಿ ಬ್ರಿಟನ್ನಿನಲ್ಲಿ, ಒಂದು ಸಂಘಟಿತ ಚಳುವಳಿಯ ರೂಪದಲ್ಲಿ ಬಲವಾದ ಸೌಹಾರ್ದವನ್ನು ಗಳಿಸಿತು. ಕಮ್ಯುನಿಸ್ಟ್ ಅಂತರ್‌ರಾಷ್ಟ್ರೀಯವು ಬಂಧನವನ್ನು ಖಂಡಿಸಿತು ಮತ್ತು ಬ್ರಿಟಿಷ್ ಕಾರ್ಮಿಕರು ಹಾಗೂ ಕಮ್ಯುನಿಸ್ಟರು ಒಂದು ದೃಢ ಸೌಹಾರ್ದ ಆಂದೋಲನವನ್ನು ಕಟ್ಟಿದರು, ಬಂಧಿತರಿಗೆ ನಿಧಿಗಳನ್ನು ಸಂಗ್ರಹಿಸಿದರು. ತೀವ್ರಗಾಮಿ ಬ್ರಿಟಿಷ್ ಪತ್ರಿಕೆಗಳು ಈ ವಿಷಯಕ್ಕೆ ಹೆಚ್ಚು ಪ್ರಚಾರ ಕೊಟ್ಟವು ಮತ್ತು ವಿಚಾರಣೆಯುದ್ದಕ್ಕೂ ಬಂಧಿತರ ಪರವಾಗಿ ಸಹಾನುಭೂತಿ ವ್ಯಕ್ತಪಡಿಸಿದವು. 1929 ರಿಂದ 1933 ರ ಕೊನೆಯವರೆಗೆ, ಮೀರಟ್ ಬಂಧಿತರಿಗಾಗಿನ ಸೌಹಾರ್ದದ ಚಳುವಳಿ ಒಂದು ಸಮರಶೀಲ ರಾಜಕೀಯ ಚಳುವಳಿಯಾಗಿ ಪರಿವರ್ತನೆಗೊಂಡಿತು; ಅದು ಭಾರತದ ಸ್ವಾತಂತ್ರ್ಯ ಚಳುವಳಿಗೆ ಬೆಂಬಲವಾಗಿ ಸಾರ್ವಜನಿಕ ಅಭಿಪ್ರಾಯವನ್ನು ಮೂಡಿಸುವಲ್ಲಿ ಸಹಾಯಕವಾಯಿತು.

ಭಗತ್ ಸಿಂಗ್ ಮತ್ತವರ ಒಡನಾಡಿಗಳು, ತಾವೇ (ಲಾಹೋರ್ ಪಿತೂರಿ ಪ್ರಕರಣದಲ್ಲಿ) ವಿಚಾರಣೆಗೆ ಒಳಗಾಗಿದ್ದರೂ ಮೀರಟ್ ಬಂಧಿತರಿಗೆ ತಮ್ಮ ಬೆಂಬಲ ವ್ಯಕ್ತಪಡಿಸಿದರು. ಮದ್ರಾಸ್ ಪ್ರಾಂತದ ಸ್ವಾಭಿಮಾನ ಚಳುವಳಿಯ ಮುಖಂಡ ಪೆರಿಯಾರ್ ಇ.ವಿ. ರಾಮಸ್ವಾಮಿ ಮೀರಟ್ ಬಂಧಿತರ ಪರವಾಗಿ ಬಹಿರಂಗವಾಗಿಯೇ ಸಹಾನುಭೂತಿ ವ್ಯಕ್ತಪಡಿಸಿದರು. ಗಾಂಧಿಯನ್ನೂ ಒಳಗೊಂಡಂತೆ ಅನೇಕ ಕಾಂಗ್ರೆಸ್ ನಾಯಕರು ಬ್ರಿಟಿಷರನ್ನು ಖಂಡಿಸಿ ಮೀರಟ್ ಬಂಧಿತರಿಗೆ ಸಹಾನುಭೂತಿ ವ್ಯಕ್ತಪಡಿಸಿದರು.

ಕಲ್ಕತ್ತಾ, ಬೊಂಬಾಯಿ ಮತ್ತಿತರ ಕಾರ್ಮಿಕ ವರ್ಗದ ಪ್ರಾಬಲ್ಯವಿದ್ದ ಕಡೆಗಳಲ್ಲೆಲ್ಲಾ ಕಾರ್ಮಿಕರು ತಮ್ಮ ಮುಖಂಡರ ಬಂಧನವನ್ನು ಪ್ರತಿಭಟಿಸಿ ಕೆಲಸ ನಿಲ್ಲಿಸಿದರು. ಎಐಟಿಯುಸಿ ಬಹಿರಂಗವಾಗಿಯೇ ವಿಚಾರಣೆಯನ್ನು ಖಂಡಿಸಿತು. ಹಲವಾರು ನಗರಗಳಲ್ಲಿ ವಿದ್ಯಾರ್ಥಿಗಳು ಮತ್ತು ಯುವಜನರು ಪ್ರತಿಭಟನೆಗಳಲ್ಲಿ ಸೇರಿಕೊಂಡರು.

ಮೀರಟ್ ಸೌಹಾರ್ದ ಚಳುವಳಿಯು ಕಾರ್ಮಿಕ ವರ್ಗದ ಶಕ್ತಿ ಸಾಮರ್ಥ್ಯವನ್ನು ತೋರ್ಪಡಿಸಿತು. ಭಾರತದಲ್ಲಿ, ಈ ವಿಚಾರಣೆಯು ಕಮ್ಯುನಿಸ್ಟರಿಗೆ ಒಂದು ಆದರ್ಶ ವೇದಿಕೆಯಾಗಿ ಒಂದು ಸಮಾನ ತಿಳುವಳಿಕೆಯ ಆಧಾರದಲ್ಲಿ ಕಾರ್ಯತಂತ್ರಗಳನ್ನು ರೂಪಿಸಲು ಮತ್ತು ವಿಶಾಲ ತಳಹದಿಯಲ್ಲಿ ಪ್ರಚಾರ ಮಾಡಲು ಅವಕಾಶ ಒದಗಿಸಿತು. 1933 ರ ಅಂತ್ಯದಲ್ಲಿ ಕಮ್ಯುನಿಸ್ಟ್ ಬಂಧಿತರ ಬಿಡುಗಡೆಯಾದ ನಂತರ, ಪಕ್ಷವು ಒಂದು ಪ್ರಬಲವಾದ ರಾಜಕೀಯ ಹಾಗೂ ಸಂಘಟನಾತ್ಮಕ ಬುನಾದಿಯನ್ನು ಹೊಂದಿ ಚಟುವಟಿಕೆಗಳನ್ನು ಹರಡುವಲ್ಲಿ ಪಕ್ಷ ಸಮರ್ಥವಾಯಿತು. ರಾಷ್ಟ್ರೀಯ ವಿಮೋಚನೆಗೆ ಪರ್ಯಾಯ ಹಾದಿಯನ್ನು ಅರಸುತ್ತಿದ್ದ ಕ್ರಾಂತಿಕಾರಿ ರಾಷ್ಟ್ರೀಯವಾದಿಗಳ ನಡುವೆ ತನ್ನ ಬೆಂಬಲ ನೆಲೆಯನ್ನು ವಿಸ್ತರಿಸುವಲ್ಲಿ ಕೂಡ ಯಶಸ್ಸನ್ನು ಪಡೆಯಿತು.

ಏಕಕಾಲದಲ್ಲಿ ನಡೆಯುತ್ತಿದ್ದ ಮೀರಟ್ ಪಿತೂರಿ ಪ್ರಕರಣ ಮತ್ತು ಲಾಹೋರ್ ಪಿತೂರಿ ಪ್ರಕರಣಗಳಲ್ಲಿನ ಸಂಗತಿಗಳು ಮತ್ತು ವಾದಗಳು, ಭಾರತದ ಲಕ್ಷಾಂತರ ಯುವಜನರಿಗೆ ಸಾಮೂಹಿಕ ಕ್ರಾಂತಿಕಾರಿ ಹೋರಾಟಗಳ ಹಾದಿಯನ್ನು ಆಯ್ಕೆಮಾಡುವಲ್ಲಿ ಸಹಾಯ ಮಾಡಿದವು.

ಸಿಪಿಐ ಕಛೇರಿಗೆ ಬೆಂಕಿ ಇಟ್ಟವರ ವಿರುದ್ಧ ಪ್ರತಿಭಟನೆ

ಭಾರತ ಕಮ್ಯೂನಿಸ್ಟ್ ಪಕ್ಷ–ಸಿಪಿಐ ರಾಜ್ಯ ಸಮಿತಿ ಕಾರ್ಯಾಲಯವು ಬೆಂಗಳೂರಿನ ವಯ್ಯಾಲಿಕಾವಲ್ ನಲ್ಲಿರುವ ಘಾಟೆ ಭವನಕ್ಕೆ 24 ಡಿಸೆಂಬರ್ 2019 ರ ಮಧ್ಯರಾತ್ರಿ ಪೆಟ್ರೋಲ್ ಸುರಿದು ಬೆಂಕಿ ಇಟ್ಟ ಪರಿಣಾಮವಾಗಿ ಹತ್ತಾರು ಬೈಕುಗಳು ಆಹುತಿಯಾದವು. ಇಂತಹ ಹೇಡಿತನ ಕೃತ್ಯವನ್ನು ಖಂಡಿಸಿ ಎಡಪಕ್ಷಗಳ ನೇತೃತ್ವದಲ್ಲಿ ಮಲ್ಲೇಶ್ವರಂ ವೃತ್ತದಲ್ಲಿರುವ ಕುವೆಂಪು ಪ್ರತಿಮೆ ಮುಂಭಾಗ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿತ್ತು.

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಮುಖಂಡರು ದೇಶದಲ್ಲಿ ಹೆಚ್ಚಾಗುತ್ತಿರುವ ಜನ ವಿರೋಧಿ ನೀತಿಗಳು, ಕೋಮುವಾದಿ ಧಾಳಿಗಳು, ಫ್ಯಾಸಿಸ್ಟ್ ಶಕ್ತಿಗಳ ಧಾಳಿ ದೇಶದ ಜನರ ಜೀವನವು ಸಂಕಷ್ಟಮಯವಾಗಿದ್ದು ಇದರ ವಿರುದ್ಧ ದೃಢವಾದ ಹೋರಾಟವನ್ನು ನಡೆಸುವವರು ಕಮ್ಯೂನಿಸ್ಟರು ಮಾತ್ರ. ವಿಚಾರಗಳನ್ನು ಸೈದ್ಧಾಂತಿಕವಾಗಿ ಎದುರಿಸಲಾಗದೆ ಇರುವವರು ಮತ್ತು ಸಹಿಸಲಾಗದ ಜನರು ಮಾತ್ರ ಇಂತಹ ಕೃತ್ಯದಲ್ಲಿ ಭಾಗಯಾಗಿರುವ ಸಾಧ್ಯತೆಗಳಿವೆಯೆಂದು ತಿಳಿಸಿದರು.

ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದ ಕಾರ್ಯಕರ್ತರು ಇಂತಹ ಹೇಡಿತನದ ಕೃತ್ಯವನ್ನು ಖಂಡಿಸಿದರು. ಕಮ್ಯೂನಿಸ್ಟ್ ರ ಜನಪರ ಚಳುವಳಿ ಮತ್ತು ಬದುಕಿಗಾಗಿ



ನಡೆಸುವ ಹೋರಾಟ ಮತ್ತು ಚಳುವಳಿಯನ್ನು ಸಹಿಸದ ಜನರು ಮಾತ್ರ ಇಂತಹ ಹೇಡಿತನದ ಕೃತ್ಯವನ್ನು ಮಾಡಲು ಸಾಧ್ಯವೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಿಪಿಐ ಮುಖಂಡರಾದ ಹೆಚ್.ವಿ.ಅನಂತಸುಬ್ಬರಾವ್, ವಿಜಯಭಾಸ್ಕರ್, ಸಾತಿ ಸುಂದರೇಶ್, ಜ್ಯೋತಿ ಎ., ಹರಿಗೋವಿಂದ್, ಸತ್ಯನಂದ್, ಜಿ.ಬಾಬು, ಹರೀಶ್ ವಾಲ, ಬಾಡದ ಈರಣ್ಣ, ಹೊಸತು ಪತ್ರಿಕೆ ಸಂಪಾದಕರಾದ ಸಿದ್ದನಗೌಡ ಪಾಟೀಲ್, ಸಿಪಿಐ(ಎಂ) ಮುಖಂಡರಾದ ಜಿ.ಎನ್.ನಾಗರಾಜ್, ಕೆ.ಎನ್.ಉಮೇಶ್, ಜಿ.ಸಿ.ಬಯ್ಯಾರೆಡ್ಡಿ, ಪ್ರತಾಪ್ ಸಿಂಹ, ಕೆ.ಪ್ರಕಾಶ್, ಗೋಪಾಲಕೃಷ್ಣ ಅರಳಹಳ್ಳಿ, ಟಿ.ಸುರೇಂದ್ರರಾವ್, ಚಂದ್ರಪ್ಪ ಹೊಸ್ಕೇರಾ ಮತ್ತು ಭಾರತ ಕಮ್ಯೂನಿಸ್ಟ್ ಪಕ್ಷ, ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕಾರ್ಯಕರ್ತರು ಮತ್ತು ಮುಖಂಡರು ಭಾಗವಹಿಸಿದ್ದರು.







ನೆನೆಯೋಣ ನಮ್ಮ ರೈತ ಬಾಂಧವರನ್ನ

ಕವನ

ನಮ್ಮವರೂ ಇವರು ನಮಗೆಲ್ಲಾ ಅನ್ನದಾತರು
ನಮಸ್ಕರಿಸೋಣ ನಾವು ಊಟ ಮಾಡುವ
ಮೊದಲು
ಶ್ರಮಿಸೋಣ ನಾವು ತುತ್ತು ಅನ್ನ
ವ್ಯರ್ಥವಾಗುವ ಮೊದಲು
ನೆನೆಯೋಣ ನಮ್ಮ ರೈತ ಭಾಂಧವರನ್ನು

ನಾಟಿ ಮಾಡಿ ನಾಡಿಗೆಲ್ಲಾ ಊಟ ಬಡಿಸುವರು
ಮಲಗಲು ಸೂರಿಲ್ಲ ಇವರಿಗೆ
ಆದರೂ ಸೂರ್ಯ ಮೂಡುವ ಮುನ್ನ
ಏಳುವರರು
ಇವರೇ ನಮ್ಮವರು ನಮ್ಮ ರೈತಭಾಂಧವರು.

ನೆನಪಾಗದಿರಲಿ ಇವರಿಗೆ ಮೀಸಲಿಟ್ಟ ದಿನ
ಕೊಡಬೇಕು ಬೆಲೆ ಅವರು ಪಡುತ್ತಿರುವ ಪಾಡಿನ
ಶ್ರಮ
ಅವರ ಬೆಳೆದ ಬೆಳೆಗೆ ಬೆಲೆ ನೀಡರೂ
ಬೆಲೆ ಹಚ್ಚಿ ಅವರನ್ನ ಕೊಳ್ಳುವರೂ
ಮಧ್ಯದಲ್ಲಿ ಮಾಯವಾಗುವದೂ ಪ್ರತಿಫಲವು
ಘಾಸಿ ಮಾಡದಿರಿ ಅವರ ನೋವಿಗೆ
ಫಲಿಸಲಿ ಖುಷಿ ಅವರು ಪಟ್ಟ ಶ್ರಮಕ್ಕೆ

ಬಿಸಿಲು, ಚಳಿ ಮಳೆ ನೀವೇ ಬಲ್ಲಿರಿ
ಎಸಿಯಲ್ಲಿ ಕೂತು ಒಸಿ ದುಡ್ಡಲ್ಲಿ
ಮೋಸಮಾಡುವವರು
ಏನು ಬಲ್ಲರು ಬೆವರ ಹನಿ ಬೆಲೆಯ
ಶುಭವಾಗಲಿ ನಮ್ಮ ರೈತ ಭಾಂಧವರಿಗೆ
ನಮ್ಮವರು ನೀವು ನಮ್ಮಗೆ ಅನ್ನದಾತರು

–ಲಕ್ಷ್ಮೀದೇವಿ. ಹಿಟ್ನಾಳ

ಕಾ ಎಂಬ ಅಪಶಕುನ, ಎನ್‌ಆರ್‌ಸಿ ಎಂಬ ಸಂಚು : ದೇವನೂರ ಮಹಾದೇವ

ನಮ್ಮ ಪ್ರಧಾನಮಂತ್ರಿಯವರ ಮಾತುಗಳು ಜುಮ್ಲಾ ಆಗಬಾರದೆಂದರೆ ಅವರು ತಕ್ಷಣವೇ ಆರ್ಡಿನೆನ್ಸ್ ಮೂಲಕ ಸಿಎಎ ಹಿಂತೆಗೆದುಕೊಳ್ಳಬೇಕು ಹಾಗೂ ಎನ್‌ಆರ್‌ಸಿಯನ್ನು ದೇಶ ವ್ಯಾಪ್ತಿ ಜಾರಿಗೊಳಿಸುವುದಿಲ್ಲ ಎಂದು ಅಧಿಕೃತ ಆಶ್ವಾಸನೆ ನೀಡಬೇಕು.

ಮೋದಿ ಮತ್ತು ಶಾ ಅವರ 'ಕಾ ಕಾ' ಕೂಗಿಗೆ ದೇಶ ಬೆಚ್ಚಿ ಬಿದ್ದಿದೆ. ಭಾರತೀಯ ಸುಪ್ತ ಮನಸ್ಸಲ್ಲಿ, ಗತಿಸಿದ ಪಿತೃಗಳು ಕಾಗೆಯ ರೂಪದಲ್ಲಿ ತಿಥಿಯ ಸಂದರ್ಭದಲ್ಲಿ ಬಂದು ಆಹಾರ ಸೇವಿಸುತ್ತಾರೆ ಎಂಬ ನಂಬಿಕೆ ಇದೆ. ಹಾಗೆಯೇ ಕಾಗೆ ಆತಂಕದಿಂದ ಕೂಗುವ ಕಾ ಕಾ' ಶಬ್ದ ಏನೋ ಅಪಶಕುನ, ಏನೋ ಕೇಡು ಎಂಬುದರ ಮುನ್ಸೂಚನೆ ನೀಡುತ್ತಿದೆ ಎಂದೂ ಭಾರತದ ಸುಪ್ತ ಮನಸ್ಸು ಭಾವಿಸುತ್ತದೆ. 'ಪೌರತ್ವ ತಿದ್ದುಪಡಿ ಕಾಯ್ದೆ 'ಸಿಎಎ' ಅಂದರೆ 'ಕಾ' ಧ್ವನಿಯು ಕಾಗೆಯು ಮುನ್ಸೂಚನೆ ನೀಡುತ್ತಿರುವ ಕೇಡು, ಅಪಶಕುನ ಎಂದು ದೇಶದ ಸುಪ್ತ ಮನಸ್ಸಿಗೆ ತಟ್ಟಿರಬೇಕು. ಹೌದು, ಪೌರತ್ವ ತಿದ್ದುಪಡಿ ಕಾಯ್ದೆ ಅಂದರೆ ಸಿಎಎ ಅಂದರೆ 'ಕಾ' ಅಪಶಕುನ, ಕೇಡೂ ಎರಡೂ ಹೌದು.

ಈಗ ನೋಡಿ, ನಮ್ಮ ಸಂವಿಧಾನಕ್ಕೆ ಒಂದು ಚರಿತ್ರೆ ಇದೆ. ಹಾಗೇನೆ ಒಂದು ಚಾರಿತ್ರ್ಯ ಕೂಡ ಇದೆ. ಚಾರಿತ್ರ್ಯ ಎಂದರೆ ಶೀಲ. ಬುದ್ಧನ ಪಂಚಶೀಲದಂತೆ ನಮ್ಮ ಸಂವಿಧಾನಕ್ಕೂ ಪಂಚಶೀಲಗಳಿವೆ. ಅವು– ಸಾರ್ವಭೌಮತ್ವ, ಸಮಾಜವಾದಿ, ಧರ್ಮನಿರಪೇಕ್ಷ, ಪ್ರಜಾಪ್ರಭುತ್ವ ಮತ್ತು ಗಣರಾಜ್ಯ. ಸಂವಿಧಾನದ ಶೀಲಗಳಲ್ಲಿ ಒಂದಾದ Secular ಅಂದರೆ ಜಾತ್ಯಾತೀತ ಅಥವಾ ಧರ್ಮ ನಿರಪೇಕ್ಷ ಮೌಲ್ಯವು ಆಳ್ವಿಕೆಗೆ ಜಾತಿ, ಧರ್ಮಗಳ ವಾಂಛೆ ಇರಬಾರದು ಎನ್ನುತ್ತದೆ. ಜಾಗತಿಕವಾಗಿ ಭಾರತದ ಗೌರವವನ್ನು ಹೆಚ್ಚಿಸಿದ ಮೌಲ್ಯ ಇದು. ಆದರೆ ಇಂದು ಈ ಸಿಎಎ 'ಪೌರತ್ವ ತಿದ್ದುಪಡಿ ಕಾಯ್ದೆ'ಯು ಏನು ಮಾಡುತ್ತದೆ ಎಂದರೆ ಸಂವಿಧಾನದ ಈ ಶೀಲವನ್ನೇ ಕೆಡಿಸುತ್ತದೆ. ಸಂವಿಧಾನವನ್ನು ಪ್ರತ್ಯಕ್ಷವಾಗಿ ವಿರೋಧಿಸದೆ ಅದರ ಶೀಲ ಕೆಡಿಸಿ ಪರೋಕ್ಷವಾಗಿ ಸಂವಿಧಾನವನ್ನು ಕುರೂಪಗೊಳಿಸುವ ಹುನ್ನಾರು ಇದು. ಇದಕ್ಕಾಗೆ ಇರಬೇಕು– ಈ ಕಾಯ್ದೆ ಸಿಎಎ ಅಂದರೆ 'ಕಾ' ಎಂಬುದು ಅಪಶಕುನ, ಕೇಡು ಎಂದು ಭಾರತೀಯ ಮನಸ್ಸಿಗೆ ಅನ್ನಿಸತೊಡಗಿದೆ.

ಇನ್ನು ಎನ್‌ಆರ್‌ಸಿ ವಿಷಯ. ಹೆಚ್‌ಎಂ ಶಾ ಅವರು ನಾಕಾರು ಸಲ ಎನ್‌ಆರ್‌ಸಿ ಜಾರಿಗೆ ತರುತ್ತೇವೆ ಎಂದು ಹೇಳಿದ್ದಾರೆ. ರಾಜ್ಯಸಭೆಯಲ್ಲೂ ಹೇಳಿದ್ದಾರೆ. ಪಿಎಂ ಮೋದಿಯವರು "ಹಾಗೇನೂ ಆಲೋಚಿಸಿಲ್ಲ, ಭಯ ಪಡಬೇಡಿ" ಎಂದು ದೇಶಕ್ಕೆ ಆಶ್ವಾಸನೆ ಕೊಡುತ್ತಿದ್ದಾರೆ. ಯಾರನ್ನು ನಂಬುವುದು? ಯಾರನ್ನು ಬಿಡುವುದು?

ಭಾರತೀಯರೆಲ್ಲರ ಅಕೌಂಟ್‌ಗೆ ಕಪ್ಪು ಹಣ ತಂದು ರೂ. 15 ಲಕ್ಷ ಹಾಕುವುದು, ವರ್ಷಕ್ಕೆ ಕೋಟಿಗಟ್ಟಲೆ ಉದ್ಯೋಗ ಸೃಷ್ಟಿಸುವುದು ಇತ್ಯಾದಿ ಆಶ್ವಾಸನೆಗಳನ್ನು ಕೊಟ್ಟು ಇವು ಈಡೇರಲೇ ಇಲ್ಲವಲ್ಲ ಎಂದು ಬಿಜೆಪಿ ಅಧ್ಯಕ್ಷರೂ ಆದ ಅಮಿತ್ ಶಾ ಅವರಿಗೆ ಕೇಳಿದ್ದಕ್ಕೆ ಅವರು– 'ಅವೆಲ್ಲಾ ಚುನಾವಣಾ ಜುಮ್ಲಾ' ಎಂದು ಉಡಾಫೆ ಉತ್ತರ ಕೊಟ್ಟಿದ್ದಾರೆ. ನಮ್ಮ ಪ್ರಧಾನಮಂತ್ರಿಯವರ ಮಾತುಗಳು ಜುಮ್ಲಾ ಆಗಬಾರದೆಂದರೆ ಅವರು ತಕ್ಷಣವೇ ಆರ್ಡಿನೆನ್ಸ್ ಮೂಲಕ ಸಿಎಎ ಹಿಂತೆಗೆದುಕೊಳ್ಳಬೇಕು ಹಾಗೂ ಎನ್‌ಆರ್‌ಸಿಯನ್ನು ದೇಶ ವ್ಯಾಪ್ತಿ ಜಾರಿಗೊಳಿಸುವುದಿಲ್ಲ ಎಂದು ಅಧಿಕೃತ ಆಶ್ವಾಸನೆ ನೀಡಬೇಕು. ತಕ್ಷಣವೇ ಇದಾಗದಿದ್ದರೆ ಇವರಿಬ್ಬರೂ ಜನಜೀವನದ ಪ್ರಾಣ ಸಂಕಟದ ಜೊತೆ ಬೆಕ್ಕಿನಂತೆ ಚೆಲ್ಲಾಟವಾಡುತ್ತಿದ್ದಾರೇನೊ ಅನ್ನಿಸಿಬಿಡುತ್ತದೆ.

ಈ ಎನ್‌ಆರ್‌ಸಿ ಯಿಂದ ಉದ್ಭವಿಸಬಹುದಾದ ಒಂದು ಯಾತನಾಮಯವಾದ ದೃಶ್ಯವನ್ನು ನೆನಪಿಸಿಕೊಳ್ಳುವುದಕ್ಕೂ ನನಗೆ ಕಷ್ಟವಾಗುತ್ತಿದೆ. ಅದು ಮೂಲನಿವಾಸಿಗಳ ಪಾಡು. ಭಾರತದಲ್ಲಿ ಶೇಕಡ 8 ರಷ್ಟು ಜನರು ಮಾತ್ರ ಮೂಲನಿವಾಸಿಗಳು, ಉಳಿದವರೆಲ್ಲಾ ವಲಸೆಗಾರರು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಮೂಲನಿವಾಸಿಗಳು ಈಗಲೂ ಬಹುತೇಕ ಅರಣ್ಯವಾಸಿಗಳು. ಇವರು ಅಲ್ಲೇ ಹುಟ್ಟಿ ಅಲ್ಲೇ ಮಣ್ಣಾಗುತ್ತ ಬಂದವರು. ಈಗ, ಎನ್‌ಆರ್‌ಸಿ ಬಂದರೆ ಏನಾಗುತ್ತದೆ? ಭಾರತಕ್ಕೆ ವಲಸೆ ಬಂದವರೇ ಅಧಿಕಾರ ಹಿಡಿದು ಈಗ ಮೂಲನಿವಾಸಿಗಳಿಗೆ 'ನೀವು ಇಲ್ಲಿಯವರು ಅಂಥ ದಾಖಲೆ ತೋರಿಸು' ಎಂದು ಕೇಳಿದಂತಾಗುತ್ತದೆ. ಇದಕ್ಕೆ ಮೂಲನಿವಾಸಿಗಳು ಏನು ತಾನೇ ಹೇಳಿಯಾರು? "ನೀವು ಬರುವುದಕ್ಕೂ ಮೊದಲಿನಿಂದಲೂ ಇಲ್ಲೇ ಹುಟ್ಟೀ ಇಲ್ಲೇ ಸಾಯುತ್ತಿದ್ದೀವಪ್ಪ. ಬೇಕಾದರೆ ಮರ ಕೇಳು, ಬೆಟ್ಟ ಕೇಳು, ನದಿ ಕೇಳು, ಕಾಡಲ್ಲಿರುವ ಪ್ರಾಣಿಗಳನ್ನ ಕೇಳು ಅವಕ್ಕೆಲ್ಲಾ ನಾವು ಗೊತ್ತಿದೆ. ಇದನ್ನು ಬಿಟ್ಟರೆ ನಮ್ಮ ಬಳಿ ಏನೂ ಇಲ್ಲ" ಎಂದು ಅರಣ್ಯರೋಧನ ಮಾಡಬೇಕಾಗುತ್ತದೆ. ಇವರ ಜೊತೆಗೆ ನೆಲೆ ಇಲ್ಲದೆ ಅಲೆಯುತ್ತಿರುವ ಅಲೆಮಾರಿಗಳು, ಅತಂತ್ರರಾದ ಹಿಂದುಳಿದ ಸಮೂಹಗಳು ಕಣ್ಣುಬಾಯಿ ಬಿಡಬೇಕಾಗುತ್ತದೆ.

ಇದರಲ್ಲೊಂದು ಸಂಚಿನ ವಾಸನೆಯೂ ಇದ್ದಂತಿದೆ. ಮೂಲನಿವಾಸಿಗಳನ್ನು ಎನ್‌ಆರ್‌ಸಿ ನೆಪದಲ್ಲಿ ಅರಣ್ಯದಿಂದ ಸಂಪೂರ್ಣವಾಗಿ ಎತ್ತಂಗಡಿ ಮಾಡುವ ಸಂಚೂ ಇಲ್ಲಿ ಇರಬಹುದು. ಆಗ– ಅರಣ್ಯನಾಶ, ಗಣಿಗಾರಿಕೆ ಮಾಡಿ ಭೂಮಿ ಧ್ವಂಸ ಮಾಡಲು ಕಾರ್ಪೊರೇಟ್ ಕಂಪನಿಗಳಿಗೆ ಹಬ್ಬವಾಗುತ್ತದೆ. ನಮ್ಮ ಪೂರ್ವಿಕರು ಕಟ್ಟಿ ಬೆಳೆಸಿ ಉಳಿಸಿಕೊಂಡು ಬಂದಿದ್ದ ಸಂಸ್ಥೆ ಆಸ್ತಿಪಾಸ್ತಿಗಳನ್ನು ಖಾಸಗಿಗೆ ಮಾರಿಕೊಂಡು ಜೀವನ ದೂಡುತ್ತಿರುವ ಸರ್ಕಾರಕ್ಕೆ ಅರಣ್ಯ ನದಿ, ಬೆಟ್ಟ ಮಾರುವುದು ಸಹಜವೇ ಇರಬಹುದು. ಆದರೆ ದೇಶವನ್ನೆ ಖಾಸಗಿ ಕಂಪನಿಗಳಿಗೆ ಮಾರಿದಂತಾಗಿಬಿಡುತ್ತದೆ. ಆಗ, ಕಂಪನಿ ಸರ್ಕಾರದ ವಿರುದ್ಧ ಹೋರಾಡಿ ದೇಶ ಸ್ವಾತಂತ್ರ್ಯ ಪಡೆಯಿತು. ಈಗ, ಪಡೆದ ಸ್ವಾತಂತ್ರ್ಯವನ್ನು ಕಂಪನಿಗಳಿಗೆ ಮರುಮಾರಾಟ ಮಾಡಿದಂತಾಗಿಬಿಡುತ್ತದೆ. ಉಳಿಗಾಲ ಉಂಟೆ ಎನ್ನುವಂತಾಗಿಬಿಡುತ್ತದೆ.

ಈ ಸಂದರ್ಭದಲ್ಲಿ ಛತ್ತೀಸ್‌ಗಡದ ಮುಖ್ಯಮಂತ್ರಿ ಭೂಪೇಶ ಬಾಘೆಲ್ ಅವರ ಮಾತುಗಳನ್ನು ನಾವು ಕೇಳಿಸಿಕೊಳ್ಳಬೇಕಾಗಿದೆ. ಅವರು ಹೇಳುತ್ತಾರೆ– "ಛತ್ತೀಸ್‌ಗಡದ ಅರ್ಧಕ್ಕೂ ಹೆಚ್ಚಿನ ಜನರಿಗೆ ಪೌರತ್ವ ಸಾಬೀತು ಅಸಾಧ್ಯ. ಎನ್‌ಆರ್‌ಸಿ ಜಾರಿಗೊಳಿಸಿದರೆ ರಾಜ್ಯದ ಶೇಕಡ 50ಕ್ಕೂ ಜನರು ಭೂಮಿ ಅಥವಾ ಭೂ ದಾಖಲೆ ಹೊಂದಿಲ್ಲ. ಅವರಿಗೆ ತಮ್ಮ ಪೌರತ್ವ ಸಾಬೀತು ಪಡಿಸಲು ಹೇಗೆ ಸಾಧ್ಯ?" ಎಂದು ಪ್ರಶ್ನಿಸಿ ಆಮೇಲೆ ಅವರು ಹೇಳುತ್ತಾರೆ– "1906ರಲ್ಲಿ ದಕ್ಷಿಣಾ ಆಫ್ರಿಕಾದಲ್ಲಿ ಬ್ರಿಟಿಷರು ತಂದಿದ್ದ ಗುರುತು ಯೋಜನೆಯನ್ನು ಗಾಂಧೀಜಿ ವಿರೋಧಿಸಿದ ರೀತಿಯಲ್ಲೆ ಎನ್‌ಆರ್‌ಸಿ ಪ್ರಕ್ರಿಯೆ ವಿರೋಧಿಸುತ್ತೇನೆ. ಎನ್‌ಆರ್‌ಸಿ ಜಾರಿಗೊಂಡರೆ ಅದರ ದಾಖಲೆಗೆ ಸಹಿ ಹಾಕದ ಮೊದಲ ವ್ಯಕ್ತಿ ನಾನೇ ಆಗಲಿದ್ದೇನೆ" ಎನ್ನುತ್ತಾರೆ. ಸಂವಿಧಾನದ ಶೀಲ ಹಾಗೂ ಭಾರತದ ಭಾರತೀಯತೆಯನ್ನು ಉಳಿಸಿಕೊಳ್ಳುವುದಕ್ಕಾಗಿ, ಭಾರತ ಮಾತೆಯ ಮಕ್ಕಳಾಗಿ ನಾವು ಇಷ್ಟಾದರೂ ಮಾಡಬೇಕಾಗುತ್ತದೆ.

ಛತ್ತೀಸ್‌ಗಡದ ಮುಖ್ಯಮಂತ್ರಿ ಭೂಪೇಶ ಬಾಘೆಲ್

ಈಗ ಈ ಸಿಎಎ, ಎನ್‌ಆರ್‌ಸಿ ವಿರೋಧಿ ಆಂದೋಲನ ಸರಿಯಾದ ಜಾಗಕ್ಕೆ, ಅಂದರೆ ವಿದ್ಯಾರ್ಥಿಗಳ ಅಂಗಳಕ್ಕೆ ಬಂದಿದೆ. ಭಾರತೀಯತೆ ಮತ್ತು ಸಂವಿಧಾನವನ್ನು ಉಳಿಸಿಕೊಳ್ಳುವುದಕ್ಕಾಗಿ ವಿದ್ಯಾರ್ಥಿಗಳು ಟೊಂಕಕಟ್ಟಿ ನಿಂತಿದ್ದಾರೆ. ಭಾರತಕ್ಕೆ ಕಷ್ಟ ಬಂದ ಕಾಲದಲ್ಲಿ ಕಾಪಾಡಬಲ್ಲ ಶಕ್ತಿ ಯುವಜನತೆಗೆ ಇದೆ ಎಂದು ಋಜುವಾತು ಮಾಡುತ್ತಿದ್ದಾರೆ. ಪ್ರತಿಭಟನೆಯನ್ನು ತುಂಬಾ ಹೊಣೆಗಾರಿಕೆಯಿಂದಲೂ ನಿಭಾಯಿಸುತ್ತಿದ್ದಾರೆ. ಚಳುವಳಿಯನ್ನು ದಾರಿತಪ್ಪಿಸಲು ನಾನಾರೀತಿಯ ಪ್ರಯತ್ನಗಳು ನಡೆಯಬಹುದು. ಆದರೂ – 'ದಯವಿಟ್ಟು ಸಂಯಮ ಕಳೆದುಕೊಳ್ಳಬೇಡಿ, ಸಾರ್ವಜನಿಕ ಆಸ್ತಿಪಾಸ್ತಿಯನ್ನು ರಕ್ಷಣೆ ಮಾಡುವ ಹೊಣೆಗಾರಿಕೆ ಕೂಡ ನಿಮ್ಮದೇನೆ.

ಜೊತೆಗೆ ವಿದ್ಯಾರ್ಥಿ ಚಳವಳಿ ಒಳಕ್ಕೆ ಸಮಾಜಘಾತಕ ಶಕ್ತಿಗಳು ನುಸಳದಂತೆ ದಯವಿಟ್ಟು ಎಚ್ಚರಿಕೆ ವಹಿಸಿ. ಯಾಕೆಂದರೆ, ಮುಸ್ಲಿಮರ ಸೋಗಿನಲ್ಲಿ ರೈಲಿಗೆ ಕಲ್ಲು ಎಸೆಯುತ್ತಿದ್ದ ಐದಾರು ಜನ ಬಿಜೆಪಿಯವರು ಸಿಕ್ಕಿಬಿದ್ದಿದ್ದಾರೆ. ಇದು ಪಶ್ಚಿಮ ಬಂಗಾಳದ ಮುರ್ಷಿದಾಬಾದ್‌ನಲ್ಲಿ ನಡೆದಿದೆ. ಚಳವಳಿಗೆ ಈ ಎಚ್ಚರಿಕೆ ಇರಬೇಕು. ಹಾಗೇ ಗುಜರಾತ್‌ನ ಅಹಮದ್‌ಬಾದ್‌ನಲ್ಲಿ ಪೌರತ್ವ ತಿದ್ದುಪಡಿ ಕಾಯ್ದೆ ವಿರೋಧಿ ಪ್ರತಿಭಟನೆಯಲ್ಲಿ ಸಿಕ್ಕಿಹಾಕಿಕೊಂಡ ನಾಲ್ವಾರು ಪೊಲೀಸರನ್ನು ಮುಸ್ಲಿಂ ಯುವಕರ ಗುಂಪೊಂದು ರಕ್ಷಿಸಿದೆ. ಇಂಥ ಹೊಣೆಗಾರಿಕೆಯೂ ಚಳವಳಿಗೆ ಬೇಕಾಗಿದೆ. ಹಾಗೂ ಇಂಥಹ ಸಂದರ್ಭಗಳಲ್ಲೆ ಹೆಚ್ಚುತ್ತಿರುವ ನಿರುದ್ಯೋಗ, ಕುಸಿಯುತ್ತಿರುವ ಆರ್ಥಿಕತೆ, ಏರುತ್ತಿರುವ ಬೆಲೆ ಏರಿಕೆ ಇಂಥವುಗಳ ಬಗ್ಗೆ ಹೆಚ್ಚೆಚ್ಚು ಮಾತಾಡಬೇಕಾಗಿದೆ'– ಇದು ಪ್ರಾರ್ಥನೆ.

(ದೇವನೂರು ಮಹಾದೇವರವರು ಪ್ರಸಿದ್ಧ ಹಿರಿಯ ಸಾಹಿತಿಗಳು, ಜನಪರ ಚಿಂತಕರು ಮತ್ತು ಹೋರಾಟಗಾರರು. ಪೌರತ್ವ ತಿದ್ದುಪಡಿ ಕಾಯ್ದೆ ಮತ್ತು ಎನ್‌ಆರ್‌ಸಿ ವಿರುದ್ಧ ಮೈಸೂರಿನಲ್ಲಿ ನಡೆದ ಹೋರಾಟದಲ್ಲಿ ಅವರು ಮಾಡಿದ ಭಾಷಣ)

ಮೋದಿಯವರ ದಿಲ್ಲಿ ಭಾಷಣ ಅಸತ್ಯಗಳ ಮೂಟೆ –ಸಿಪಿಐ(ಎಂ) ಪೊಲಿಟ್‌ಬ್ಯುರೊ

ಸಿಎಎ/ಎನ್‌ಆರ್‌ಸಿ/ಎನ್‌ಪಿಆರ್ ವಿರುದ್ಧ ದೇಶಾದ್ಯಂತ ನಡೆಯುತ್ತಿರುವ ಜನಗಳ ಪ್ರತಿಭಟನೆಗಳ ತೀವ್ರತೆಯನ್ನು ಕಂಡು ಮತ್ತು ಕನಿಷ್ಟ ಹತ್ತು ಮುಖ್ಯಮಂತ್ರಿಗಳು ಎನ್‌ಆರ್‌ಸಿಯನ್ನು ತಾವು ಜಾರಿ ಮಾಡುವದಿಲ್ಲ ಎಂದು ಘೋಷಿಸಿರುವುದನ್ನು ಕೇಳಿ ಪ್ರಧಾನ ಮಂತ್ರಿ ತಬ್ಬಿಬ್ಬಾಗಿದ್ದಾರೆ ಎಂಬುದ ಸ್ಪಷ್ಟ. ಆದ್ದರಿಂದಲೇ ಅವರು ಜನಗಳನ್ನು ತಪ್ಪುದಾರಿಗೆಳೆಯಲು ಡಿಸೆಂಬರ್ 22ರಂದು ದಿಲ್ಲಿಯಲ್ಲಿ ಅಸತ್ಯಗಳ ಒಂದು ಮೂಟೆಯನ್ನೇ ಬಿಚ್ಚಿಟಿದ್ದಾರೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಅವರ ಭಾಷಣದಲ್ಲಿನ ಮೂರು ಸುಳ್ಳುಗಳನ್ನು ಸಿಪಿಐ(ಎಂ) ಪಟ್ಟಿ ಮಾಡಿದೆ.

ಸುಳ್ಳು ನಂ.1: "2014ರಲ್ಲಿ ನನ್ನ ಸರಕಾರ ಬಂದಾಗಿನಿಂದ ಎನ್‌ಆರ್‌ಸಿ ಬಗ್ಗೆ ಎಲ್ಲಿಯೂ ಚರ್ಚೆ ನಡೆದಿಲ್ಲ ಎಂದು 130 ಕೋಟಿ ಭಾರತದ ನಾಗರಿಕರಿಗೆ ಹೇಳಬಯಸುತ್ತೇನೆ": ಮೋದಿ

ಬಿಜೆಪಿಯ 2019ರ ಚುನಾವಣಾ ಪ್ರಣಾಳಿಕೆ ದೇಶಾದ್ಯಂತ ಎನ್‌ಆರ್‌ಸಿಯ ಆಶ್ವಾಸನೆ ನೀಡಿತ್ತು.

ಗೃಹಮಂತ್ರಿ ಅಮಿತ್ ಷಾ ಲೋಕಸಭೆಯಲ್ಲಿ ಸಿಎಬಿಯ ಮೇಲಿನ ಚರ್ಚೆಯ ಸಂದರ್ಭದಲ್ಲಿ ನವಂಬರ್ 9ರಂದು "ನಾವು ದೇಶಾದ್ಯಂತ ಎನ್‌ಆರ್‌ಸಿ ತರುತ್ತೇವೆ. ಒಬ್ಬನೇ ಒಬ್ಬ ನುಸುಳುಕೋರನನ್ನು ಬಿಡುವದಿಲ್ಲ" ಎಂದರು.

ಎನ್‌ಆರ್‌ಸಿ ಪ್ರಕ್ರಿಯೆ ಎಪ್ರಿಲ್ 1, 2020ರಿಂದ ಸಪ್ಟಂಬರ್ 30, 2020ರ ನಡುವೆ ರಾಷ್ಟ್ರೀಯ ಜನಸಂಖ್ಯಾ ನೋಂದಣಿ(ಎನ್‌ಪಿಆರ್)ಯನ್ನು ಕಲೆ ಹಾಕುವುದರೊಂದಿಗೆ ಆರಂಭವಾಗ ಬೇಕಿದೆ. ಎನ್‌ಪಿಆರ್ ಎಂಬುದು ಎನ್‌ಆರ್‌ಸಿಯ ಮೊದಲ ಘಟ್ಟ. ಇದಕ್ಕೆ ಗಝೆಟ್ ಅಧಿಸೂಚನೆಯನ್ನು ಜುಲೈ 31, 2019ರಂದು ಹೊರಡಿಸಲಾಗಿದೆ.

ಸುಳ್ಳು ನಂ.2: "ಎಲ್ಲಿಯೂ ಯಾವುದೇ ನಿರ್ಬಂಧ ಕೇಂದ್ರ(ಡಿಟೆನ್ಶನ್ ಸೆಂಟರ್)ಗಳಿಲ್ಲ": ಮೋದಿ

ಗೃಹ ವ್ಯವಹಾರಗಳ ರಾಜ್ಯ ಮಂತ್ರಿಗಳು ಡಿಸೆಂಬರ್ 11 ರಂದು ರಾಜ್ಯಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ ಕಾನೂನುಬಾಹಿರ ವಲಸಿಗರನ್ನು ಮತ್ತು ಶಿಕ್ಷೆ ವಿಧಿಸಲ್ಪಟ್ಟಿರುವ ವಿದೇಶೀಯರನ್ನು ದೇಶದಿಂದ ಹೊರ ಕಳಿಸುವ ಮೊದಲು ನಿರ್ಬಂಧದಲ್ಲಿ ಇಡಲು ನಿರ್ಬಂಧ ಕೇಂದ್ರಗಳನ್ನು ರಚಿಸಬೇಕು ಎಂದು ಎಲ್ಲ ರಾಜ್ಯಗಳಿಗೆ ನಿರ್ದೇಶನಗಳನ್ನು ನೀಡಲಾಗಿದೆ ಎಂದು ತಿಳಿಸಿದರು. ಕೇಂದ್ರ ಸರಕಾರ 9.1.2019ರಂದು ಎಲ್ಲ ರಾಜ್ಯ/ಕೇಂದ್ರಾಡಳಿತ ಆಡಳಿತಗಾರರಿಗೆ ನಿರ್ಬಂಧ ಕೇಂದ್ರಗಳನ್ನು ನಿರ್ಮಿಸಲು ಕ್ರೋಡೀಕೃತ ಸೂಚನೆಗಳನ್ನು ಕಳಿಸಿದೆ.

"ಭಾರತದಲ್ಲಿ ಕಾನೂನುಬಾಹಿರವಾಗಿ ಇರುವ ವಿದೇಶಿ ರಾಷ್ಟ್ರೀಯರನ್ನು ಇಡಲು ನಿರ್ಬಂಧ ಕೇಂದ್ರಗಳನ್ನು ಹೊಂದಬೇಕು ಎಂದು ನಾವು 2014ರಲ್ಲಿ ಎಲ್ಲ ರಾಜ್ಯಸರಕಾರಗಳಿಗೆ ಪತ್ರ ಬರೆದಿದ್ದೇವೆ ಮತ್ತು ಅದನ್ನನುಸರಿಸಿ 2018ರಲ್ಲಿ ಪತ್ರವನ್ನು ಬರೆದಿದ್ದೇವೆ" ಎಂದು ಕೇಂದ್ರ ಸರಕಾರ ನವಂಬರ್ 28 ರಂದು ಕರ್ನಾಟಕ ಹೈಕೋರ್ಟಿಗೆ ಹೇಳಿದೆ.

ನವಂಬರ್ 2019ರಲ್ಲಿ ಗೃಹ ವ್ಯವಹಾರಗಳ ರಾಜ್ಯಮಂತ್ರಿಗಳು ರಾಜ್ಯಸಭೆಯಲ್ಲಿ ಒಂದು ಪ್ರಶ್ನೆಗೆ ಉತ್ತರಿಸುತ್ತ ಅಸ್ಸಾಂನ ನಿರ್ಬಂಧ ಕೇಂದ್ರಗಳಲ್ಲಿ 28 ಮಂದಿ ಸತ್ತಿದ್ದಾರೆ ಎಂದು ಉತ್ತರಿಸಿದ್ದಾರೆ. ಅಸ್ಸಾಂನ ಆರು ನಿರ್ಬಂಧ ಕೇಂದ್ರಗಳಲ್ಲಿ 988 'ವಿದೇಶೀಯರನ್ನು' ಇಡಲಾಗಿದೆ ಎಂದು ಅವರು ತಿಳಿಸಿದರು.

ಗೃಹ ವ್ಯವಹಾರಗಳ ಮಂತ್ರಾಲಯ 24/29 ಎಪ್ರಿಲ್ 2014ರಲ್ಲಿ ಮತ್ತು 9–10 ಸಪ್ಟಂಬರ್ 2014ರಲ್ಲಿ ಇನ್ನೊಮ್ಮೆ ನಿರ್ದೇಶನಗಳನ್ನು ಕಳಿಸಿದೆ. ಇದರ ಆಧಾರದಲ್ಲಿ ಒಂದು ಮಾದರಿ ನಿರ್ಬಂಧ ಕೇಂದ್ರ/ ತಡೆದಿಡುವ ಕೇಂದ್ರ/ಶಿಬಿರದ ಕೈಪಿಡಿ(ಮ್ಯಾನುವಲ್) ಯನ್ನು 2018ರಲ್ಲಿ ಎಲ್ಲ ರಾಜ್ಯ /ಕೇಂದ್ರಾಡಳಿತ ಪ್ರದೇಶಗಳಿಗೆ ಕೊಡಲಾಗಿದೆ.

ಕರ್ನಾಟಕದಂತಹ ಹಲವು ಬಿಜೆಪಿ ರಾಜ್ಯ ಸರಕಾರಗಳು ಈಗಾಗಲೇ ನಿರ್ಬಂದ ಕೇಂದ್ರಗಳನ್ನು ನಿರ್ಮಿಸಲು ನಿರ್ದೇಶನಗಳನ್ನು ಕೊಟ್ಟಿವೆ.

ಸುಳ್ಳು ನಂ.3: "ನಾನು ಎಂದೂ ಯಾರೊಬ್ಬರದ್ದೂ ಧರ್ಮ ಏನೆಂದು ಕೇಳಿಲ್ಲ" :ಮೋದಿ.

ಝಾರ್ಖಂಡ್‌ನ ಧುಮ್ಕದಲ್ಲಿ ಇತ್ತಿಚೆಗೆ ನಡೆದ ಒಂದು ಚುನಾವಣಾ ರ್‍ಯಾಲಿಯಲ್ಲಿ ಹಿಂಸಾಚಾರದಲ್ಲಿ ತೊಡಗಿರುವವರನ್ನು ಅವರ ಉಡುಗೆಗಳಿಂದ ಗುರುತಿಸಬಹುದು ಎಂದರು.

2019ರ ಸಾರ್ವತ್ರಿಕ ಚುನಾವಣೆಗಳ ವೇಳೆಯಲ್ಲಿ ರಾಹುಲ್ ಗಾಂಧಿ ಕೇರಳದ ವೈನಾಡಿನಿಂದ, "ಬಹುಸಂಖ್ಯಾತರು ಅಲ್ಪಸಂಖ್ಯಾತರಾಗಿರುವ ಒಂದು ಕ್ಷೇತ್ರ"ವನ್ನು ಸ್ಪರ್ಧೆಗೆ ಆಯ್ದುಕೊಂಡಿದ್ದಾರೆ ಎಂದರು.

ಇಂತಹ ಸುಳ್ಳುಗಳ ಮೂಟೆಯೊಂದಿಗೆ ಮೋದಿಯವರು ಭಾರತೀಯ ಸಂವಿಧಾನದ ಜಾತ್ಯತೀತ–ಪ್ರಜಾಸತ್ತಾತ್ಮಕ ತಿರುಳಿನ ಮೇಲೆ ಅವರುಗಳ ಆಕ್ರಮಣದ ಬಗ್ಗೆ ಜನಗಳನ್ನು ತಪ್ಪುದಾರಿಗೆಳೆಯಲು ಪ್ರಯತ್ನಿಸುತ್ತಿದ್ದಾರೆ.

ಮೋದಿ ಸರಕಾರಕ್ಕೆ ಇರುವುದು ಒಂದೇ ಅಜೆಂಡಾ: ಧ್ರುವೀಕರಣ

ಅವರ 90 ನಿಮಿಷಗಳ ದೀರ್ಘ ಭಾಷಣದಲ್ಲಿ ಒಮ್ಮೆಯೂ ತನ್ನ ಸರಕಾರ ಮತ್ತು ಧೋರಣೆಗಳು ಜನಗಳ ದೈನಂದಿನ ಬದುಕಿನ ಮೇಲೆ ಹೆಚ್ಚೆಚ್ಚಾಗಿ ಹೇರುತ್ತಿರುವ ಸಂಕಟಗಳನ್ನು ಪ್ರಸ್ತಾಪಿಸಲಿಲ್ಲ. ಅರ್ಥವ್ಯವಸ್ಥೆ ಹಿಂಜರಿತಕ್ಕೆ ಒಳಗಾಗಿಯೇ ಬಿಡುತ್ತಿದೆ, ನಿರುದ್ಯೋಗ ಕಳೆದ ಅರ್ಧ ಶತಕದಲ್ಲೇ ಅತ್ಯುನ್ನತ ಮಟ್ಟಕ್ಕೇರಿದೆ. ರೈತರ ಹತಾಶ ಆತ್ಮಹತ್ಯೆಗಳು ಹೆಚ್ಚುತ್ತಿವೆ. ಹಣದುಬ್ಬರ ಜನಗಳ ಬದುಕನ್ನು ಹಿಂಡುತ್ತಿದೆ, ಈರುಳ್ಳಿಯ ವಿಪರೀತ ಬೆಲೆಗಳಿಂದಾಗಿ ಜನ ಅದನ್ನು ತಿನ್ನುವುದನ್ನೇ ಬಿಟ್ಟಿದ್ದಾರೆ.

ದ್ವೇಷ ಮತ್ತು ಹಿಂಸಾಚಾರದ ಮೂಲಕ ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವುದು ಮತ್ತು ಜನಗಳನ್ನು ಒಡೆಯುವುದು ಮಾತ್ರವೇ ಮೋದಿ ಸರಕಾರದ ಏಕೈಕ ಅಜೆಂಡಾ ಆಗಿ ಬಿಟ್ಟಿದೆ ಎಂಬುದು ಸುಸ್ಪಷ್ಟವಾಗಿದೆ ಎಂದು ಬಲವಾಗಿ ಟೀಕಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸಿಎಎ/ ಎನ್‌ಆರ್‌ಸಿ/ಎನ್‌ಪಿಆರ್ ವಿರುದ್ಧ ಪ್ರತಿಭಟನೆಗಳು ಈಗ ನಡೆಯುತ್ತಿರುವ ಪ್ರಕ್ರಿಯೆಗಳನ್ನು ನಿಲ್ಲಿಸಲು ಅಧಿಕೃತ ಅಧಿಸೂಚನೆಯನ್ನು ಹೊರಡಿಸುವ ವರೆಗೂ ಮುಂದುವರೆಯುತ್ತವೆ ಎಂದು ಹೇಳಿದೆ.

"ಎಪ್ಪತ್ತರ ದಶಕದಲ್ಲಿ ಸರ್ವಾಧಿಕಾರಶಾಹಿಯನ್ನು ಸೋಲಿಸಿದ್ದಾರೆ, ಈಗಲೂ ಸೋಲಿಸುತ್ತಾರೆ"

ಪುಟ 2 ರಿಂದ

ಪ್ರತಿಭಟನೆಗಳನ್ನು ಕೇವಲ ಮುಸ್ಲಿಮರೇ ನಡೆಸುತ್ತಿರುವ ಕೆಲಸಗಳು ಎಂದು ತಿರುಗಿಸಲು ಪ್ರಯತ್ನಿಸುತ್ತಿದೆ. ವಾಸ್ತವತೆಯೆಂದರೆ, ಸಂವಿಧಾನವನ್ನು ಪ್ರೀತಿಸುವ ಎಲ್ಲ ಭಾರತೀಯರೂ, ಧರ್ಮಾತೀತವಾಗಿ ಪ್ರತಿಭಟನೆಗಳಲ್ಲಿ ಸೇರಿಕೊಂಡಿದ್ದಾರೆ. ಬನಾರಸ್‌ನಲ್ಲಿ ಬಂಧಿಸಿರುವ 69 ಎಡ ಕಾರ್ಯಕರ್ತರಲ್ಲಿ ಮುಸ್ಲಿಮರ ಸಂಖ್ಯೆ ಕೇವಲ 13, ಉಳಿದ 56 ಮುಸ್ಲಿಮೇತರರು.

ಉತ್ತರ ಪ್ರದೇಶದಲ್ಲಿ ಎಡಪಕ್ಷಗಳು ಡಿಸೆಂಬರ್ 30ರಂದು ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನಾ ದಿನವನ್ನು ಆಚರಿಸಲು ನಿರ್ಧರಿಸಿವೆ.

ಕರ್ನಾಟಕದಲ್ಲಿ ಮಂಗಳೂರಿನಲ್ಲಿ ಪೋಲೀಸರು ಇಬ್ಬರನ್ನು ಗುಂಡಿಟ್ಟು ಕೊಂದಿದ್ದಾರೆ. ಆರೆಸ್ಸೆಸ್/ಬಿಜೆಪಿ ಕಾರ್ಯಕರ್ತರು ಬೆಂಗಳೂರಿನಲ್ಲಿ ಸಿಪಿಐ ಕಚೇರಿಯ ಮೇಲೆ ದಾಳಿ ಮಾಡಿ ಬೆಂಕಿಯಿಟ್ಟಿದ್ದಾರೆ.

ತ್ರಿಪುರಾದ ಹಲವೆಡೆಗಳಲ್ಲಿ ಬಿಜೆಪಿ ರಾಜ್ಯ ಸರಕಾರ ಶಾಂತಿಯುತ ಪ್ರತಿಭಟನಾಕಾರರ ಮೇಲೆ ಪೋಲೀಸ್ ದಾಳಿಗಳನ್ನು ಹರಿಯಬಿಟ್ಟಿದ್ದಾರೆ. ಬೆಲೊನಿಯ, ಉದಯಪುರ ಮತ್ತಿತರ ಕಡೆಗಳಲ್ಲಿ ಹಲವಾರು ಸಿಪಿಐ(ಎಂ) ಕಾರ್ಯಕರ್ತರನ್ನು ಬಂಧಿಸಲಾಗಿದೆ.

ಗುಜರಾತಿನಲ್ಲಿ 50ಕ್ಕೂ ಹೆಚ್ಚು ಸಿಪಿಐ(ಎಂ) ಕಾರ್ಯಕರ್ತರನ್ನು ಬಂಧಿಸಲಾಗಿದೆ. ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಅರುಣ್ ಮೆಹ್ತಾರನ್ನು ಬಂಧಿಸಲಾಗಿದೆ, ನಂತರ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಸಿಪಿಐ(ಎಂ) ಕಾರ್ಯಕರ್ತರ ಬಂಧನಗಳು ಮುಂದುವರೆಯುತ್ತಿವೆ.

ಭಾರತೀಯ ಸಂವಿಧಾನ ಶಾಂತಿಯುತವಾಗಿ ಸಭೆ ಸೇರುವ ಮತ್ತು ಪ್ರತಿಭಟಿಸುವ ಹಕ್ಕನ್ನು ಖಾತ್ರಿಪಡಿಸಿದೆ. ಈ ಹಕ್ಕಿನ ಮೇಲೆ ಇಂದು ಬಿಜೆಪಿ ನಿರ್ದಯವಾಗಿ ದಾಳಿ ನಡೆಸಿದೆ. ಭಾರತೀಯ ಜನತೆ ಇಂತಹ ಸರ್ವಾಧಿಕಾರಶಾಹಿ ಅತ್ಯಾಚಾರಗಳನ್ನು ಸಹಿಸಿಕೊಳ್ಳುವದಿಲ್ಲ ಎಂದು ಪೊಲಿಟ್‌ಬ್ಯುರೊ ಎಚ್ಚರಿಸಿದೆ. ಭಾರತೀಯ ಜನತೆ ಒಮ್ಮೆ 1970ರ ದಶಕದಲ್ಲಿ ಸರ್ವಾಧಿಕಾರಶಾಹಿ ಪ್ರಹಾರಗಳ ವಿರುದ್ಧ ಹೋರಾಡಿ ಪ್ರಜಾಪ್ರಭುತ್ವವನ್ನು ಮತ್ತೆ ನೆಲೆಗೊಳಿಸಿದ್ದಾರೆ. ಶಾಂತಿಯುತ ಪ್ರತಿಭಟನೆಗಳ ಮೂಲಕ ಇದನ್ನು ಮತ್ತೆ ಮಾಡಲಾಗುವುದು ಎಂದು ಅದು ಹೇಳಿದೆ.

ಪ್ರತಿಯೊಬ್ಬ ಭಾರತೀಯ ದೇಶಪ್ರೇಮಿಗೆ ಇರುವುದು ಒಂದೆ 'ಪುಸ್ತಕ', ಅದೆಂದರೆ ಭಾರತದ ಸಂವಿಧಾನ. ಭಾರತೀಯ ಸಂವಿಧಾನವನ್ನು ಸಿಎಎ/ ಎನ್‌ಆರ್‌ಸಿ/ಎನ್‌ಪಿಆರ್ ಮೂಲಕ ಉಲ್ಲಂಘಿಸದಂತೆ ರಕ್ಷಿಸುವುದು ಅತ್ಯುನ್ನತ ದೇಶಪ್ರೇಮದ ಕೆಲಸವಾಗಿದೆ. ಶಾಂತಿಯುತ ಪ್ರತಿಭಟನೆಗಳು ನಮ್ಮ ಸಂವಿಧಾನವನ್ನು ಮತ್ತು ಅದರ ಜಾತ್ಯತೀತ ಪ್ರಜಾಸತ್ತಾತ್ಮಕ ಬುನಾದಿಗಳನ್ನು ಕಾಪಾಡಿಕೊಳ್ಳಲು ಮತ್ತು ರಕ್ಷಿಸಲು ಮುಂದುವರೆಯುತ್ತವೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ.

ಭಾರತೀಯ ಕಮ್ಯುನಿಸ್ಟರು ಎಷ್ಟೋ ದಾಳಿಗಳನ್ನು ಎದುರಿಸಿದ್ದಾರೆ, ಬ್ರಿಟಿಶರ ನಿಷೇಧ'ಗಳನ್ನು ಎದುರಿಸಿ ಅವರ ವಿರುದ್ಧ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದಾರೆ. ಸ್ವಾತಂತ್ರ್ಯ–ಪೂರ್ವದಲ್ಲೂ, ಸ್ವಾತಂತ್ರ್ಯದ ನಂತರವೂ ನಡೆಸಿದ ಹೋರಾಟಗಳು ಮತ್ತು ಅವುಗಳಲ್ಲಿನ ಅಗಣಿತ ಹುತಾತ್ಮರು ನಮ್ಮ ದೇಶದ ಇತಿಹಾಸದಲ್ಲಿ ಒಂದು ಭವ್ಯ ಅಧ್ಯಾಯ ಎಂದು ನೆನಪಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಶಾಂತಿಯುತವಾಗಿ ಪ್ರತಿಭಟಿಸುವುದನ್ನು ಮುಂದುವರೆಸಬೇಕು, ಯಾವುದೇ ಪ್ರಚೋದನೆಗಳಿಗೆ ಬಲಿ ಬೀಳಬಾರದು ಎಂದು ಜನತೆಗೆ ಮನವಿ ಮಾಡಿಕೊಂಡಿದೆ.

ಜನರಲ್ ಬಿಪಿನ್ ರಾವತ್‌ರ ಅಸಂವಿಧಾನಿಕ ಅಬ್ಬರ– ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

"ಮಿಲಿಟರಿಯನ್ನು ರಾಜಕೀಯಕರಣಗೊಳಿಸುವಲ್ಲಿ ಪಾಕಿಸ್ತಾನದ ಹಾದಿ ಹಿಡಿಯುತ್ತಿದ್ದೇವೆಯೇ?"

ಸೇನಾ ಮುಖ್ಯಸ್ಥ ಜನರಲ್ ಬಿಪಿನ್ ರಾವತ್ ಪೌರತ್ವ ತಿದ್ದುಪಡಿ ಕಾಯ್ದೆಯನ್ನು ಮತ್ತು ದೇಶಾದ್ಯಂತ ರಾಷ್ಟ್ರೀಯ ನಾಗರಿಕರ ನೋಂದಣಿಯತ್ತ ಸಾಗುವುದನ್ನು ವಿರೋಧಿಸುತ್ತಿರುವ ವಿದ್ಯಾರ್ಥಿ ಪ್ರತಿಭಟನಾಕಾರರನ್ನು ಖಂಡಿಸುವಲ್ಲಿ ನೇರವಾಗಿ ತೊಡಗಿಕೊಂಡಿದ್ದಾರೆ. ಇದನ್ನು ತಾನು ನಿಸ್ಸಂದಿಗ್ಧವಾಗಿ ಖಂಡಿಸುವುದಾಗಿ ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಸೇನಾಧಿಪತಿಗಳ ಹೇಳಿಕೆ ಮೋದಿ ಸರಕಾರದ ಅಡಿಯಲ್ಲಿ ಪರಿಸ್ಥಿತಿ ಎಷ್ಟರ ಮಟ್ಟಿಗೆ ಅವನತಿಗೊಂಡಿದೆ ಎಂಬುದನ್ನು ಎತ್ತಿ ತೋರುತ್ತದೆ. ಸಮವಸ್ತ್ರದಲ್ಲಿರುವ ಅತ್ಯುನ್ನತ ಅಧಿಕಾರಿ ತನ್ನ ಸಂವಿಧಾನಿಕ ಪಾತ್ರದ ಮಿತಿಗಳನ್ನು ಇಷ್ಟೊಂದು ಭಂಡತನದಿಂದ ಮೀರಲು ಅವಕಾಶವಾಗಿದೆ. ಆದ್ದರಿಂದ ನಾವು ಮಿಲಿಟರಿಯನ್ನು ರಾಜಕೀಯಕರಣಗೊಳಿಸುವಲ್ಲಿ ಪಾಕಿಸ್ತಾನದ ಹಾದಿ ಹಿಡಿಯುತ್ತಿದ್ದೇವೆಯೇ ಎಂಬ ಪ್ರಶ್ನೆಯನ್ನು ಎತ್ತುವುದು ಅಗತ್ಯವಾಗಿದೆ. ಸ್ವತಂತ್ರ ಭಾರತದ ಇತಿಹಾಸದಲ್ಲಿ, ಈ ರೀತಿ ಉನ್ನತ ಮಿಲಿಟರಿ ಅಧಿಕಾರಿಗಳು ಪ್ರಜಾಪ್ರಭುತ್ವ ಹೋರಾಟಗಳ ವಿಷಯಗಳಲ್ಲಿ ಅಸಹ್ಯಕರ ರೀತಿಯ ಹಸ್ತಕ್ಷೇಪ ನಡೆಸುವುದನ್ನು ಹಿಂದೆಂದೂ ಕೇಳಿಲ್ಲ.

ಸೇನಾಧಿಪತಿಗಳು ತನ್ನ ಈ ವಿವೇಚನಾಶೂನ್ಯತೆಗೆ ದೇಶದ ಕ್ಷಮೆ ಕೇಳಬೇಕು, ಇದರಲ್ಲಿ ದೇಶದಲ್ಲಿನ ಸಂವಿಧಾನಿಕ ಏರ್ಪಾಟಿಗೆ ಅತ್ಯಂತ ಪ್ರತಿಕೂಲವಾಗುವ ಅಂಶಗಳಿವೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ. ಸರಕಾರ ಇಂತಹ ಮಿತಿಯನ್ನು ಮೀರುವುದನ್ನು ಗಮನಕ್ಕೆ ತಗೊಳ್ಳಬೇಕು ಮತ್ತು ಅವರಿಗೆ ವಾಗ್ದಂಡನೆ ವಿಧಿಸಬೇಕು ಎಂದೂ ಪೊಲಿಟ್‌ಬ್ಯುರೊ ಆಗ್ರಹಿಸಿದೆ.


ಭಾರತದ ಸಂವಿಧಾನವನ್ನು ಅತ್ಯಂತ ಗೌರವಭಾವದಿಂದ ನೋಡುವ ದೇಶದ ಎಲ್ಲ ದೇಶಪ್ರೇಮಿಗಳು ಸೇನೆಯ ಪಾತ್ರವನ್ನು ಈ ರೀತಿ ಭಂಡವಾಗಿ ರಾಜಕೀಯಕರಣಗೊಳಿಸುವುದರ ವಿರುದ್ಧ ತಮ್ಮ ಸಾಮೂಹಿಕ ದನಿಯನ್ನು ಎತ್ತಬೇಕು ಎಂದು ನಿರೀಕ್ಷಿಸುವುದಾಗಿಯೂ ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ.

ಅಖಿಲ ಭಾರತ ಎನ್‌ಆರ್‌ಸಿ ಇಲ್ಲ ಎಂದು ಪ್ರಧಾನಿಗಳು ಸ್ಪಷ್ಟವಾಗಿ ಹೇಳಲಿ–ಯೆಚುರಿ

ದಿಲ್ಲಿಯಲ್ಲಿ ಪ್ರಧಾನ ಮಂತ್ರಿಗಳ ಚುನಾವಣಾ ಭಾಷಣ ಅಸತ್ಯಗಳು, ಅರೆ–ಸತ್ಯಗಳು ಮತ್ತು ದಾರಿ ತಪ್ಪಿಸುವ ಹೇಳಿಕೆಗಳಿಂದ ತುಂಬಿದೆ, ಅದು ಎನ್‌ಆರ್‌ಸಿ ಬಗ್ಗೆಯಾಗಿರಬಹುದು, ಸಿಎಎ ಅಥವ ನಿರ್ಬಂಧನ ಶಿಬಿರಗಳ ಬಗ್ಗೆ ಇರಬಹುದು. ನಿಜಸಂಗತಿಗಳು ತದ್ವಿರುದ್ಧವಾಗಿವೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಟಿಪ್ಪಣಿ ಮಾಡಿದ್ದಾರೆ.

ಪ್ರಧಾನಿಗಳು ಹೇಳಿರುವ 'ನಿಜಸಂಗತಿಗಳು' ಒತ್ತಟ್ಟಿಗಿರಲಿ. ಸನ್ನಿವೇಶದಲ್ಲಿ ಬದಲಾವಣೆ ತರಬಹುದಾದ ಯಾವುದೇ ಸಂಗತಿ ಅವರ ಈ ಚುನಾವಣಾ ಭಾಷಣದಲ್ಲಿ ಇರಲಿಲ್ಲ. ಗೃಹಮಂತ್ರಿಗಳು ಸಂಸತ್ತಿನಲ್ಲಿ ಪ್ರಕಟಿಸಿರುವ ಅಖಿಲ ಭಾರತ ಎನ್‌ಆರ್‌ಸಿಯನ್ನು ರದ್ದು ಮಾಡಲಾಗಿದೆ, ಸಿಎಎಯನ್ನು ಹಿಂತೆಗೆದುಕೊಳ್ಳಲಾಗಿದೆ ಎಂಬ ಒಂದು ಸ್ಪಷ್ಟ ಪ್ರಕಟಣೆ ಬಿಟ್ಟು ಬೇರೇನೂ ಸನ್ನಿವೇಶವನ್ನು ಬದಲಿಸುವುದಿಲ್ಲ ಎಂದಿರುವ ಯೆಚುರಿಯವರು "ಒಂದು ಅಖಿಲ ಭಾರತ ಎನ್‌ಆರ್‌ಸಿಯನ್ನು ಜಾರಿ ಮಾಡುವುದಿಲ್ಲ ಎಂದು ಪ್ರಧಾನಿಗಳು ನೇರವಾಗಿ ಹೇಳಬೇಕು" ಎಂದು ಹೇಳಿದ್ದಾರೆ.

ಏರುತ್ತಿರುವ ಹಣದುಬ್ಬರ! ಅರ್ಥ ಮಾಡಿಕೊಳ್ಳಲಾರದ ಸರಕಾರ!!



ಕೈಗಾರಿಕಾ ಉತ್ಪಾದನೆ ಇಳಿಯುತ್ತಿರುವ ಸಮಯದಲ್ಲೇ ಹಣದುಬ್ಬರ ದರ ಏರುತ್ತಿದೆ. ಈ ಹಣದುಬ್ಬರ ದುಡಿಯುವ ಜನರ ಕೈಯಲ್ಲಿ ಕೊಳ್ಳುವ ಶಕ್ತಿ ಹೆಚ್ಚಿರುವ ಕಾರಣದಿಂದ ಉಂಟಾಗಿಲ್ಲ. ಬದಲಿಗೆ, ದುಡಿಯುವ ಜನರ ಕೈಯಲ್ಲಿರುವ ಕೊಳ್ಳುವ ಶಕ್ತಿ ಅತಿ ಕಡಿಮೆಯಾಗಿರುವ ಕಾರಣದಿಂದ ಉಂಟಾಗಿದೆ. ಆದ್ದರಿಂದ, ಸರ್ಕಾರದ ಉದ್ದೇಶವು ದುಡಿಯುವ ಜನರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವುದಾಗಿರಬೇಕು. ಮತ್ತು, ಅದೇ ಸಮಯದಲ್ಲಿ, ಉತ್ಪಾದನೆ ಕಡಿಮೆಯಾಗಿರುವ ನಿರ್ದಿಷ್ಟ ಪದಾರ್ಥಗಳ ಬೆಲೆಗಳನ್ನು ಕೆಲವು ನಿರ್ದಿಷ್ಟ ಕ್ರಮಗಳ ಮೂಲಕ ಹಿಡಿತದಲ್ಲಿಡುವ ಮೂಲಕ ಹಣದುಬ್ಬರವನ್ನು ತಡೆಯಬೇಕು. ಆದರೆ ಈ ಅಂಶವನ್ನು ಹಣಕಾಸು ಬಂಡವಾಳದ ಗುಲಾಮಗಿರಿಗೆ ಒಳಗಾಗಿರುವ ಸರ್ಕಾರವೊಂದು ಅರ್ಥಮಾಡಿಕೊಳ್ಳಲಾರದು.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಭಾರತದ ಅರ್ಥವ್ಯವಸ್ಥೆಯು ನಿಧಾನಗೊಳ್ಳುತ್ತಿರುವ ಹೊತ್ತಿನಲ್ಲಿ, ಕೈಗಾರಿಕಾ ಉತ್ಪಾದನೆಯ ಸೂಚ್ಯಂಕವು ಅಗಸ್ಟ್‌ನಿಂದ ಅಕ್ಟೋಬರ್‌ವರೆಗಿನ ಮೂರೂ ತಿಂಗಳಲ್ಲಿ ಬೆಳವಣಿಗೆ ಸತತವಾಗಿ ಋಣಾತ್ಮಕವಾಗಿದೆ ಎಂಬುದನ್ನು ತೋರಿಸುತ್ತಿದೆ. ಇದೇ ಅವಧಿಯದಲ್ಲಿಯೇ ಹಣದುಬ್ಬರದ ದರವೂ ವೇಗವಾಗಿ ಏರುತ್ತಿರುವುದು ಗಮನಾರ್ಹ.

2018ರ ನವೆಂಬರ್ ಮತ್ತು 2019ರ ನವೆಂಬರ್ ಅವಧಿಯಲ್ಲಿ ವಸ್ತುಗಳ ಚಿಲ್ಲರೆ ಬೆಲೆಯಲ್ಲಿ 5.5% ಏರಿಕೆಯಾಗಿದೆ. ಜನವರಿ 2019ರಿಂದ ನಿಧಾನವಾಗಿ ಆರಂಭವಾದ ಈ ಏರಿಕೆ ಅಗಸ್ಟ್‌ನಲ್ಲಿ 3.28%, ಸೆಪ್ಟೆಂಬರ್‌ನಲ್ಲಿ 3.99%, ಅಕ್ಟೋಬರ್‌ನಲ್ಲಿ 4.62% ತಲುಪಿ ನವೆಂಬರ್ 2019ರಲ್ಲಿ 5.54%ಗೆ ಏರಿದೆ. ಈ ಹಣದುಬ್ಬರದ ಏರಿಕೆಯಲ್ಲಿ ಎದ್ದು ಕಾಣುವ ವಿದ್ಯಮಾನದ ಅಂಶವೆಂದರೆ, ಆಹಾರ ವಸ್ತುಗಳ ಬೆಲೆಗಳ ವಿಪರೀತ ಏರಿಕೆಯಿಂದಾಗಿ ಹಣದುಬ್ಬರದ ದರ ಏರಿರುವುದು. ಆಹಾರ ವಸ್ತುಗಳ ಬೆಲೆಗಳು ನವೆಂಬರ್ 2019ರಲ್ಲಿ 10.01% ಏರಿವೆ. ಆಹಾರ ವಸ್ತುಗಳ ವ್ಯಾಪ್ತಿಯಲ್ಲಿ ಬರುವ ತರಕಾರಿ ಬೆಲೆಗಳು 35.99% ಏರಿವೆ, ಬೇಳೆ ಕಾಳುಗಳು 13.94%; ಮೀನು ಮತ್ತು ಮಾಂಸ 9.38%; ಮೊಟ್ಟೆ 6.2%; ಸಾಂಬಾರ ಪದಾರ್ಥಗಳು 4.33%; ಧಾನ್ಯಗಳು 3.71%; ಹಾಲು 3.46% ಮತ್ತು ಹಣ್ಣುಗಳು 3.29% ಏರಿವೆ. ಆಹಾರ ವಸ್ತುಗಳ ಬೆಲೆಗಳ ಏರಿಕೆಯು ಡಿಸೆಂಬರ್ 2013ರಿಂದ ಈ ವರೆಗಿನ ಅವಧಿಯಲ್ಲಿ ಅತಿ ಹೆಚ್ಚಿನದು.

ಈ ಹಣದುಬ್ಬರವು ಜನ ಸಾಮಾನ್ಯರನ್ನು ಯಾವ ರೀತಿಯಲ್ಲಿ ನೋಯಿಸುತ್ತದೆ ಎಂಬುದನ್ನು ಒಂದು ಮಹತ್ತರ ಅಂಶದಿಂದ ಅರ್ಥ ಮಾಡಿಕೊಳ್ಳಬಹುದು. ಮೋದಿ ಸರ್ಕಾರವು ಬಚ್ಚಿಟ್ಟಿರುವ ಎನ್‌ಎಸ್‌ಎಸ್ ಸ್ಯಾಂಪಲ್ ಸರ್ವೆಯ ವರದಿಯ ಪ್ರಕಾರ, 2011–12 ಮತ್ತು 2017–18ರ ಅವಧಿಯಲ್ಲಿ, ಇಡೀ ದೇಶದಲ್ಲಿ, ತಲಾ ಬಳಕೆಯ ಖರ್ಚು ವೆಚ್ಚಗಳು 3.8% ಇಳಿದಿವೆ ಮತ್ತು ಗ್ರಾಮೀಣದಲ್ಲಿ ಈ ಇಳಿಕೆಯ ಪ್ರಮಾಣವು 10% ಇದೆ. ಇಂತಹ ಇಳಿಕೆಯ ಹಿನ್ನೆಲೆಯಲ್ಲಿ, ಆಹಾರ ವಸ್ತುಗಳ ಬೆಲೆಗಳ ಪ್ರಸ್ತುತ ಏರಿಕೆಯಿಂದಾಗಿ ಈಗಾಗಲೇ ಹಿಡಿತಗೊಂಡಿರುವ ಆಹಾರ ಸೇವನೆಯ ಪ್ರಮಾಣವು ಇನ್ನಷ್ಟು ಹಿಡಿತಗೊಳ್ಳುತ್ತದೆ. ಪರಿಣಾಮವಾಗಿ ಜನರ ದಾರಿದ್ರ್ಯ ಮತ್ತಷ್ಟು ಹೆಚ್ಚುತ್ತದೆ ಮತ್ತು ಅದರ ಪರಿಣಾಮವಾಗಿ ಅವರು ಹೆಚ್ಚು ಹೆಚ್ಚು ಅಪೌಷ್ಠಿಕತೆಗೆ ಒಳಗಾಗುತ್ತಾರೆ.

ಪ್ರಸಕ್ತ ಸನ್ನಿವೇಶದಲ್ಲಿ ಹಣದುಬ್ಬರ ಮತ್ತು ಸ್ಥಗಿತತೆ ಎರಡೂ ಒಟ್ಟೊಟ್ಟಿಗೇ ಕಾಣಿಸಿಕೊಂಡಿವೆ. ಹಣದುಬ್ಬರದೊಂದಿಗೆ ಸ್ಥಗಿತತೆಯ ಮಿಳನವನ್ನು "sssstagflation" (ಸ್ಥಗಿತುಬ್ಬರ) ಎಂದು ಕೆಲವರು ವ್ಯಾಖ್ಯಾನಿಸುತ್ತಾರೆ. ಅದೇನಿದ್ದರೂ, ಇಂದಿನ stagflation ಬಿಕ್ಕಟ್ಟು ಮತ್ತು ಎಪ್ಪತ್ತರ ದಶಕದಲ್ಲಿ ಬಂಡವಾಳಶಾಹಿ ದೇಶಗಳಲ್ಲಿ ಕಾಣಿಸಿಕೊಂಡಿದ್ದ stagflation ಉಂಟುಮಾಡಿದ ಬಿಕ್ಕಟ್ಟುಗಳ ನಡುವೆ ವಿಶ್ಲೇಷಣಾತ್ಮಕವಾಗಿ ಯಾವುದೇ ಸಾಮ್ಯತೆಗಳಿಲ್ಲ. ಆಗ, ಎಲ್ಲೆಡೆಯೂ ತಾಂಡವ ವಾಡುತ್ತಿದ್ದ ತೀವ್ರ ನಿರುದ್ಯೋಗದ ಸನ್ನಿವೇಶದಲ್ಲಿ, 1973ರಲ್ಲಿ, ತೈಲ ಉತ್ಪಾದಕ ದೇಶಗಳು ತೈಲ ಬೆಲೆಯನ್ನು ಏರಿಸಿದ ಪರಿಣಾಮವಾಗಿ ಹಣದುಬ್ಬರ (cost-push inflation) ಉಂಟಾಯಿತು. ಅಂದರೆ ಎಲ್ಲ ವಸ್ತುಗಳ ಬೆಲೆಗಳೂ ತೀವ್ರವಾಗಿ ಏರಿದವು. ಈ ಹಣದುಬ್ಬರದಿಂದಾಗಿ (ಬೆಲೆಗಳ ತೀವ್ರ ಏರಿಕೆಯಿಂದಾಗಿ) ನಿರುದ್ಯೋಗ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿತು. ಈ cost-push inflation ಬಿಕ್ಕಟ್ಟಿನ ಹೊರೆಯನ್ನು ದುಡಿಮೆಗಾರರಿಗೆ ವರ್ಗಾಯಿಸುವ ಮೂಲಕ, ಅಂದರೆ ಉತ್ಪತ್ತಿಯಲ್ಲಿ ದುಡಿಮೆಗಾರರ ಪಾಲನ್ನು ಕಡಿತಗೊಳಿಸುವ ಮೂಲಕ, ನಿವಾರಿಸಿಕೊಳ್ಳಲಾಯಿತು.

ಭಾರತದ ಅರ್ಥವ್ಯವಸ್ಥೆಯ ಪ್ರಸಕ್ತ ಹಣದುಬ್ಬರವು ಯಾವುದೇ ರೀತಿಯ ಸ್ವಯಂ ಬೆಲೆ ಏರಿಕೆ ಕಾರಣದಿಂದ ಉಂಟಾಗಿಲ್ಲ. ಬಹುಷಃ, ಮುಂಬರುವ ತಿಂಗಳುಗಳಲ್ಲಿ ಇಂತಹ ಒಂದು ಸ್ವಯಂ ಬೆಲೆ ಏರಿಕೆಯು, ರುಪಾಯಿ ಬೆಲೆ ಕುಸಿತದಿಂದಾಗಿ ಆಮದು ವಸ್ತುಗಳ ಬೆಲೆಗಳು ಹೆಚ್ಚಾಗುವ ಕಾರಣದಿಂದ ಉಂಟಾಗಲಿದೆ. ಹಾಗಾಗಿ, ಹಣದುಬ್ಬರದಿಂದ ಈಗಾಗಲೇ ನರಳುತ್ತಿರುವ ಅರ್ಥವ್ಯವಸ್ಥೆಯ ಮೇಲೆ, ಅಧಿಕವಾಗಿ, ಸ್ವಯಂ ಬೆಲೆ ಏರಿಕೆ ಕಾರಣದಿಂದ ಉಂಟಾಗುವ ಹಣದುಬ್ಬರದ ಹೊರೆಯಿಂದ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸುತ್ತದೆ.

ಅಂತಹ ಹಣದುಬ್ಬರ ಬೀರುವ ಪರಿಣಾಮಗಳು ಮತ್ತು ಅದರೊಂದಿಗೆ ಹಾಲು, ಟೆಲಿಕಾಂ ಮತ್ತಿತರ ಬೆಲೆಗಳು ಸಧ್ಯದಲ್ಲಿ ಆಡಳಿತಾತ್ಮಕವಾಗಿ ಏರಿಕೆಯಾಗುವ ಕಾರಣದಿಂದ ಉಂಟಾಗುವ ಪರಿಣಾಮಗಳು ಮುಂಬರುವ ತಿಂಗಳುಗಳಲ್ಲಿ ಕಾಣಸಿಕೊಳ್ಳುತ್ತವೆ. ಹಾಲಿ ಹಣದುಬ್ಬರವು, ವಸ್ತುಗಳ ಬೆಲೆಗಳು ಸ್ವಯಂ ಏರುವಿಕೆಯಿಂದಾಗಲಿ ಅಥವಾ ಜನರ ಕೊಳ್ಳುವ ಶಕ್ತಿ ಇದ್ದಕ್ಕಿದ್ದಂತೆಯೇ ಹೆಚ್ಚಾದವು ಎಂಬ ಕಾರಣಗಳಿಂದ ಉಂಟಾಗಿಲ್ಲ. ಬದಲಿಗೆ, ಅದು, ಈಗಾಗಲೇ ಇಳಿಕೆಯಾಗಿರುವ ಜನರ ಕೊಳ್ಳುವ ಶಕ್ತಿಯ ಪರಿಸ್ಥಿತಿಗೆ ಹೋಲಿಸಿದರೆ, ಅನೇಕ ಸರಕು ಸಾಮಗ್ರಿಗಳ ಉತ್ಪಾದನೆ ಇಳಿಕೆಯಾದ ಕಾರಣದಿಂದ ಉಂಟಾಗಿದೆ. ಈ ಸಂದರ್ಭದಲ್ಲಿ ಇನ್ನೂ ಒಂದು ಅಂಶವನ್ನೂ ಗಮನಿಸಬಹುದಾಗಿದೆ. ಅದೇನೆಂದರೆ, ಆಹಾರ ಪದಾರ್ಥಗಳ ಬೆಲೆ ಏರಿಕೆಯನ್ನು ಹೊರತುಪಡಿಸಿದರೆ, 2019 ವರ್ಷದ ಉದ್ದಕ್ಕೂ ಹಣದುಬ್ಬರ ಇಳಿಕೆಯಾಗುತ್ತಿರುವುದು ಕಂಡುಬರುತ್ತದೆ. ಬೇಡಿಕೆ ಮಂದಗೊಳ್ಳುವ ಪರಿಸ್ಥಿತಿಯಲ್ಲಿ ಇದು ಸಹಜವೇ.

ಜನರ ಕೊಳ್ಳುವ ಶಕ್ತಿ ಇದ್ದಕ್ಕಿದ್ದಂತೆಯೇ ಹೆಚ್ಚಾದ ಕಾರಣದಿಂದ ಹಣದುಬ್ಬರದ ದರ ಏರುತ್ತಿಲ್ಲ. ಬದಲಿಗೆ, ಸರಕುಗಳ ಉತ್ಪಾದನೆ ಇಳಿಕೆಯಾದ ಮತ್ತು ಅವುಗಳ ಸರಬರಾಜಿನ ವ್ಯತ್ಯಯದಿಂದ ಉಂಟಾಗಿದೆ. ಈ ಪರಿಸ್ಥಿತಿಯು ಮಂದಗತಿಯಲ್ಲಿರುವ ಅರ್ಥವ್ಯವಸ್ಥೆಯನ್ನು ಮತ್ತಷ್ಟು ಹದಗೆಡಿಸುತ್ತದೆ. ಆ ರೀತಿ ಆಗುತ್ತದೆ, ಏಕೆಂದರೆ, ಜನರು ತಮ್ಮ ಕೊಳ್ಳುವ ಶಕ್ತಿಯ ಹೆಚ್ಚಿನ ಪಾಲನ್ನು (ಹಣವನ್ನು) ಆಹಾರ ಪದಾರ್ಥಗಳನ್ನು ಕೊಳ್ಳಲು ಖರ್ಚು ಮಾಡಬೇಕಾಗುತ್ತದೆ. ಆದ್ದರಿಂದ, ಅವರು ಹಲವು ಹತ್ತು ಸಾಮಗ್ರಿಗಳನ್ನು ಕೊಳ್ಳುವುದನ್ನು ಕೈಬಿಡಬೇಕಾಗುತ್ತದೆ. ಅದರಿಂದ ಅಂತಹ ಸಾಮಗ್ರಿಗಳನ್ನು ತಯಾರಿಸುವ ಕೈಗಾರಿಕಾ ವಲಯಗಳ ಉತ್ಪಾದನೆಯ ಮೇಲಿನ ಬೇಡಿಕೆ ಇಳಿಯುತ್ತದೆ.

ಬೇಡಿಕೆ ಇಳಿಯುತ್ತಿರುವ ಕಾರಣದಿಂದ ಅರ್ಥವ್ಯವಸ್ಥೆಯು ಮಂದಗತಿಗೆ ಇಳಿದಿದೆ. ಈ ಪರಿಸ್ಥಿತಿಯಲ್ಲಿ ಹಣದುಬ್ಬರ ಮತ್ತಷ್ಟು ಏರಿದರೆ, ಈಗಾಗಲೇ ಇಳಿದಿರುವ ಬೇಡಿಕೆ ಇನ್ನಷ್ಟು ಕೆಳಗಿಳಿಯುತ್ತದೆ. ಭಾರತದ ಅರ್ಥವ್ಯವಸ್ಥೆಯು ಸಧ್ಯದಲ್ಲಿ ಎದುರಿಸುತ್ತಿರುವ ಬಿಕ್ಕಟ್ಟಿನಿಂದ ಹೊರ ಬರಬೇಕೆಂದರೆ, ಒಟ್ಟಾರೆ ಬೇಡಿಕೆಯನ್ನು ಉತ್ತೇಜಿಸುವಂತಹ ಕ್ರಮ ಕೈಗೊಳ್ಳುವುದರ ಜೊತೆಯಲ್ಲಿ ಕೆಲವು ಬೆಲೆ-ಸೂಕ್ಷ್ಮ ಸರಕುಗಳ ಸರಬರಾಜನ್ನು ಸಮರ್ಪಕವಾಗಿ ವಿತರಿಸುವ ವ್ಯವಸ್ಥೆ ಮಾಡುವುದು ಅವಶ್ಯವಾಗುತ್ತದೆ.


ಉದಾಹರಣೆಗೆ, ಅವಶ್ಯಕತೆ ಇದ್ದಾಗ ಕೆಲವು ಸರಕುಗಳನ್ನು ಆಮದು ಮಾಡಿಕೊಳ್ಳುವ ಮೂಲಕ ಅವುಗಳ ಸರಬರಾಜನ್ನು ಹೆಚ್ಚಿಸುವುದು; ಅವುಗಳ ಬೆಲೆಯನ್ನು ನಿಗದಿಪಡಿಸುವುದು; ಮತ್ತು ಅವುಗಳನ್ನು ಪಡಿತರಕ್ಕೆ ಒಳಪಡಿಸಬೇಕಾಗುತ್ತದೆ. ಅದೇ ಸಮಯದಲ್ಲಿ, ಉದ್ಯೋಗ ಸೃಷ್ಟಿಸುವ ಮತ್ತು ಬೆಳವಣಿಗೆ ಉತ್ತೇಜಿಸುವಂತಹ ವಿತ್ತೀಯ ಕ್ರಮಗಳನ್ನೂ ಕೈಗೊಳ್ಳಬೇಕಾಗುತ್ತದೆ. ಅಂದರೆ, ಸರ್ಕಾರವು ಜನ-ಕಲ್ಯಾಣ ಕಾರ್ಯಕ್ರಮಗಳ ಮೇಲಿನ ವೆಚ್ಚಗಳನ್ನು ಹೆಚ್ಚಿಸಬೇಕು ಮತ್ತು ಈ ಉದ್ದೇಶಕ್ಕೆ ಹಣ ಹೊಂದಿಸಿಕೊಳ್ಳಲು ಸಂಪತ್ತು ತೆರಿಗೆ ಅಥವಾ ಕಾರ್ಪೋರೇಟ್‌ಗಳ ಲಾಭದ ಮೇಲೆ ತೆರಿಗೆ ಹೇರಬೇಕಾಗುತ್ತದೆ.

ಆದರೆ, ಹಣದುಬ್ಬರದೊಂದಿಗೆ ಸ್ಥಗಿತತೆ ಮಿಳಿತಗೊಂಡಿರುವ ಪರಿಸ್ಥಿತಿಯ **(inflation with stagnation=stagflation)** ಬಗ್ಗೆ ಸರ್ಕಾರ, ಹಣಕಾಸು ಬಂಡವಾಳದ ಸಂಸ್ಥೆಗಳಾದ ಐಎಂಎಫ್ ಮತ್ತು ವಿಶ್ವ ಬ್ಯಾಂಕ್, ಮತ್ತು ಅನೇಕ "ಚಿಂತಕರ ಚಾವಡಿಗಳು" ವ್ಯಾಖ್ಯಾನವು ಸಂಪೂರ್ಣ ವಿರುದ್ಧ ದಿಕ್ಕಿನಲ್ಲಿದೆ. ಹಣದುಬ್ಬರವನ್ನು ಹತ್ತಿಕ್ಕುವ ಸಲುವಾಗಿ ಸರ್ಕಾರ ಅನುಸರಿಸಬೇಕಾದ ವಲಯ-ನಿರ್ದಿಷ್ಟ ಪರಿಹಾರೋಪಾಯಗಳನ್ನು "ಮಾರುಕಟ್ಟೆಯ ಹಸ್ತಕ್ಷೇಪ" ಎಂದೇ ಈ ವ್ಯಾಖ್ಯಾನ ಬೆಯುತ್ತದೆ. ಇಂತಹ ಹಠಮಾರಿತನದ ನಿಲುವುನಿಂದಾಗಿ, ಒಟ್ಟಾರೆ ಬೇಡಿಕೆ ಇಳಿಯುತ್ತದೆ, ನಿರುದ್ಯೋಗ ಪರಿಸ್ಥಿತಿ ಹದಗೆಡುತ್ತದೆ ಮತ್ತು ಬೆಲೆ ಏರಿಕೆಯು ಯಾವ ರೀತಿಯಲ್ಲಿಯೂ ನಿಯಂತ್ರಣವಾಗುವುದಿಲ್ಲ.

ಈ ಬಿಕ್ಕಟ್ಟು ಕಾಲ ಕ್ರಮದಲ್ಲಿ ತನ್ನಾನೇ ಶಮನಗೊಳ್ಳುತ್ತದೆ ಎಂದು ಭಾವಿಸಿ ಸರ್ಕಾರವು ಯಾವ ಕ್ರಮವನ್ನೂ ಕೈಗೊಳ್ಳದಿರಬಹುದು. ವಾಸ್ತವವಾಗಿ, ಆ ರೀತಿಯಲ್ಲಿ ಅದು ಶಮನವಾಗುವುದಿಲ್ಲ. ಆದರೂ, ಬಿಕ್ಕಟ್ಟು ಶಮನಗೊಳ್ಳುತ್ತದೆ ಎಂದು ನಿರೀಕ್ಷಿಸುವ ಸರ್ಕಾರವು, ಅದೇ-ಸಮಯದಲ್ಲಿ ತನ್ನ ಕೋಮುವಾದಿ ವಿಭಜನಕಾರೀ ಅಜೆಂಡಾದ ಮೂಲಕ ಜನರನ್ನು ಉನ್ಮಾದಕ್ಕೊಳಪಡಿಸುತ್ತದೆ. ಒಂದು ವೇಳೆ ಸರ್ಕಾರ ಏನಾದರೂ ಮಾಡುವುದೇ ಆದರೆ, ಹಣಕಾಸು ಬಂಡವಾಳದ ಸಂಸ್ಥೆಗಳಿಂದ ಅದು ಮೈಗೂಡಿಸಿಕೊಂಡಿರುವ ತಿಳುವಳಿಕೆಯ ಕ್ರಮಗಳನ್ನು ಕೈಗೊಳ್ಳುತ್ತದೆ. ಅಂದರೆ, ಬಡ್ಡಿ ದರ ಇಳಿಸುತ್ತದೆ. ಆದರೆ ಈ ಕ್ರಮವು, ಒಟ್ಟಾರೆ ಬೇಡಿಕೆಯನ್ನು ಇಳಿಸುವಲ್ಲಿ ಮತ್ತು ನಿರುದ್ಯೋಗವನ್ನು ಹೆಚ್ಚಿಸುವಲ್ಲಿ ಪರ್ಯವಸಾನಗೊಳ್ಳುತ್ತದೆ. (ಇಲ್ಲೊಂದು ಅಸಮ ಅಂಶವೂ ಇದೆ: ಬಡ್ಡಿ ದರ ಇಳಿದಾಗ ಬೇಡಿಕೆ ಹೆಚ್ಚು ಉತ್ತೇಜನಗೊಳ್ಳದಿದ್ದರೂ, ಬಡ್ಡಿ ದರ ಏರಿದಾಗ ಒಟ್ಟಾರೆ ಬೇಡಿಕೆ ಇಳಿಯುತ್ತದೆ). ಮತ್ತು ಹಣದುಬ್ಬರವನ್ನು ಹತ್ತಿಕ್ಕುವ ಸಲುವಾಗಿ ಸರ್ಕಾರವು ತನ್ನ ಖರ್ಚು ವೆಚ್ಚಗಳನ್ನು ಇಳಿಸುತ್ತದೆ. ಇದೂ ಸಹ ಮಂದಗತಿಯನ್ನು ಹೆಚ್ಚಿಸುತ್ತದೆ ಮತ್ತು ನಿರುದ್ಯೋಗ ಪರಿಸ್ಥಿತಿಯನ್ನು ಉಲ್ಬಣಗೊಳಿಸುತ್ತದೆ.

ಅಷ್ಟೇ ಅಲ್ಲದೆ, ದುಡಿಯುವ ಜನರ ವರಮಾನಗಳು ಇಳಿದಾಗ, ಅವರ ಖರ್ಚು ವೆಚ್ಚಗಳ ಇಳಿಕೆಯ ಪರಿಣಾಮವು ಕೈಗಾರಿಕಾ ವಲಯಗಳ ಸರಕುಗಳ ಮೇಲಿನ ಬೇಡಿಕೆಯನ್ನು ಕಡಿಮೆ ಮಾಡುತ್ತದೆಯೆ ವಿನಹ, ಈಗ ಹಣದುಬ್ಬರಕ್ಕೆ ಕಾರಣವಾಗಿರುವ ಬೇಳೆ, ತರಕಾರಿ ಮುಂತಾದ ಆಹಾರ ಪದಾರ್ಥಗಳ ಬೇಡಿಕೆಯ ಮೇಲೆ ಆಗುವುದಿಲ್ಲ, ಏಕೆಂದರೆ, ಈ ಪದಾರ್ಥಗಳ ಬೆಲೆಗಳು ವರಮಾನದ ಇಳಿಕೆಗೆ ಅನುಗುಣವಾಗಿ ಇಳಿಯುವುದಿಲ್ಲ. ಹಾಗಾಗಿ, ಹಣದುಬ್ಬರ ಇದ್ದಂತೆಯೇ ಇರುತ್ತದೆ ಮತ್ತು ಅದೇ ಸಮಯದಲ್ಲಿ ಆರ್ಥಿಕ ಸ್ಥಗಿತತೆ ಇನ್ನಷ್ಟು ಹದಗೆಡುತ್ತದೆ.

ಹಣದುಬ್ಬರವನ್ನು ಹತ್ತಿಕ್ಕಲು ಸರ್ಕಾರವು ಬಳಸುತ್ತಿರುವ ಆಯುಧಗಳು ಪ್ರಸಕ್ತ ಸನ್ನಿವೇಶದಲ್ಲಿ ಯಾವುದೇ ರೀತಿಯಲ್ಲೂ ಸೂಕ್ತವಾಗಿಲ್ಲ. ಏಕೆಂದರೆ, ಪ್ರಸಕ್ತ ಹಣದುಬ್ಬರವು ದುಡಿಯುವ ಜನರ ಕೈಯಲ್ಲಿ ಕೊಳ್ಳುವ ಶಕ್ತಿ ಹೆಚ್ಚಿರುವ ಕಾರಣದಿಂದ ಉಂಟಾಗಿಲ್ಲ. ಬದಲಿಗೆ, ದುಡಿಯುವ ಜನರ ಕೈಯಲ್ಲಿರುವ ಕೊಳ್ಳುವ ಶಕ್ತಿ ಅತಿ ಕಡಿಮೆಯಾಗಿರುವ ಕಾರಣದಿಂದ ಉಂಟಾಗಿದೆ. ಆದ್ದರಿಂದ, ಸರ್ಕಾರದ ಉದ್ದೇಶವು ದುಡಿಯುವ ಜನರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವುದಾಗಿರಬೇಕು. ಮತ್ತು, ಅದೇ ಸಮಯದಲ್ಲಿ, ಉತ್ಪಾದನೆ ಕಡಿಮೆಯಾಗಿರುವ ನಿರ್ದಿಷ್ಟ ಪದಾರ್ಥಗಳ ಬೆಲೆಗಳನ್ನು ಕೆಲವು ನಿರ್ದಿಷ್ಟ ಕ್ರಮಗಳ ಮೂಲಕ ಹಿಡಿತದಲ್ಲಿಡುವ ಮೂಲಕ ಹಣದುಬ್ಬರವನ್ನು ತಡೆಯಬೇಕು. ಈ ಅಂಶವನ್ನು ಹಣ ಕಾಸು ಬಂಡವಾಳದ ಗುಲಾಮಗಿರಿಗೆ ಒಳಗಾಗಿರುವ ಸರ್ಕಾರವೊಂದು ಅರ್ಥಮಾಡಿಕೊಳ್ಳಲಾರದು.



ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ಈ ಬಿಕ್ಕಟ್ಟು ಕಾಲ ಕ್ರಮದಲ್ಲಿ ತನ್ನಾನೇ ಶಮನಗೊಳ್ಳುತ್ತದೆ ಎಂದು ಭಾವಿಸಿ ಸರ್ಕಾರವು ಯಾವ ಕ್ರಮವನ್ನೂ ಕೈಗೊಳ್ಳದಿರಬಹುದು. ವಾಸ್ತವವಾಗಿ, ಆ ರೀತಿಯಲ್ಲಿ ಅದು ಶಮನವಾಗುವುದಿಲ್ಲ. ಆದರೂ, ಬಿಕ್ಕಟ್ಟು ಶಮನಗೊಳ್ಳುತ್ತದೆ ಎಂದು ನಿರೀಕ್ಷಿಸುವ ಸರ್ಕಾರವು, ಅದೇ-ಸಮಯದಲ್ಲಿ ತನ್ನ ಕೋಮುವಾದಿ ವಿಭಜನಕಾರೀ ಅಜೆಂಡಾದ ಮೂಲಕ ಜನರನ್ನು ಉನ್ಮಾದಕ್ಕೊಳಪಡಿಸುತ್ತದೆ.

CAA, NRC, NPR : ಮೋದಿ-ಶಾ ಗ್ಯಾಂಗಿನ
ಭಾರತದ ಎದೆ ಸೀಳುವ ತ್ರಿಶೂಲ ಮತ್ತು ಹತ್ತು ಮಹಾ ಸುಳ್ಳುಗಳು



ಮೋದಿ ಸರಕಾರದ ಭಾರತದ ಎದೆ ಸೀಳುವ ಕ್ರಮಗಳಾದ CAA, NRC, NPR ಕುರಿತು ಸಿಪಿಐ(ಎಂ) ಸದ್ಯದಲ್ಲೇ ಪ್ರಕಟಿಸಲಿರುವ ಪುಸ್ತಿಕೆಯ ಸಾರಾಂಶ ಇಲ್ಲಿದೆ. ಇವುಗಳ ವಿರುದ್ಧ ತೀವ್ರ ಪ್ರತಿಭಟನೆಯ ನಂತರ ಈ ಕುರಿತು ಮೋದಿ ಸರಕಾರ ಹರಿಯಬಿಟ್ಟಿರುವ ಹತ್ತು ಮಹಾ ಸುಳ್ಳುಗಳನ್ನು ಬಯಲು ಮಾಡಿ ಸತ್ಯ ಸಂಗತಿಯನ್ನುಈ ಪುಸ್ತಿಕೆಯಲ್ಲಿ ವಿವರಿಸಲಾಗಿದೆ.ಇಲ್ಲಿ ಹತ್ತು ಮಹಾ ಸುಳ್ಳುಗಳು ಮತ್ತು ಚುಟುಕಾದ ಉತ್ತರವಿದೆ.

ಮೋದಿ ಸರಕಾರವು ಭಾರತದ ಎದೆಯನ್ನೇ ಸೀಳಲು ಇರಿದಿರುವ ತ್ರಿಶೂಲದ ಮೂರು ಅಲಗುಗಳೆಂದರೆ : ಪೌರತ್ವ ತಿದ್ದುಪಡಿ ಕಾಯಿದೆ (CAA), ನಾಗರಿಕರ ರಾಷ್ಟ್ರೀಯ ರಿಜಿಸ್ಟರ್ (NRC) ಮತ್ತು ರಾಷ್ಟ್ರೀಯ ಜನಸಂಖ್ಯಾ ರಿಜಿಸ್ಟರ್ (NPR). ರಾಷ್ಟ್ರೀಯ ಜನಸಂಖ್ಯಾ ರಿಜಿಸ್ಟರ್ (ಎನ್.ಪಿ.ಆರ್) ನ್ನು ಸಮಕಾಲೀನಗೊಳಿಸಲು ತಕ್ಷಣ ತಯಾರಿ ನಡೆಸಲು ಕೇಂದ್ರ ಸಚಿವ ಸಂಪುಟ ನಿರ್ಧರಿಸಿದೆ. ಸಿಪಿಐ(ಎಂ) ಬಲವಾಗಿ ವಿರೋಧಿಸಿದ ಪೌರತ್ವ ತಿದ್ದುಪಡಿ ಕಾಯಿದೆ (ಸಿಎಎ) ಮಂಜೂರಾದ ನಂತರ, ಪೌರತ್ವ ಹಕ್ಕುಗಳಿಗೆ ಕೋಮುವಾದಿ ಬಣ್ಣ ಕೊಡುವ ಚೌಕಟ್ಟು ಸಾಧಿಸುವತ್ತ ಇದು ಎರಡನೇ ಅಪಾಯಕಾರಿ ಹೆಜ್ಜೆ.

ಆಸ್ಸಾಂ ಒಪ್ಪಂದದ ಚಾರಿತ್ರಿಕ ಸನ್ನಿವೇಶದಿಂದಾಗಿ ಸಿಎಎ ಮತ್ತು ಅದಕ್ಕೆ ಸಂಬಂಧಿಸಿದ ಪ್ರಕ್ರಿಯೆಗಳಿಂದ ಈಶಾನ್ಯ ಭಾರತದ ಪ್ರದೇಶಗಳನ್ನು ಹೊರಗಿಡಬೇಕೆಂಬುದು ಸಿಪಿಐ(ಎಂ) ನಿಲುವು. ಪೌರತ್ವ ತಿದ್ದುಪಡಿ ಮಸೂದೆ (ಸಿಎಬಿ) ಗೆ ಇದನ್ನು ತಿದ್ದುಪಡಿಯಾಗಿ ಸಿಪಿಐ(ಎಂ) ಸೂಚಿಸಿತ್ತು. ಆದರೆ ಅದನ್ನು ಸರಕಾರ ತಿರಸ್ಕರಿಸಿದೆ. ಆಸ್ಸಾಂ ಒಪ್ಪಂದದಲ್ಲಿ ಪೌರತ್ವಕ್ಕೆ 1971ರ ಗಡುವನ್ನು ನಿಗದಿ ಪಡಿಸಲಾಗಿದೆ. ಅದರ ನಂತರ ಬಂದವರ ನಡುವೆ ಮತ ಧರ್ಮದ ಆಧಾರದ ಮೇಲೆ ಯಾವುದೇ ತಾರತಮ್ಯ ಮಾಡಲಾಗಿಲ್ಲ ಎಂಬುದು ಗಮನಿಸಬೇಕಾದ ಅರ್ಥಪೂರ್ಣ ಅಂಶ. ಸಿಎಎ ಆಸ್ಸಾಂ ಒಪ್ಪಂದದ ನೇರ ಹಲ್ಲೆ ನಡೆಸುತ್ತದೆ ಮತ್ತು "ವಿದೇಶೀಯರ" ಪ್ರಶ್ನೆಗೆ ಕೋಮುವಾದಿ ಆಯಾಮವನ್ನು ಸೇರಿಸುತ್ತದೆ.

ಈಗ ದೇಶದಾದ್ಯಂತ ಭಾರೀ ಪ್ರತಿಭಟನೆಗಳು ವ್ಯಕ್ತವಾಗಿರುವುದರಿಂದ ಮೋದಿ-ಶಾ ಜೋಡಿತಮ್ಮ ಸುಳ್ಳಿನ ಸಾಮೂಹಿಕ ಉತ್ಪಾದನೆಯ ಫ್ಯಾಕ್ಟರಿಗಳನ್ನು ಕೆಲಸಕ್ಕೆ ಹಚ್ಚಿದ್ದಾರೆ. ಹಿಟ್ಲರನ ಜರ್ಮನಿಯಲ್ಲಿ ನಾಜೀ ಪ್ರಚಾರದ ನೀತಿಯೊಂದನ್ನುಇಲ್ಲಿ ನೆನಪಿಸಿಕೊಳ್ಳಬಹುದು: "ಒಂದು ಸುಳ್ಳನ್ನು ಸಾವಿರ ಬಾರಿ ಹೇಳುತ್ತಾ ಹೋದರೆ ಅದು ಸತ್ಯವಾಗುತ್ತದೆ". ಅದೇ ಮೋದಿ ಸರಕಾರದ ನೀತಿ ಸಹ ಆಗಿದೆ. ಆದ್ದರಿಂದ ಈ ಮೋದಿ ಸರಕಾರದ ಪ್ರತಿಯೊಂದು ಸುಳ್ಳನ್ನು ಬಯಲುಪಡಿಸಬೇಕಾಗಿದೆ.

ಅವರ ಸುಳ್ಳಿನ ಪಟ್ಟಿ ದಿನೇ ಹೆಚ್ಚುತ್ತಲೇಇದೆ. ಇಲ್ಲಿಯವರೆಗಿನ ಹತ್ತು ಮಹಾ ಸುಳ್ಳುಗಳು ಹೀಗಿವೆ :

ಮಹಾಸುಳ್ಳು 1 : ಸಿಎಎ ಕಾಯಿದೆಯಲ್ಲಿ ತಾರತಮ್ಯವಿಲ್ಲ. ಕಿರುಕುಳಕ್ಕೊಳಗಾದವರ ನೆರವಿಗೆ ಧಾವಿಸುವುದು ಭಾರತದ ಸಂಸ್ಕೃತಿ. ಯಾವ ಭಾರತೀಯ ನಾಗರಿಕನಿಗೂ ಇದರಿಂದ ತೊಂದರೆಯಾಗುವುದಿಲ್ಲ.

ಸತ್ಯ ಸಂಗತಿ: ಭಾರತೀಯ ಪೌರತ್ವ ಕಾಯಿದೆ 1955ರ ಪ್ರಕಾರ ಭಾರತೀಯ ನಾಗರಿಕನಾಗುವ ಐದು ವಿಧಾನಗಳಲ್ಲಿ (ಹುಟ್ಟಿನಿಂದ, ತಂದೆ-ತಾಯಿ ನಾಗರಿಕತ್ವದಿಂದ, ನೆಲೆಸುವಿಕೆಯಿಂದ, ರಿಜಿಸ್ಟರ್ ಮಾಡುವ ಮೂಲಕ, ಪ್ರದೇಶದ ಸೇರಿಸುವಿಕೆಯಿಂದ) ಮತಧರ್ಮದ ಅಥವಾ ಇನ್ಯಾವುದೇ ಆಧಾರದ ಮೇಲೆ ಯಾವುದೇ ತಾರತಮ್ಯವಿರಲಿಲ್ಲ. ಇದು ಪೌರತ್ವಕ್ಕೆ ಮತಧರ್ಮ ಸೇರಿದಂತೆ ಯಾವುದೇ ನೆಲೆಯಲ್ಲಿ ತಾರತಮ್ಯ ಮಾಡದಿರುವನಮ್ಮ ಸಂವಿಧಾನದ ಆಶಯಕ್ಕೆ ಅನುಗುಣವಾಗಿದೆ. ಸಿಎಎ ಮೂರು ವಿಧದ ತಾರತಮ್ಯವನ್ನು ಸೇರಿಸಿ ಸಂವಿಧಾನದ ಆಶಯಗಳನ್ನು ಉಲ್ಲಂಘಿಸಿದೆ. ನೆರೆಯ ದೇಶಗಳಲ್ಲಿ ಮೂರು ದೇಶಗಳ - ಪಾಕಿಸ್ತಾನ, ಬಾಂಗ್ಲಾದೇಶ, ಅಫ್ಘಾನಿಸ್ತಾನದ- ವಲಸೆಗಾರರಿಗೆ ಬೇರೆ ನಿಯಮಗಳನ್ನು ರೂಪಿಸಿದೆ. ಈ ಮೂರು ದೇಶಗಳ ವಲಸೆಗಾರರಲ್ಲೂ ಮುಸ್ಲಿಮರನ್ನು ಹೊರಗಿಡಲಾಗಿದೆ. ಈ ಮೂರು ದೇಶಗಳ ಮುಸ್ಲಿಮೇತರ ವಲಸೆಗಾರರಿಗೆ ಪೌರತ್ವಕ್ಕೆ ಅರ್ಹತೆಯ ಅವಧಿಯನ್ನು ಇತರರಿಗೆ ಇರುವ 15 ವರ್ಷಗಳಿಂದ 5 ವರ್ಷಕ್ಕೆ ಕಡಿತಗೊಳಿಸಲಾಗಿದೆ. ಕಿರುಕುಳಕ್ಕೊಳಗಾದವರ ಮತ್ತು ನಿರಾಶ್ರಿತರ ನೆರವಿಗೆ ಧಾವಿಸುವುದು ಸರಿಯಾದ್ದೇ. ಆದರೆ ಅಲ್ಲೂ ಮತಧರ್ಮ, ದೇಶ, ಭಾಷೆಗಳ ಆಧಾರದಲ್ಲಿ ತಾರತಮ್ಯ ತೋರಲಾಗಿದೆ. ಶ್ರೀಲಂಕಾದಲ್ಲಿ ಧಾರ್ಮಿಕ, ಭಾಷಾ ಎರಡೂ ನೆಲೆಗಳಲ್ಲಿ ತಾರತಮ್ಯ ಕಿರುಕುಳ ತಾಳಲಾರದೆ ಭಾರತದಲ್ಲಿ ದಶಕಗಳಿಂದ ನೆಲೆಸಿರುವ ಹತ್ತಾರು ಲಕ್ಷ ತಮಿಳರನ್ನು ಹೊರಗಿಡಲಾಗಿದೆ. ಪಾಕಿಸ್ತಾನದಲ್ಲಿ ಧಾರ್ಮಿಕ ತಾರತಮ್ಯಕ್ಕೊಳಗಾಗಿರುವ ಶಿಯಾ, ಅಹಮದೀಯ ಮುಂತಾದ ಅಲ್ಪಸಂಖ್ಯಾತರನ್ನೂ, ಮಯನ್ಮಾರಿನ ರೋಹಿಂಗ್ಯ ಮುಸ್ಲಿಮರ ನೆರವಿಗೆ ಧಾವಿಸದಿರುವುದು ಭಾರತೀಯ ಸಂಸ್ಕೃತಿಯ ಘನತೆ ಮತ್ತು ಸಂವಿಧಾನದ ಆಶಯ ಎರಡಕ್ಕೂ ತಕ್ಕುದಲ್ಲ.

ಮಹಾಸುಳ್ಳು 2 : ವಲಸಿಗ ಸಮುದಾಯಗಳನ್ನು ಹಿಂದೆಬೆಂಬಲಿಸಿದ ಕಾಂಗ್ರೆಸ್ ಮತ್ತು ಸಿಪಿಐ(ಎಂ) (20ನೇ ಮಹಾಧಿವೇಶನದ ನಿರ್ಣಯ ಮತ್ತು ಆಗಿನ ಪ್ರಧಾನ ಕಾರ್ಯದರ್ಶಿಯ ಪತ್ರದಲ್ಲಿ ದಾಖಲಿಸಿದಂತೆ) ಪಕ್ಷಗಳು ಈಗ ಮತಬ್ಯಾಂಕ್‌ರಾಜಕೀಯದಿಂದಾಗಿ ಈ ತಿದ್ದುಪಡಿಯನ್ನು ವಿರೋಧಿಸುತ್ತಿವೆ.

ಸತ್ಯ ಸಂಗತಿ: ಕಿರುಕುಳಕ್ಕೊಳಗಾದವರಿಗೆ ನಿರಾಶ್ರಿತರಾದವರಿಗೆ ಆಶ್ರಯಕೊಡಬೇಕೆಂಬುದು ಯಾವತ್ತೂ ಕಮ್ಯುನಿಸ್ಟ್, ಎಡ ಚಳುವಳಿಗಳ, ಸಿಪಿಐ(ಎಂ) ಪಕ್ಷದ ನಿಲುವಾಗಿತ್ತು. 1947ರ ದೇಶ ವಿಭಜನೆ ಮತ್ತು 1971ರ ಪಾಕಿಸ್ತಾನಿ ಮಿಲಿಟರಿ ಸರಕಾರದ ದೌರ್ಜನ್ಯಗಳ ಬಲಿಪಶುಗಳಾದ ಈಗಿನ ಬಾಂಗ್ಲಾದೇಶದ ನಿರಾಶ್ರಿತರಿಗೆ ನೆಲೆ ಒದಗಿಸಲು ಸಿಪಿಐ(ಎಂ) ಹೋರಾಡಿತ್ತು. ಮಾತ್ರವಲ್ಲ ನಿರಾಶ್ರಿತರಾಗಿ ಬಂದು ನೆಲೆಸಿದ ನಾಮ ಶೂದ್ರರಿಗೆ ದಲಿತ ಸ್ಥಾನಮಾನವನ್ನೂ ಪಶ್ಚಿಮ ಬಂಗಾಳದಲ್ಲಿ ಒದಗಿಸಿತ್ತು. ಅವರು ನೆಲೆಸಿದ ಇತರ ರಾಜ್ಯಗಳಲ್ಲೂ ಈ ಸ್ಥಾನಮಾನ ಸಿಗುವಂತೆ ಹೋರಾಟ ನಡೆಸಿತ್ತು. ಆದರೆ ಯಾವತ್ತೂ ಮತಧರ್ಮದ ಅಥವಾ ಇನ್ಯಾವುದೇ ಆಧಾರದ ಮೇಲೆ ತಾರತಮ್ಯದ ನೀತಿಯನ್ನು ಬೆಂಬಲಿಸಿರಲಿಲ್ಲ. ಸಿಎಬಿ ಗೆ ಸಿಪಿಐ(ಎಂ) ಮಂಡಿಸಿದ ತಿದ್ದುಪಡಿಯಲ್ಲಿ ನಿರಾಶ್ರಿತರಿಗೆ ವಲಸಿಗರಿಗೆ ಆಶ್ರಯ ಕೊಡುವಲ್ಲಿ ತಾರತಮ್ಯವನ್ನು ತೆಗೆದು ಹಾಕುವ ತಿದ್ದುಪಡಿಗಳನ್ನು ಮಂಡಿಸಿತ್ತು.

ಮಹಾಸುಳ್ಳು 3 :ಸಿಎಎ (ಪೌರತ್ವ ತಿದ್ದುಪಡಿ ಕಾಯಿದೆ) ಗೂ ಎನ್.ಆರ್.ಸಿ. (ನಾಗರಿಕರ ರಾಷ್ಟ್ರೀಯ ರಿಜಿಸ್ಟರ್)ಗೂ ಯಾವುದೇ ಸಂಬಂಧವಿಲ್ಲ. ಅವುಗಳು ಪ್ರತ್ಯೇಕವಾದುವುಗಳು. ವಿರೋಧ ಪಕ್ಷಗಳು ಇವೆರಡರ ನಡುವೆ ತಪ್ಪಾಗಿ ಸಂಬಂಧ ಕಲ್ಪಿಸುತ್ತಿವೆ.

ಸತ್ಯ ಸಂಗತಿ: ಸಿಎಎ ಗೂ ಎನ್.ಆರ್.ಸಿ. ಗೂ ಸಂಬಂಧ ಕಲ್ಪಿಸಿರುವುದು ಗೃಹ ಮಂತ್ರಿ ಅಮಿತ್ ಶಾ ಮತ್ತು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರು, ವಿರೋಧ ಪಕ್ಷಗಳಲ್ಲ. ಈ ವರ್ಷವೇ ಏಪ್ರಿಲ್ ನಲ್ಲಿ ಬಂಗಾಳದಲ್ಲಿ ಮತ್ತುಡಿಸೆಂಬರ್ 9 ರಂದು ಪಾರ್ಲಿಮೆಂಟಿನಲ್ಲಿ ಮಾಡಿದ ಹೇಳಿಕೆಗಳಲ್ಲಿ ಅಮಿತ್ ಶಾ ಮತ್ತು ಡಿಸೆಂಬರ್ 19 ರಂದು ಜೆ.ಪಿ. ನಡ್ಡಾ ಹೇಳಿಕೆಗಳಿಂದ ಬಿಜೆಪಿಯ ಈ ಹುನ್ನಾರ ಸ್ಪಷ್ಟ. ಸಿಎಎ ಮುಸ್ಲಿಮೇತರ 'ನಿರಾಶ್ರಿತ'ರಿಗೆ ನಾಗರಿಕತ್ವ ಕೊಡುತ್ತದೆ. ಎನ್. ಆರ್.ಸಿ. "ನುಸುಳುಕೋರರ"ನ್ನು ಗುರುತಿಸುತ್ತದೆ. ಸಿಎಎ ನಲ್ಲಿ ಹೊರಗಿಟ್ಟ ಮುಸ್ಲಿಮರನ್ನು "ನುಸುಳುಕೋರರ"ನ್ನಾಗಿ ಮಾಡಿ ಹೊರಗಟ್ಟುವುದು ಬಿಜೆಪಿಯ ಹುನ್ನಾರ

ಮಹಾಸುಳ್ಳು 4: ಡಿಸೆಂಬರ್ 22ರ ದೆಹಲಿ ರ್‍ಯಾಲಿಯಲ್ಲಿ "ತಮ್ಮ ಸರಕಾರ 2014ರಲ್ಲಿ ನನ್ನ ಸರಕಾರಕ್ಕೆ ಅಧಿಕಾರಕ್ಕೆ ಬಂದಾಗಿನಿಂದ ಎನ್.ಆರ್.ಸಿ ಬಗ್ಗೆ ಎಲ್ಲೂ ಯಾವುದೇ ಚರ್ಚೆ ನಡೆದಿಲ್ಲ" ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

ಸತ್ಯ ಸಂಗತಿ: ಜೂನ್ 20, 2019 ರ ಸದನಗಳ ಜಂಟಿ ಅಧಿವೇಶನಕ್ಕೆ ಅಧ್ಯಕ್ಷರು ಮಾಡಿದ ಭಾಷಣದಲ್ಲಿ, ನವೆಂಬರ್ 21, 2019ರಂದು ಅಮಿತ್ ಶಾ ರಾಜ್ಯಸಭೆಯಲ್ಲಿ ಮಾಡಿದ ಭಾಷಣದಲ್ಲಿ ಎನ್.ಆರ್.ಸಿ ಬಗ್ಗೆ ಸ್ಪಷ್ಟ ಉಲ್ಲೇಖವಿದೆ. ಮಾತ್ರವಲ್ಲ, ಎನ್.ಆರ್.ಸಿ. ಜಾರಿಯ ಬಗ್ಗೆ ಕೇಂದ್ರ ಸರಕಾರದ ಮಂತ್ರಿಗಳ 9 ಅಧಿಕೃತ ಹೇಳಿಕೆಗಳಿವೆ. ಇವೆಲ್ಲ ಹೇಳಿಕೆಗಳನ್ನು ಕೇಂದ್ರ ಸಂಪುಟದಲ್ಲಿ ಯಾವುದೇ ಚರ್ಚೆಯಿಲ್ಲದೆ ಮಾಡಲಾಗಿದೆಯೇ?

ಮಹಾಸುಳ್ಳು 5 : ಎನ್.ಆರ್.ಸಿ. ಪ್ರಕ್ರಿಯೆ ಕಾನೂನು ಪ್ರಕಾರ ಈವರೆಗೆ ಸ್ಥಾಪಿತವಾಗಿಲ್ಲ ಮತ್ತು ವಿರೋಧ ಪಕ್ಷಗಳು ಸುಳ್ಳುಗಳನ್ನು ಹರಡುತ್ತಿವೆ ಎಂದು ಪ್ರಧಾನಿ ಮೋದಿ, ಅವರ ಸಂಪುಟ ಸಚಿವರುಗಳು, ಪಕ್ಷದ ವಕ್ತಾರರು ಹಾಗೂ ಬಾಲಬಡುಕ ಮಾಧ್ಯಮ ಮಿತ್ರರು ವಿರೋಧ ಪಕ್ಷಗಳನ್ನು ದೂರುತ್ತಿದ್ದಾರೆ. "ದೇಶದಾದ್ಯಂತ ಎನ್.ಆರ್.ಸಿ ಪ್ರಕ್ರಿಯೆಯನ್ನು ಈ ವರೆಗೆ ಅಧಿಸೂಚಿತಗೊಳಿಸಿಲ್ಲ ಮತ್ತು ಯಾರೂ ಈ ಕುರಿತು ಹೆದರಬೇಕಾಗಿಲ್ಲ." ಎಂದು ಗೃಹ ಖಾತೆಯ ರಾಜ್ಯ ಮಂತ್ರಿ ಜಿ. ಕಿಶನ್‌ರೆಡ್ಡಿ ಹೇಳಿಕೆ ನೀಡಿದ್ದಾರೆ.

ಸತ್ಯ ಸಂಗತಿ: ಎನ್.ಆರ್.ಸಿ. ಪ್ರಕ್ರಿಯೆಯನ್ನು ಕಾನೂನು ಪ್ರಕಾರ ಸ್ಥಾಪಿಸಲು ವಾಜಪೇಯಿ ಸರಕಾರದ ಅವಧಿಯಲ್ಲಿ ಗೃಹ ಮಂತ್ರಿ ಎಲ್. ಕೆ.ಅಡ್ವಾಣಿ ಅವರಿಂದ ಮಂಡಿತವಾಗಿ 2003ರಲ್ಲಿ ಅಂಗೀಕೃತವಾಯಿತು. ಇದಕ್ಕಾಗಿ ಪ್ರತ್ಯೇಕ ಕಾನೂನು ರಚನೆಯಾಗಿಲ್ಲ. ಬದಲಿಗೆ, ಭಾರತ ಪೌರತ್ವ ಕಾಯಿದೆ 1955ಗೆ ತಿದ್ದುಪಡಿ ಮಾಡಲಾಗಿದೆ. ಎನ್.ಆರ್.ಸಿ. ಜಾರಿಗೆ ನಿಯಮಾವಳಿಯನ್ನು ಸಹ ರಚಿಸಿ 2003ರಲ್ಲೇ ಅಂಗೀಕರಿಸಲಾಗಿದೆ.

ಮಹಾಸುಳ್ಳು 6 : ಎನ್.ಆರ್.ಸಿ. ಪ್ರಕ್ರಿಯೆ ಇನ್ನೂ ಆರಂಭವಾಗಿಲ್ಲ ಮತ್ತು ಆ ಕುರಿತು ಯಾವುದೇ ಅಧಿಸೂಚನೆಯೂ ಇಲ್ಲ.

ಎನ್.ಆರ್.ಸಿ. ಜಾರಿಗೆ ನಿಯಮಾವಳಿ ಮನೆ ಮನೆಗೆ ತೆರಳಿ ಮಾಹಿತಿ ಸಂಗ್ರಹಿಸುವ ರಾಷ್ಟ್ರೀಯ ಜನಸಂಖ್ಯಾ ರಿಜಿಸ್ಟರ್ (ಎನ್.ಪಿ.ಆರ್.) ಪ್ರಕ್ರಿಯೆಯೊಂದಿಗೆ ಆರಂಭವಾಗುತ್ತದೆ ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಎನ್.ಪಿ.ಆರ್. ಪ್ರಕ್ರಿಯೆ ಮುಗಿದ ನಂತರ ಅದರ ಆಧಾರದ ಮೇಲೆ ಎನ್.ಆರ್.ಸಿ. ರಚಿಸಲಾಗುವುದು. ಎನ್.ಪಿ.ಆರ್. ಮತ್ತು ಎನ್.ಆರ್.ಸಿ ನಡುವಿನ ಸಂಬಂಧದ ಬಗ್ಗೆ ಕೇಂದ್ರ ಗೃಹ ರಾಜ್ಯ ಮಂತ್ರಿ ಜುಲೈ 23, 2014ರಲ್ಲಿ ಸ್ಪಷ್ಟ ಹೇಳಿಕೆ ನೀಡಿದ್ದಾರೆ. ಎನ್.ಪಿ.ಆರ್. ಪ್ರಕ್ರಿಯೆ ಆರಂಭಿಸಲು ಜುಲೈ 31, 2019 ರಂದು ಅಧಿಸೂಚನೆ ಹೊರಡಿಸಲಾಗಿದೆ.

ಮಹಾಸುಳ್ಳು 7: ಎನ್.ಆರ್.ಸಿ. (ಪೌರತ್ವರಿಜಿಸ್ಟರ್)ಗೂ ಎನ್.ಪಿ.ಆರ್. (ಜನಸಂಖ್ಯಾ ರಿಜಿಸ್ಟರ್)ಗೂ ಏನೂ ಸಂಬಂಧವಿಲ್ಲ ಎಂದು ಗೃಹ ಮಂತ್ರಿ ಅಮಿತ್ ಶಾ ಹೇಳಿಕೆ ನೀಡಿದ್ದಾರೆ. ಎನ್.ಪಿ.ಆರ್ ಹೆಚ್ಚಿನ ಪ್ರಶ್ನೆಗಳೊಂದಿಗೆ ಸಮಕಾಲೀನಗೊಳಿಸುವ ಕೇಂದ್ರ ಸಂಪುಟದ ನಿರ್ಧಾರದ ಸಂದರ್ಭದಲ್ಲಿ ಈ ಹೇಳಿಕೆ ಕೊಟ್ಟಿದ್ದಾರೆ. ಎನ್.ಪಿ.ಆರ್. ಜನಗಣತಿಯ ಉದ್ದೇಶಕ್ಕೆ ಮಾತ್ರವಿದೆ. ಎನ್.ಆರ್.ಸಿ. ಅಥವಾ ಪೌರತ್ವಕ್ಕೂ ಅದಕ್ಕೂ ಯಾವುದೇ ಸಂಬಂಧವಿಲ್ಲ. ಆದ್ದರಿಂದ ಭಾರತೀಯ ನಾಗರಿಕರಿಗೆ ತೊಂದರೆಯಾಗುತ್ತಿದೆ ಎಂದು ವಿರೋಧ ಪಕ್ಷಗಳು ಯಾಕೆ ಹೇಳುತ್ತಿವೆ ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಪ್ರಕಾಶ ಜಾವಡೇಕರ್ ಹೇಳಿದ್ದಾರೆ.

ಸತ್ಯ ಸಂಗತಿ: ಗೃಹ ಸಚಿವಾಲಯದ 2018-19 ವಾರ್ಷಿಕ ವರದಿಯ ಅಧ್ಯಾಯ 15 ಪಾರಾ 15.40 ಎನ್.ಪಿ.ಆರ್ ಮತ್ತು ಎನ್. ಆರ್.ಸಿ. (ಅಂದರೆ ಪೌರತ್ವದ) ಗಳ ಸಂಬಂಧದ ಬಗೆಗ ಸ್ಪಷ್ಟವಿದೆ. ಎನ್.ಪಿ.ಆರ್ ಮತ್ತು ಜನಗಣತಿಯನ್ನು ಜನಗಣತಿ ಅಧಿಕಾರಿಗಳು ನಡೆಸುತ್ತಾರೆ ಎಂದು ಬಿಟ್ಟರೆ ಅವೆರಡಕ್ಕೆ ಸಂಬಂಧವಿಲ್ಲ. ಎನ್.ಪಿ.ಆರ್. ಪ್ರಶ್ನಾವಳಿಯಲ್ಲಿ ಹಿಂದಿನ 15 ಪ್ರಶ್ನೆಗಳಿಗೆ ಆರು ಹೊಸ ಪ್ರಶ್ನೆಗಳನ್ನು ಸೇರಿಸಲಾಗಿದೆ. ತಂದೆ, ತಾಯಿ ಹುಟ್ಟಿದ ತಾರೀಕು, ಸ್ಥಳಗಳ ಮತ್ತು ಆಧಾರ್ ಬಗ್ಗೆ ಬಗ್ಗೆ ಕೇಳಲಾಗಿದ್ದು, ಇವನ್ನು ಎನ್.ಆರ್.ಸಿ. ಮತ್ತು ಪೌರತ್ವಕ್ಕೆ ಸಂಬಂಧಿಸಿ ಕೇಳಲಾಗುತ್ತಿದೆ.

ಮಹಾಸುಳ್ಳು 8 : ಯಾವುದೇ ಭಾರತೀಯ ಭಯಪಡುವಂಥದ್ದೇನಿಲ್ಲ.

ಸತ್ಯ ಸಂಗತಿ : ಎಲ್ಲಾ ಸಮುದಾಯಗಳ ಬಡವರು ಮತ್ತು ಅಂಚಿಗೆ ತಳ್ಳಲ್ಪಟ್ಟವರು ಭಯ ಪಡುವಂಥದ್ದು ಖಂಡಿತ ಇದೆ. ತಂದೆ, ತಾಯಿ ಹುಟ್ಟಿದ ತಾರೀಕು, ಸ್ಥಳಗಳ ಮಾಹಿತಿ ಒದಗಿಸುವುದು ಹೆಚ್ಚಿನ ಶಾಶ್ವತ ಸೂರು ಇಲ್ಲದ, ನೆರೆ ಬರ ಮುಂತಾದ ಪ್ರಾಕೃತಿಕ ವಿಕೋಪಗಳಿಗೆ ತುತ್ತಾಗುವ, ಆಗಾಗ ವಲಸೆ ಹೋಗುವ ಅನಕ್ಷರಸ್ಥ ಬಡವರಿಗೆ ಕಷ್ಟಕರ ವಿಷಯ. ಇದು ಅಸ್ಸಾಂನಲ್ಲಿ ನಡೆದ ಎನ್.ಆರ್.ಸಿ. ಪ್ರಕ್ರಿಯೆಯ ಅನುಭವ ಕೂಡಾ. ಸಾಲದ್ದಕ್ಕೆ ಬಯೋಮೆಟ್ರಿಕ್ ಕೊಡಬೇಕಾಗಿದೆ. ಬಯೋಮೆಟ್ರಿಕ್ ಮತ್ತು ಆಧಾರ್ ಮ್ಯಾಚಿಂಗ್ ಹಲವು ಕಾರಣಗಳಿಗೆ ವಿಫಲವಾಗುವುದು ಸಹ ವ್ಯಾಪಕವಾದ ಬಡವರ ಅನುಭವ. ಇದರಿಂದಾಗಿ ರೇಶನ್, ರೇಗಾ ಕೂಲಿ ಕಳೆದುಕೊಂಡ ಲಕ್ಷಾಂತರ ಬಡವರ ದೃಷ್ಟಾಂತಗಳಿವೆ. ಮುಂದಿನ ಹಂತದಲ್ಲಿ ಅಧಿಕಾರಿಗಳು ಕೇಳಿದರೆ ತಂದೆ-ತಾಯಿಗಳ ಸೇರಿದಂತೆ ಹಲವು ದಾಖಲೆಗಳನ್ನು ಒದಗಿಸಬೇಕು. ಅಸ್ಸಾಂ ಎನ್.ಆರ್.ಸಿ ಪ್ರಕ್ರಿಯೆ ಸ್ಪಷ್ಟ ಪಡಿಸಿದಂತೆ ಸಾಮಾನ್ಯ ಗುರುತಿನ ದಾಖಲೆ (ಜನ್ಮಪತ್ರ, ಆಧಾರ್, ವೋಟರ್ ಐಡಿ, ಪಾನ್‌ಕಾರ್ಡ್, ಪಾಸ್ ಪೋರ್ಟ್) ಸಾಕಾಗುವುದಿಲ್ಲ. ತಂದೆ ತಾಯಿ ಇಬ್ಬರ ದಾಖಲೆ ಬೇಕಾಗುತ್ತದೆ. ಆದ್ದರಿಂದಲೇ ಎನ್.ಪಿ.ಆರ್- ಎನ್.ಆರ್.ಸಿ. ಪ್ರಕ್ರಿಯೆ ಬಗ್ಗೆ ವ್ಯಾಪಕ ಭಯ ಉಂಟಾಗಿದೆ. ಇದು ಬಿಜೆಪಿ ಸರಕಾರದ ನೋಟು ನಿಷೇಧ ಮುಂತಾದ ಕ್ರೂರ ಕ್ರಮಗಳ ಹಿಂದಿನ ರೆಕಾರ್ಡಿನಿಂದ ಬಂದ ಸಹಜ ವಾಸ್ತವಿಕ ಭಯ.

ಮಹಾಸುಳ್ಳು 9 : ದೇಶದಲ್ಲೂ ಬಂಧನ ಕೇಂದ್ರಗಳು ಇಲ್ಲಎಂದು ಪ್ರಧಾನಿ ಮೋದಿ ಅವರು ಹೇಳಿದ್ದಾರೆ.

ಸತ್ಯ ಸಂಗತಿ : ಕಾನೂನು ಬಾಹಿರ ವಲಸೆಗಾರರು ಮತ್ತು ವಿದೇಶಿ ಅಪರಾಧಿಗಳನ್ನು ಇಡಲು ಬಂಧನ ಕೇಂದ್ರಗಳನ್ನು ಕಟ್ಟುವಂತೆ ಜನವರಿ 9, 2019ರಂದು ಕೇಂದ್ರ ಸರಕಾರ ಸರಕಾರ ನಿರ್ದೇಶನ ನೀಡಿದೆ (ಮಾಹಿತಿ ಮೂಲ : ಡಿಸೆಂಬರ್ 11, 2019 ರಾಜ್ಯ ಸಭೆಯಲ್ಲಿ ಗೃಹ ರಾಜ್ಯ ಸಚಿವರ ಉತ್ತರ). ಆಸ್ಸಾಂ ನಲ್ಲಿ 6 ಬಂಧನ ಕೇಂದ್ರಗಳಿವೆ. ಅದರಲ್ಲಿ 988 "ವಿದೇಶೀಯರು" ಇದ್ದು 28 ಬಂಧಿತರು ಸತ್ತಿದ್ದಾರೆ ಎಂದು ನವೆಂಬರ್ 2019ರಲ್ಲಿ ಪ್ರಶ್ನೋತ್ತರದಲ್ಲಿ ಗೃಹ ರಾಜ್ಯ ಸಚಿವರ ಹೇಳಿದ್ದಾರೆ. ಮಹಾರಾಷ್ಟ್ರ, ಕರ್ನಾಟಕ ಮುಂತಾದ ರಾಜ್ಯಗಳಲ್ಲಿ ಬಂಧನ ಕೇಂದ್ರ ಕಟ್ಟುವ ಕೆಲಸ ಆರಂಭವಾಗಿದೆ. ⇨⇨⇨

ಲೇಬರ್ ಪಕ್ಷದ ಮತ 2010 ಕ್ಕೆ ಹೋಲಿಸಿದರೆ, ಗಮನಾರ್ಹವಾಗಿ ಹೆಚ್ಚಳವಾಗಿದೆ. ಆದರೆ ಲೇಬರ್ ಸೋಲು ಸಾಕಷ್ಟು ವ್ಯಾಪಕವಾಗಿತ್ತು. ಜನಮತ ಸಂಗ್ರಹದಲ್ಲಿ ಬ್ರೆಕ್ಸಿಟ್ ಪರ ಬಹುಮತವಿದ್ದ ಮೂರನೇ ಎರಡರಷ್ಟು ಕ್ಷೇತ್ರಗಳಲ್ಲಿ (ಇವುಗಳಲ್ಲಿ ಬಹುಪಾಲು ಲೇಬರ್ ನೆಲೆಗಳು) ಲೇಬರ್ ಪಕ್ಷ ಸೋತಿದೆ. ಬ್ರೆಕ್ಸಿಟ್ ಪರ ದೃಢ ನಿಲುವು ತೆಗೆದುಕೊಂಡಿದ್ದರೆ ಲೇಬರ್ ಇಷ್ಟು ಸಮಗ್ರವಾಗಿ ಸೋಲುತ್ತಿರಲಿಲ್ಲ. ಬ್ರೆಕ್ಸಿಟ್ ಪರ ಮತ ಬ್ರಿಟನಿನ ಆಳುವ ವ್ಯವಸ್ಥೆಯ ವಿರುದ್ಧ ಮತವಾಗಿತ್ತು. ಇದನ್ನು ಆಳುವ ವ್ಯವಸ್ಥೆಯ ವಿರುದ್ಧ ಪಕ್ಷವಾದ ಲೇಬರ್ ಅರ್ಥ ಮಾಡಿಕೊಂಡು ಸರಿಯಾದ ದೃಢ ನಿಲುವು ತೆಗೆದುಕೊಳ್ಳಬೇಕಾಗಿತ್ತು.

ಬ್ರಿಟನ್ ಚುನಾವಣೆ: ಲೇಬರ್ ಪರಾಭವ



ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಡಿಸೆಂಬರ್ 12, ರಂದು ಬ್ರಿಟನ್ ಸಂಸತ್ತಿನ ಕೆಳಸದನಕ್ಕೆ ಸಾರ್ವತ್ರಿಕ ಚುನಾವಣೆ ನಡೆಯಿತು. ಆಳುವ ಟೋರಿ ಪಕ್ಷವು ಭಾರೀ ಬಹುಮತದಿಂದ ಮತ್ತೆ ಅಧಿಕಾರಕ್ಕೆ ಬಂದಿದೆ. ಒಟ್ಟು 650 ಸದಸ್ಯರನ್ನು ಹೊಂದಿರುವ ಸಂಸತ್ತಿನಲ್ಲಿ, ಪ್ರಧಾನಿ ಬೋರಿಸ್ ಜಾನ್ಸನ್ ನೇತೃತ್ವದ ಪಕ್ಷದ "ಟೋರಿ" ಗಳು 364 ಸ್ಥಾನಗಳನ್ನು ಗೆದ್ದಿದ್ದಾರೆ. 78 ಸೀಟುಗಳ ಬಹುಮತವನ್ನು ಪಡೆದುಕೊಂಡಿದ್ದಾರೆ. ಪ್ರಮುಖ ಪ್ರತಿಪಕ್ಷವಾದ ಲೇಬರ್ ಪಾರ್ಟಿ 203 ಸ್ಥಾನ ಗಳನ್ನು ಪಡೆದು ಮತ್ತೆ ಸೋಲನ್ನು ಅನುಭವಿಸಿದೆ.

ಬ್ರೆಕ್ಸಿಟ್ – ಅಂದರೆ ಬ್ರಿಟನ್ ಯುರೋಪಿಯನ್ ಒಕ್ಕೂಟ (ಇಯು)ದಿಂದ ಹೊರಬರುವ ತೀರ್ಮಾನದ – ಹಿನ್ನೆಲೆಯಲ್ಲಿ, ಉಂಟಾಗಿದ್ದ ಪರ ಮತ್ತು ವಿರೋಧದ ನಡುವಿನಲ್ಲಿ ಪ್ರತಿಪಕ್ಷಗಳೇ ಈ ಚುನಾವಣೆ ನಡೆಸಬೇಕೆಂದು ಆಗ್ರಹ ಪಡಿಸಿದ್ದರು. ಆದರೆ, ಚುನಾವಣೆಯ ಫಲಿತಾಂಶ ವ್ಯತಿರಿಕ್ತವಾಯುತು ಏಕೆ? ಎಂಬುದು ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಯ ವಿಷಯವಾಗಿದೆ.

ಯುರೋಪಿಯನ್ ಒಕ್ಕೂಟ ವನ್ನು ಬ್ರಿಟನ್ ತೊರೆಯುವುದಕ್ಕಿಂತ ಹೆಚ್ಚಾಗಿ, ಯುರೋ ಸಂದೇಹವಾದಿಗಳನ್ನು ಸಮಾಧಾನ ಪಡಿಸಲು, ಅಂದಿನ ಪ್ರಧಾನಿ ಡೇವಿಡ್ ಕ್ಯಾಮರೂನ್ 2016 ರಲ್ಲಿ ಜನಮತ ಸಂಗ್ರಹಣೆಗೆ ಆದೇಶ ಹೊರಡಿಸಿದ್ದರು. ಅದರಂತೆ ಬ್ರೆಕ್ಸಿಟ್ (ಇಯುನಿಂದ ಬ್ರಿಟನ್ ಹೊರಬರುವ) ಪರ ಶೇ 51 ರಷ್ಟು ಬಹುಮತ ಬಂದಿತ್ತು .

1923 ರ ನಂತರ ನಡೆದ ಮೊದಲ ಬಾರಿ ಡಿಸೆಂಬರ್ ನಲ್ಲಿ ಬ್ರಿಟಿಷ್ ಸಾರ್ವತ್ರಿಕ ಚುನಾವಣೆ ನಡೆದಿದ್ದು, ಚುನಾವಣೆಯ ಫಲಿತಾಂಶವು ಅದೇ ರೀತಿ ಬಂದಿತ್ತು. 1923ರ ಚುನಾವಣೆಯಲ್ಲಿಯೂ ಲೇಬರ್ ಪಕ್ಷಕ್ಕೆ ಸೋಲುಂಟಾಗಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಬ್ರಿಟನ್‌ನಲ್ಲಿ ಚುನಾವಣಾ ದಿನಾಂಕ ಮತ್ತು ದಿನವನ್ನು, ಸಾಂಪ್ರದಾಯಿಕವಾಗಿ ಗುರುವಾರವೇ ನಡೆಸಲಾಗುತ್ತದೆ. ಚುನಾವಣೆ ನಡೆಸುವ ಸರಕಾರಿ ನೌಕರರಿಗೆ ಅನುಕೂಲಕರ ದಿನವೆಂದು ಹಾಗೆ ಮಾಡಲಾಗುತ್ತದೆ. ವಿಶ್ವವಿದ್ಯಾಲಯಗಳಿರುವ ಪಟ್ಟಣಗಳಲ್ಲಿನ, ವಿದ್ಯಾರ್ಥಿಗಳ ಬೆಂಬಲ ಪಡೆದು, ಹೆಚ್ಚಿನ ಸ್ಥಾನಗಳನ್ನು ಗೆಲ್ಲುತ್ತಿದ್ದ, ಲೇಬರ್ ಪಕ್ಷವು ಗುರುವಾರದ ಬದಲಿಗೆ ಮೂರು ದಿನ ಮುಂಚಿತವಾಗಿ ಸೋಮವಾರವೇ ಅಂದರೆ, ಡಿಸೆಂಬರ್ 9 ರಂದು, ಚುನಾವಣೆಯನ್ನು ಲೇಬರ್ ಪಕ್ಷ ಬಯಸಿತ್ತು. ಏಕೆಂದರೆ, ಬಹುಸಂಖ್ಯೆಯ ವಿದ್ಯಾರ್ಥಿಗಳು ಲೇಬರ್ ಪಕ್ಷದ ಬೆಂಬಲಿಗರಾಗಿದ್ದು ತಮ್ಮ ಸೆಮಿಸ್ಟರ್ ಗಳ ನಡುವಿನ ವಿರಾಮಕ್ಕೆ ತೆರಳುವ ಮೊದಲು ಚುನಾವಣೆ ನಡೆಸಿದ್ದರೆ ದೊಡ್ಡ ಪ್ರಮಾಣದಲ್ಲಿ, ವಿದ್ಯಾರ್ಥಿಗಳು ಮತ ಚಲಾಯಿಸಲು ಅವಕಾಶ ಸಿಗುತ್ತಿತ್ತು. ಆದರೆ ಚುನಾವಣಾ ನಡೆಸುವ ಮೇಲ್ವಿಚಾರಕರು ಇದಕ್ಕೆ ಅವಕಾಶ ಕೊಡಲಿಲ್ಲ. ಹೀಗಾಗಿ, ಲೇಬರ್ ಪಕ್ಷದ ಹಿನ್ನಡೆಗೆ ಈ ಅಂಶವು ಒಂದು ಪ್ರಮುಖ ಕಾರಣವಾಯಿತು ಎಂದು ವಿಶ್ಲೇಷಣೆ ಮಾಡಲಾಗಿದೆ.

ಯುಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಬಹಿರಂಗವಾಗಿಯೇ "ನೋ ಡೀಲ್" (ಯಾವುದೇ ಒಪ್ಪಂದವಿಲ್ಲ) ಶಿಫಾರಸ್ಸು ಮಾಡಿದ್ದರು. ಈ ವಿಚಾರದಲ್ಲೂ, ವಿಶ್ವ ವಾಣಿಜ್ಯ ಸಂಘಟನೆ (ಡಬ್ಲ್ಯೂ.ಟಿ.ಒ) ನಿಯಮಾವಳಿಗಳ ಅಡಿಯಲ್ಲಿ, ಯುಕೆ ಯುರೋಪಿಯನ್ ಒಕ್ಕೂಟ ದಿಂದ ಹೊರಬರುವಂತೆ ಆಗ್ರಹಿಸಿ, ಹೊಸ ಚುನಾವಣೆಗೆ ಕರೆ ನೀಡುವ ನಿರ್ಧಾರವನ್ನು ಲೇಬರ್ ಪಕ್ಷ ವಿಳಂಬ ಮಾಡಿತು. ಹಿಂದಿನ ಪ್ರಧಾನಿ ಥೆರೇಸಾ ಮೇ ಯವರ, ಬ್ರೆಕ್ಸಿಟ್ ಪ್ರಸ್ತಾವಗಳನ್ನು ವಿಫಲಗೊಳಿಸುವ ಪ್ರಯತ್ನದಲ್ಲಿಯೂ, "ಬ್ರೆಕ್ಸಿಟ್ ಒಪ್ಪಂದ ಅಥವಾ ನೋ ಡೀಲ್ " ಕುರಿತಂತೆ ಲೇಬರ್ ಪಕ್ಷದ ನಾಯಕತ್ವ ಮತ್ತು ಸದಸ್ಯತ್ವದೊಳಗೆ ಭಿನ್ನಾಭಿಪ್ರಾಯದ ಸಂಘರ್ಷಗಳು ಆಳವಾಗಿ ಹುದುಗಿತ್ತು. ನಾಯಕರಾದ ಜೆರೆಮಿ ಕಾರ್ಬಿನ್ ರವರು ಈ ಒಂದು ಪ್ರಮುಖ ವಿಚಾರದಲ್ಲಿ ಗೊಂದಲಕ್ಕೆ ಸಿಕ್ಕಿ ತಟಸ್ಥರಾಗಿದ್ದು, ಚುನಾವಣೆಯ ಸಂದರ್ಭದಲ್ಲಿ ಸೂಕ್ತ ಹಾಗೂ ಸ್ಪಷ್ಟ ನಿಲುವುಗಳನ್ನು ಹೊಂದುವಲ್ಲಿ ವಿಫಲವಾದರು. ಹಿಂದೆ ಅವರು ಇಯು ಸೇರುವುದಕ್ಕೆನೇ ವಿರೋಧಿಯಾಗಿದ್ದರೂ, ಪಕ್ಷದ ನಾಯಕರಾಗಿ ತೀವ್ರ ಭಿನ್ನಾಭಿಪ್ರಾಯಗಳಿಂದ ತಟಸ್ಥವಾಗಿ ಉಳಿಯಬೇಕಾಯಿತು. ಲೇಬರ್ ಪಕ್ಷದ ಮತ 2010 ಕ್ಕೆ ಹೋಲಿಸಿದರೆ, ಗಮನಾರ್ಹವಾಗಿ ಹೆಚ್ಚಳವಾಗಿದೆ. ಆದರೆ ಲೇಬರ್ ಸೋಲು ಸಾಕಷ್ಟು ವ್ಯಾಪಕವಾಗಿತ್ತು. ಜನಮತ ಸಂಗ್ರಹದಲ್ಲಿ ಬ್ರೆಕ್ಸಿಟ್ ಪರ ಬಹುಮತವಿದ್ದ ಮೂರನೇ ಎರಡರಷ್ಟು ಕ್ಷೇತ್ರಗಳಲ್ಲಿ (ಇವುಗಳಲ್ಲಿ ಬಹುಪಾಲು ಲೇಬರ್ ನೆಲೆಗಳು) ಲೇಬರ್ ಪಕ್ಷ ಸೋತಿದೆ. ಬ್ರೆಕ್ಸಿಟ್ ಪರ ದೃಢ ನಿಲುವು ತೆಗೆದುಕೊಂಡಿದ್ದರೆ ಲೇಬರ್ ಇಷ್ಟು ಸಮಗ್ರವಾಗಿ ಸೋಲುತ್ತಿರಲಿಲ್ಲ. ಬ್ರೆಕ್ಸಿಟ್ ಪರ ಮತ ಬ್ರಿಟನಿನ ಆಳುವ ವ್ಯವಸ್ಥೆಯ ವಿರುದ್ಧ ಮತವಾಗಿತ್ತು. ಇದನ್ನು ಆಳುವ ವ್ಯವಸ್ಥೆಯ ವಿರುದ್ಧ ಪಕ್ಷವಾದ ಲೇಬರ್ ಅರ್ಥ ಮಾಡಿಕೊಂಡು ಸರಿಯಾದ ದೃಢ ನಿಲುವು ತೆಗೆದುಕೊಳ್ಳಬೇಕಾಗಿತ್ತು.

ಈ ದೌರ್ಬಲ್ಯವನ್ನು ಅಲ್ಲಿನ ಮಾಧ್ಯಮಗಳು ಚೆನ್ನಾಗಿ ಬಳಸಿಕೊಂಡು "ಇದು ಬ್ರೆಕ್ಸಿಟ್ ಚುನಾವಣೆ" ಎಂದು ಬ್ರಾಂಡ್ ಮಾಡಿ ಪ್ರಖರವಾಗಿ ಪ್ರಚಾರ ನಡೆಸಿದವು. ಬ್ರೆಕ್ಸಿಟ್ ಒಂದೇ ಚುನಾವಣಾ ವಿಷಯ ಅಲ್ಲ. ಇನ್ನೂ ಹಲವು ಜ್ವಲಂತ ವಿಷಯಗಳಿವೆ ಎಂಬ ಲೇಬರ್ ಧೋರಣೆ ಮಾಧ್ಯಮಗಳ 'ಬ್ರೆಕ್ಸಿಟ್' ಭರಾಟೆಯಿಂದಾಗಿ ಮುಂದಕ್ಕೊಯ್ಯಲು ಸಾಧ್ಯವಾಗಲಿಲ್ಲ. ಇದೇ ಲೇಬರ್ ಪಕ್ಷದ ಸೋಲಿಗೆ ಪ್ರಮುಖ ಕಾರಣವಾಯಿತು ಎಂದು ಹೇಳಲಾಗಿದೆ.

ಟೋರಿ ಪಕ್ಷದ ಆಪ್ತ ಸ್ನೇಹಿತ ರಾದ ರಬ್ಬಿ ನೇತೃತ್ವದ ಯಹೂದಿ ಬೋರ್ಡ್ ಆಫ್ ಡೆಪ್ಯೂಟಿಸ್, ಚುನಾವಣೆಯ ಸಮಯದಲ್ಲಿ ಮಧ್ಯಪ್ರವೇಶಿಸಿ, ಲೇಬರ್ ಪಕ್ಷದ ನಾಯಕ, ಜೆರೆಮಿ ಕಾರ್ಬಿನ್ ಯೆಹೂದಿ–ವಿರೋಧಿ ಎಂದು ಆರೋಪಿಸಿದರು. ಲೇಬರ್ ಪಕ್ಷವು ಬ್ರಿಟನಿನ ಯಹೂದಿ ಜನರ ರಕ್ಷಣೆಯನ್ನು ನಿರ್ಲಕ್ಷಿಸಿದೆ ಎಂಬ ಆರೋಪಗಳನ್ನು ಚುನಾವಣೆಯ ಸಂದರ್ಭದಲ್ಲಿ ಮಾಡಿದರು.

ಬಿಜೆಪಿಯ ಸಾಗರೋತ್ತರ ಸ್ನೇಹಿತರು (ಒಬಿಬಿಜೆಪಿ) ಮತ್ತು ಅದರ ಸೈದ್ಧಾಂತಿಕ ಸಂಸ್ಥೆ, ಹಿಂದೂ ಸ್ವಯಂ ಸೇವಕ ಸಂಘ, ಯುಕೆ (ಆರ್ ಎಸ್ ಎಸ್ ಅಂಗ), ಸಹಾ ಟೋರಿಗಳನ್ನು ಬೆಂಬಲಿಸಿದರು. ಇತ್ತೀಚೆಗೆ, ಮೋದಿ 'ವೆಂಬ್ಲಿಗೆ' ಭೇಟಿ ಕೊಟ್ಟಿದ್ದಾಗ, ಜೆರೆಮಿ ಕಾರ್ಬಿನ್ ರ ಗೈರು ಹಾಜರಾತಿ, ಮತ್ತು ಲೇಬರ್ ಪಕ್ಷವು ಸಾಕಷ್ಟು ಹಿಂದುಗಳನ್ನು ತಮ್ಮ ಅಭ್ಯರ್ಥಿ ಗಳನ್ನಾಗಿ ಆಯ್ಕೆ ಮಾಡದಿರುವುದು ಹಾಗೂ ಅದರ ಸಮ್ಮೇಳನದಲ್ಲಿ ಕಾಶ್ಮೀರ ಕುರಿತಂತೆ, ಮೋದಿ ಸರಕಾರದ ವಿರುದ್ದದ ನಿಲುವನ್ನು ತೆಗೆದುಕೊಂಡಿದ್ದು – ಇವೆಲ್ಲಾ ಕಾರಣಗಳು ಸಾಮಾನ್ಯವಾಗಿ ಲೇಬರ್ ಬೆಂಬಲಿಗರಾದ ಭಾರತೀಯ ಮೂಲದವರ ಮತ ಒಡೆಯುವಂತೆ ಆಯಿತು

ಬ್ರಿಟಿಷ್ ರಾಜಕೀಯ ದಲ್ಲಿ ಧಾರ್ಮಿಕ ಅಥವಾ ಬಾಹ್ಯ ರಾಜಕೀಯ ಸಂಘಟನೆಗಳು ನೇರ ಹಸ್ತಕ್ಷೇಪ ನಡೆಸುತ್ತಿರುವುದು ಇದೇ ಮೊದಲು. ಬ್ರಿಟನ್ ನಲ್ಲಿ 80 ವರ್ಷಗಳ ಹಿಂದೆಯೇ ರಚನೆಗೊಂಡ ಜಾತ್ಯಾತೀತ–ಪ್ರಜಾಸತ್ತಾತ್ಮಕ ಸಂಘಟನೆಯಾದ ಭಾರತೀಯ ಕಾರ್ಮಿಕರ ಅಸೋಸಿಯೇಷನ್ (ಐ.ಡಬ್ಲ್ಯೂ.ಎ) ಬ್ರಿಟನ್ ನ ಈ ಚುನಾವಣಾ ಪ್ರಚಾರದಲ್ಲಿ ಮಧ್ಯವೇಶ ಮಾಡಿದೆ. ಅದು, ಲೇಬರ್ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಮೂರು ಬೇಡಿಕೆಗಳ ಸೇರ್ಪಡೆಯನ್ನು ಸ್ವಾಗತಿಸಿದೆ. ಅವುಗಳೆಂದರೆ, ಜಲಿಯನ್ ವಾಲ ಬಾಗ್ ಹತ್ಯಾಕಾಂಡ ಕುರಿತಂತೆ ಕ್ಷಮೆ ಯಾಚನೆ, ಬ್ರಿಟಿಷ್ ವಸಾಹತುಶಾಹಿ ಇತಿಹಾಸದ ಬೋಧನೆ ಮತ್ತು 1984 ರಲ್ಲಿ ಅಮೃತಸರದ ಘಟನೆಯಲ್ಲಿ ಬ್ರಿಟನ್ನಿನ ಪಾತ್ರದ ಬಗ್ಗೆ ತನಿಖೆಯಾಗಬೇಕು – ಇವೇ ಆ ಮೂರು ಬೇಡಿಕೆಗಳು. ವಿಚ್ಛಿದ್ರಕಾರಿ ಹಿಂದುತ್ವದ ಪ್ರವರ್ತಕರಿಗೆ ಮತ್ತು ಅವರ ವರ್ಗಹಿತಾಸಕ್ತಿ ಸಿದ್ಧಾಂತಕ್ಕೆ ಐ.ಡಬ್ಲ್ಯೂ.ಎ ಈ ಪ್ರಚಾರದ ಮೂಲಕ ಸವಾಲು ಹಾಕಿತು. ಈಗ ಹಿಂದುತ್ವದ ಬೆಂಬಲಿಗರಾಗಿರುವ ಅವಕಾಶವಾದಿಗಳು ಲೇಬರ್ ಪಕ್ಷದ ಸದಸ್ಯರಾಗಿ ಹಲವಾರು ವರ್ಷಗಳಿಂದ ಅಪಾರ ಲಾಭ ಪಡೆದಿದ್ದಾರೆ. ಪುರಸಭೆಗಳ ಕೌನ್ಸಿಲರ್ ಗಳಾಗಿ ಆಯ್ಕೆಯಾಗಿದ್ದಾರೆ. ಈ ಮಾನ್ಯತೆ ಯೊಂದಿಗೆ, ರಾಜಕೀಯ ಪ್ರಭಾವ ಹೊಂದಿ, ವಾರ್ಷಿಕವಾಗಿ 15 ರಿಂದ 30 ಲಕ್ಷ ರೂಪಾಯಿಗಳ ಸಂಬಳವನ್ನು ಪಡೆಯುತ್ತಾರೆ. ಐ.ಡಬ್ಲ್ಯೂಎ ಯು, ಕಾಶ್ಮೀರದ ಬಗ್ಗೆ, ಮೋದಿ–ಶಾ ರವರ, ಭಾರತ ವಿಭಜಿಸುವ ಪ್ರಚಾರ–ಪ್ರಕ್ಷೋಬೆಯ ವಿರುದ್ಧ, ಪ್ರಚಾರ ಕೈಗೊಂಡಿದ್ದಲ್ಲದೆ, ಕಾಶ್ಮೀರ ಕುರಿತಂತೆ ವಾಸ್ತವಿಕ ಸತ್ಯಾಂಶಗಳ ಬಗ್ಗೆ ಪ್ರಚಾರ ನಡೆಸಿತು.. ಭಾರತದ ಏಕತೆ ಮತ್ತು ಸಮಗ್ರತೆಯನ್ನು ಹಾಗೂ ಜಾತ್ಯಾತೀತ–ಪ್ರಜಾಸತ್ತಾತ್ಮಕ ಗಣತಂತ್ರವನ್ನು ಐ.ಡಬ್ಲ್ಯೂ.ಎ ಚುನಾವಣಾ ಪ್ರಚಾರದಲ್ಲಿ, ಎತ್ತಿ ತೋರಿಸಿತು.

ಚುನಾವಣಾ ಪ್ರಚಾರದ ಸಮಯದಲ್ಲಿ, ಟೋರಿ ಚುನಾವಣಾ ಯಂತ್ರವು, ಅಮೆರಿಕಾದಲ್ಲಿ ಟ್ರಂಪ್ ಮತ್ತು ಭಾರತದಲ್ಲಿ ಮೋದಿ ತಂತ್ರಗಳಿಂದ ಕಲಿತಂತಿತ್ತು. ಸರಣಿ ಸುಳ್ಳುಗಾರ ಬೋರಿಸ್ ಜಾನ್ಸನ್ ಮೂರು ಪದಗಳ ಚುನಾವಣಾ ಘೋಷಣೆ "ಗೆಟ್ ಬ್ರೆಕ್ಸಿಟ್ ಡನ್" ನ್ನು ಪದೇ ಪದೇ ಪಠಿಸುತ್ತಿದ್ದನು. ಅದು ಟ್ರಂಪ್ ನ "ಮೇಕ್ ಅಮೆರಿಕಾ ಗ್ರೇಟ್ ಎಗ್ಯೇನ್ " ಹಾಗೂ ಭಾರತದಲ್ಲಿ "ಈಸ್ ಬಾರ್ ಮೋದಿ ಸರ್ಕಾರ್ " ಅಥವಾ "ಅಚ್ಛೇ ದಿನ್" ಘೋಷಣೆಗಳನ್ನು ನೆನೆಪಿಸುವಂತಿತ್ತು.

ಇವೆಲ್ಲದರ ಹೊರತಾಗಿಯೂ, ಲೇಬರ್ ಪಕ್ಷವು, ಜನರ ಜೀವನದ ಮೇಲೆ ಪರಿಣಾಮ ಬೀರುವ ನೀತಿಗಳನ್ನು ಚುನಾವಣಾ ಪ್ರಚಾರದ ಚರ್ಚೆಯ ಭಾಗವಾಗಿ ತರುವ ಪ್ರಯತ್ನವನ್ನು ಮಾಡಿತು. ಅದರಲ್ಲಿ, ಪ್ರಮುಖವಾಗಿ ಯುಎಸ್ ಕಂಪನಿಗಳಿಗೆ ಎನ್.ಎಚ್.ಎಸ್. (ಆರೋಗ್ಯ) ಸೇವೆಗಳು ಮತ್ತು ಉತ್ಪನ್ನಗಳ ಮಾರಾಟವನ್ನು ಎತ್ತಿ ತೋರಿಸುವ ವಿವರವಾದ ದಾಖಲೆಗಳು ಇದ್ದವು. ಅದನ್ನು ಟೋರಿಗಳು ನಕಲಿ ಸುದ್ದಿಯೆಂದು ನಿರಾಕರಿಸಿದರು. ಇದರ ಕುರಿತ, ರಹಸ್ಯ ಮಾತುಕತೆಗಳ ಮತ್ತಷ್ಟು ಸುದ್ದಿಗಳನ್ನು ಬಹಿರಂಗ ಪಡಿಸುವ ಪ್ರಸಿದ್ಧ ಜಾನ್ ಪಿಲ್ಗರ್ ಮಾಡಿದ ಸಾಕ್ಷ ಚಿತ್ರವನ್ನು ಪ್ರಸಾರ ಮಾಡುವುದಕ್ಕೆ ನಿಷೇದ ಹೇರಲಾಯಿತು.

ಜೆರೆಮಿ ಕಾರ್ಬಿನ್ ಮತ್ತು ಜಾನ್ ಮೆಕ್‌ಡೊನಾಲ್ಡ್ ಇಬ್ಬರನ್ನು "ಮಾರ್ಕ್ಸಿಸ್ಟ್" ಗಳೆಂದು ಟೋರಿಗಳು ತಮ್ಮ ಹಿಡಿತದಲ್ಲಿ ಇರುವ ಪ್ರಮುಖ ಮಾದ್ಯಮಗಳಿಂದ ದಾಳಿಗೆ ಒಳಪಡಿಸಿದರು. ಇವರಿಬ್ಬರೂ ಬ್ರಿಟನ್ ನನ್ನು ಹಿಂದಕ್ಕೆ ಕೊಂಡೊಯ್ಯಲು ಬಯಸುತ್ತಿದ್ದಾರೆ. ಇವರ ಪ್ರಣಾಳಿಕೆಯಲ್ಲಿ ಇರುವ ಸಾಮಾಜಿಕ ಪ್ರಜಾಪ್ರಭುತ್ವ ನೀತಿಯ ಅಂಶಗಳು, ಆಳುವ ಗಣ್ಯರಿಗೆ ತುಂಬಾ ಆಮೂಲಾಗ್ರ ಮತ್ತು ಕ್ರಾಂತಿಕಾರಿಯಾಗಿ ನಡುಕ ಹುಟ್ಟಿಸಿದವು. ಪ್ರಣಾಳಿಕೆಯ ವಿರುದ್ಧ ಟೋರಿಗಳು ತಮ್ಮ ಪ್ರಚಾರದಲ್ಲಿ ಅಬ್ಬರಿಸಿದರು. ಆದರೆ ಅದರಲ್ಲಿ ಜನಪತ್ರಿಯವಾದ ಕೆಲವು ಅಂಶಗಳನ್ನು ತಮ್ಮ ಪ್ರಣಾಳಿಕೆಗೆ ಸೇರಿಸಿಕೊಂಡರು. ಮಾಧ್ಯಮಗಳು ಇವೆಲ್ಲಕ್ಕೂ ಕುಮ್ಮಕ್ಕು ನೀಡಿದವು.

ಆದರೆ, ಇಲ್ಲಿ ಪ್ರಮುಖ ವಾದದ್ದು ಏನೆಂದರೆ, ಬೋರಿಸ್ ಜಾನ್ಸನ್ ಬಹುಮತ ಪಡೆದಿರಬಹುದು. ಆದರೆ, ಕಾರ್ಮಿಕ ವರ್ಗದ ಮೇಲಿನ ದಾಳಿಗಳನ್ನು ಅವನಿಂದ ಮರೆಮಾಚಿಸಲಾಗದು. ಜನರಿಗೆ ಮನೆ ಇಲ್ಲದಿರುವಿಕೆ, ಹೆಚ್ಚುತ್ತಿರುವ ಮಕ್ಕಳ ಬಡತನ, ನಿರುದ್ಯೋಗ, ಸಾರ್ವಜನಿಕ ಸೇವೆಗಳ ಖಾಸಗೀಕರಣದ ಬೆದರಿಕೆ ಇವುಗಳನ್ನು ಖಂಡಿತ ಜಾನ್ಸನ್ ಮರೆಮಾಚಲು ಸಾಧ್ಯವಿಲ್ಲ. ಇದೀಗ ಬ್ರಿಟನ್ ಹಸಿದ ಮಕ್ಕಳ ದೇಶವಾಗಿದೆ. ಪಿಂಚಣಿ ರಹಿತರ ದೇಶವಾಗಿದೆ. ಇದು ಅಂಗವಿಕಲರನ್ನು ಅಂಚಿಗೆ ತಳ್ಳುತ್ತಿದೆ. ನಿರಾಶ್ರಿತರನ್ನು ನಿಂದಿಸಿ ಬಲಿಪಶು ಮಾಡುತ್ತದೆ. ಇಂತಹ, ಜನರಿಗೆ, ಪ್ರಾಯೋಗಿಕ ಸಹಾಯ ಬೇಕಾಗಿದೆ. ಸಮುದಾಯ ಸಂಘಟನೆ ವಿರೋಧಿ ಲೇಬರ್ ಪಕ್ಷದ ಮೊದಲ ಜವಾಬ್ದಾರಿಯಾಗಿದೆ. ಮತ್ತೆ ಚೇತರಿಸಿಕೊಂಡು ಬಲಿಷ್ಟವಾದ ಎಡಪಂಥೀಯತೆಯ ನಿರ್ಮಾಣಕ್ಕೆ ಅಡಿಪಾಯ ಹಾಕಲು ಅವಕಾಶ ದೊರೆತಿದೆ. ಐ.ಡಬ್ಲ್ಯೂ.ಎ ಉತ್ತಮ ಉಪಸ್ಥಿತಿಯನ್ನು ಹೊಂದಿರುವ ಕ್ಷೇತ್ರಗಳಲ್ಲಿ, ಲೇಬರ್ ಪಕ್ಷವು ಉತ್ತಮ ಯಶಸ್ಸನ್ನು ಸಾಧಿಸಿದೆ. ಆದರೆ ಅದು ಸಾಕಾಗಲಿಲ್ಲ. ಆದಾಗ್ಯೂ, ಭಾರತೀಯ ಕಾರ್ಮಿಕರ ಸಂಘದ ಮೇಲೆ ಜನರ ನಂಬಿಕೆ ಮತ್ತು ಆಲೋಚನೆಗಳನ್ನು ಪುನಃ ಸ್ಥಾಪಿಸಲು ಅವಕಾಶ ಒದಗಿಸಿದೆ. ಈ ಸಂದರ್ಭದಲ್ಲಿ, ಭಾರತೀಯ ವಲಸಿಗರ ಅನೇಕ ಘಟಕಗಳು ಮತ್ತು ಅಭಿವ್ಯಕ್ತಿಗಳಲ್ಲಿ ಏಕತೆಯ ಅನಿವಾರ್ಯತೆಯು ಈ ಚುನಾವಣೆಯ ಪ್ರಮುಖ ಸಂದೇಶವಾಗಿದೆ.

⇨⇨⇨ ಮಹಾಸುಳ್ಳು 10 : ಪ್ರತಿಭಟನಾಕಾರರ ಮೇಲೆ ಬಲಪ್ರಯೋಗ ಮಾಡಲಾಗಿಲ್ಲ. ವ್ಯಾಪಕ ಪ್ರತಿಭಟನೆ ನಡೆದಿರುವ ದೆಹಲಿ, ಯುಪಿ ಮತ್ತು ಇತರ ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಪೋಲಿಸರು ಗೋಲಿಬಾರು ಮಾಡಿಲ್ಲ.

ಸತ್ಯ ಸಂಗತಿ : ಬಹುಪಾಲು ಭಾರೀ ಪ್ರತಿಭಟನಾ ಪ್ರದರ್ಶನಗಳು ಶಾಂತಿಯುತವಾಗಿ ನಡೆದಿವೆ. ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಮಾತ್ರ ಪೋಲಿಸರದಮನ ಕ್ರಮಗಳಿಂದ ಕೆಲವು ಹಿಂಸಾಕೃತ್ಯಗಳು ಜರುಗಿವೆ. ಜಾಮಿಯಾ ಮಿಲಿಯ, ಅಲಿಘರ್, ದೆಹಲಿ ವಿವಿ ಗಳಲ್ಲಿ ಪೋಲಿಸರ ದೌರ್ಜನ್ಯಗಳು ಮುಗಿಲು ಮುಟ್ಟಿವೆ. ಯು.ಪಿ. ಒಂದೇ ರಾಜ್ಯದಲ್ಲಿ ಈವರೆಗೆ 21 ಜನರ ಗೋಲಿಬಾರಿನಲ್ಲಿ ಸತ್ತಿದ್ದಾರೆ. ದಿನೇ ಈ ಸಂಖ್ಯೆ ಹೆಚ್ಚುತ್ತಿದೆ. ಆದರೆ ಪೋಲಿಸ್ ಗೋಲಿಬಾರು ಮಾಡಿರುವುದನ್ನೇ ನಿರಾಕರಿಸಿದ್ದಾರೆ. ಪೋಲಿಸರು ಪ್ರತಿಭನಾಕಾರರು ಮತ್ತು ಅಮಾಯಕ ನಾಗರಿಕರ ಮೇಲೆ ಗೋಲಿಬಾರು ಮಾಡಿರುವುದು, ಬೇಕಾಬಿಟ್ಟಿ ದೌರ್ಜನ್ಯಗಳನ್ನು ಎಸಗಿರುವುದು, ತಾವೇ ವಿಧ್ವಂಸಕ ಕೃತ್ಯಗಳಲಿ ತೊಡಗಿರುವುದು – ದಿನೇ ಈ ಬಗ್ಗೆ ವಿಡಿಯೋ ಪುರಾವೆಗಳು ಹೊರ ಬರುತ್ತಿವೆ. ಆಸ್ಸಾಂನಲ್ಲಿ 5, ಕರ್ನಾಟಕದಲ್ಲಿ ಇಬ್ಬರು ಗೋಲಿಬಾರಿನಲ್ಲಿ ಸತ್ತಿದ್ದಾರೆ. ಯುಪಿ, ಕರ್ನಾಟಕ ಮುಂತಾದ ರಾಜ್ಯಗಳಲ್ಲಿ ರಾಜ್ಯದಾದ್ಯಂತ ಪ್ರತಿಭಟನೆಗಳನ್ನು ಕಲಮು 144 ಹೇರುವ ಮೂಲಕ ನಿಷೇಧಿಸಿದ್ದು ಮತ್ತು ಪ್ರತಿಭಟನಾಕಾರರನ್ನು ಉದ್ರೇಕಿಸಿದ್ದು ಈಗ ನಡೆದಿರುವ ಸೀಮಿತ ಹಿಂಸಾಚಾರಕ್ಕೆ ಕಾರಣ.

JANASHAKTHI KANNADA VARA PATRIKE DECEMBER 30, 2019 - JANUARY 5, 2020 Price: Rs. 10/- Date of Publication: 27 DECEMBER 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಹೊಸನಗರದಲ್ಲಿ ಮೂರನೆಯ ರಾಜ್ಯ ಸಮ್ಮೇಳನವನ್ನು





ಆದಿವಾಸಿ ಸಮ್ಮೇಳನದ ಸಮಾರೋಪ ಸಮಾರಂಭ



ಸಮ್ಮೇಳನದ ಸಾಂಸ್ಕೃತಿಕ ಸಮ್ಮೇಳನದಲ್ಲಿ ಹಿರಿಯ ಕಲಾವಿದ ಎಂ ಎಲ್ಲಪ್ಪ ನಣಬೂರು ಬಲಿ ಚಕ್ರವರ್ತಿ ಪಾತ್ರದಲ್ಲಿ

ಸಮಾರೋಪದಲ್ಲಿ ಮಾಜಿ ಸಭಾದ್ಯಕ್ಷರು, ಮಾಜಿ ಸಚಿವರೂ ಆದ ಕಾಗೋಡು ತಿಮ್ಮಪ್ಪನವರು ಮುಖ್ಯ ಅತಿಥಿಗಳಾಗಿ ಮಾತನಾಡುತ್ತಿರುವುದು. ವೇದೊಕೆಯಲ್ಲಿ ಕಾಂ. ಜಿತೇಂದ್ರ ಚೌಧುರಿ, ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಪೂಜಿಸಿ ಬಯ್ಯಾರೆಡ್ಡಿ ಅವರು ಹಿರಿಯ ಸಂಶೋಧಕ ಡಾಕ್ಟರ್ ನಗರ ಹುಬ್ಬಳ್ಳಿ, ಎಸ್.ವೈ. ಗುರುಶಾಂತ್, ವೈ.ಕೆ. ಗಣೇಶ್ ಮುಂತಾದವರು.



ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಮೂರನೆಯ ರಾಜ್ಯ ಸಮ್ಮೇಳನವನ್ನು ಹೊಸನಗರದಲ್ಲಿ 2019 ಡಿಸೆಂಬರ್ 21 ಮತ್ತು 22ರಂದು ಉದ್ಘಾಟಿಸಿದ ಸಂದರ್ಭ ಹಿರಿಯ ಕಲಾವಿದ ಶ್ರೀ ಎಲ್ಲಪ್ಪ ಎನ್ನಬಹುದು ಅವರಿಂದ ಸಮಾರಂಭದಲ್ಲಿ ದಿಕ್ಸೂಚಿ ಭಾಷಣ ಮಾಡಿದವರು ಶ್ರೀ ಜಿತೇಂದ್ರ ಚೌಧರಿಯವರು ಮುಖ್ಯ ಅತಿಥಿಗಳು ಶ್ರೀ ನಿತ್ಯಾನಂದ ಸ್ವಾಮಿ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದವರು ಸ್ವಾ.ಸ.ಯ ಗೌರವಾದ್ಯಕ್ಷರಾದ ಹಿರಿಯ ರಂಗಕರ್ಮಿ ಶ್ರೀ ಪ್ರಸನ್ನ ಹೆಗ್ಗೋಡು ಅವರು ವೇದಿಕೆಯಲ್ಲಿ ಸ್ವಾಗತ ಸಮಿತಿ ಕಾರ್ಯಾಧ್ಯಕ್ಷರಾದ ಎಸ್ ಬಿ ಮಂಜಪ್ಪನವರು, ಆದಿವಾಸಿ ಸಂಘಟನೆಯ ರಾಜ್ಯ ಸಂಚಾಲಕರಾದ ವೈ. ಕೆ. ಗಣೇಶ್, ಸಹ ಸಂಚಾಲಕರಾದ ಎಸ್.ವೈ ಗುರುಶಾಂತ್ ಮುಂತಾದವರು.

ಗ್ರಾಮ ಪಂಚಾಯತಿ ನೌಕರರ ಸಂಘದಿಂದ ಜಿಲ್ಲಾ ಪಂಚಾಯತ್ ಕಛೇರಿ ಎದುರು ಪ್ರತಿಭಟನೆ



ಕಲಬುರಗಿ:

23 ಡಿಸೆಂಬರ್ 2019 ರಂದು ಕರ್ನಾಟಕ ರಾಜ್ಯ ಗ್ರಾಮ ನೌಕರರ ಸಂಘ (ಸಿಐಟಿಯು ಸಂಯೋಜಿತ) ಜಿಲ್ಲಾ ಸಮಿತಿ ಕಲಬುರಗಿ ವತಿಯಿಂದ ಪಂಚಾಯತ ಕಛೇರಿ ಎದುರು ಪ್ರತಿಭಟನೆ ನಡೆಸಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಪಿ. ರಾಜಾ ರವರಿಗೆ ಮನವಿಯನ್ನು ಸಲ್ಲಿಸಿತು. ನಮ್ಮ ಬೇಡಿಕೆಗಳಿಗೆ ಸ್ಪಂದಿಸಿ 1 ತಿಂಗಳಲ್ಲಿ ಜಿಲ್ಲಾ ಮಟ್ಟದಲ್ಲಿರುವ ಬೇಡಿಕೆಗಳು ಈಡೇರಿಸುವ ಭರವಸೆ ನೀಡಿ ರಾಜ್ಯ ಮಟ್ಟದ ಬೇಡಿಕೆಗಳನ್ನು ಸರಕಾರಕ್ಕೆ ವರದಿ ಸಲ್ಲಿಸುವ ಬಗ್ಗೆ ಭರವಸೆ ನೀಡಿದ ನಂತರ ಹೋರಾಟ ಹಿಂಪಡೆಯಲಾಯಿತು.

ಪ್ರತಿಭಟನೆಯಲ್ಲಿ ಗ್ರಾಮ ಪಂಚಾಯತ ನೌಕರರ ಸಂಘದ ರಾಜ್ಯ ಅಧ್ಯಕ್ಷರಾದ ಕಾಮ್ರೇಡ ಮಾರುತಿ ಮಾನಪಡೆ, ರಾಜ್ಯ ಸಹ ಕಾರ್ಯದರ್ಶಿ ಶಿವಾನಂದ ಕವಲಗಾ ಹಾಗೂ ಪಂಡಿತ ಹೊಳಕುಂದಾ, ಮಲ್ಲಣ್ಣ ಹೊನಗುಂಟಾ, ಜೈಭೀಮ ನಂದೀಕೂರ, ದತ್ತು ಕಾಳಗಿ, ಸುರೇಶ ದೊಡಮನಿ, ಚಂದ್ರಕಲಾ ಮಠಪತಿ, ಮತ್ತು 700 ಕ್ಕೂ ಹೆಚ್ಚು ಸಿಬ್ಬಂದಿಗಳು ಹೋರಾಟದಲ್ಲಿ ಭಾಗವಹಿಸಿದ್ದರು.

ರಾಯಚೂರ್:

ರಾಯಚೂರು ಜಿಲ್ಲೆಯ ಗ್ರಾಮ ಪಂಚಾಯತಿ ನೌಕರರು ಜಿಲ್ಲಾ ಪಂಚಾಯತಿ ಮುಂದೆ ಹೊರಟವನ್ನು ನಡೆಸಲಾಯಿತು. ಪಂಚಾಯತಿ ನೌಕರರ ಬೇಡಿಕೆಯನ್ನು ಈಡೇರಿಸಲು ದರಣಿಯನ್ನು ನಡೆಸಲಾಯಿತು. 23 ಡಿಸೆಂಬರ್ 2019 ರಂದು ಅರ್.ಎಸ್. ಬಸವರಾಜ ಶರಣಬಸವ, ಗಿರೀಯಪ್ಪ, ಮಲ್ಲಿಕಾರ್ಜುನ, ಮಹಾದೇವಪ್ಪ, ಅಂಬರೀಶ್, ಇತರರು ಭಾಗವಹಿಸಿದ್ದರು.

ಬೇಡಿಕೆಗಳು

1) ನೌಕರರ ಕನಿಷ್ಠ ವೇತನ ಪಾವತಿಯಲ್ಲಿ ಆಗುತ್ತಿರುವ ತಾರತಮ್ಯದಿಂದ ಸರಿಯಾಗಿ ವೇತನ ಪಾವತಿ ಮಾಡುತ್ತಿಲ್ಲ. ಸರಕಾರದ ಆದೇಶದಂತೆ ಕನಿಷ್ಠ ವೇತನ ಪಾವತಿಸಲು ಜಿಲ್ಲಾ ಪಂಚಾಯತ ವಿಫಲವಾಗಿದೆ. ಎಲ್ಲಾ ನೌಕರರಿಗೆ ಕನಿಷ್ಠ ವೇತನ ಪಾವತಿಸಬೇಕು. ಕನಿಷ್ಠ ವೇತನ ಪಾವತಿ ಮಾಡದ PDO ಗಳ ವಿರುದ್ದ ಕ್ರಮ ಕೈಗೊಳ್ಳಲು ವಿನಂತಿ ಮಾಡಲಾಯಿತು.
2) 14 ನೇ ಹಣಕಾಸು ಯೋಜನೆಯಲ್ಲಿ 10% ಕರವಸೂಲಿ ಯಲ್ಲಿ 40% ವೇತನ ಕೊಡುವ ಬಗ್ಗೆ ಸರಕಾರದ ಆದೇಶ ಇದ್ದರೂ ಕೂಡ ಜಿಲ್ಲೆಯಲ್ಲಿ 1 ಪಂಚಾಯತ ನಲ್ಲಿಯೂ ಪಾವತಿಸಿಲ್ಲ. 14 ನೇ ಹಣಕಾಸಿನಲ್ಲಿ ಮತ್ತು ಕರವಸೂಲಿ ಯಲ್ಲಿ 40% ವೇತನ ಪಾವತಿ ಮಾಡಬೇಕು.
3) ನೌಕರರ ಅನುಮೋದನೆ ಮಾಡಲು ಸರಕಾರ 23-07-2019 ರಂದು ಆದೇಶ ಮಾಡಿ 4 ತಿಂಗಳಾದರೂ 1 ಅನುಮೋದನೆ ಕೂಡ ಜಿಲ್ಲಾ ಪಂಚಾಯತ ಮಾಡಿಲ್ಲ. ಶೀಘ್ರದಲ್ಲೇ ಅನುಮೋದನೆ ನೀಡಬೇಕು.
4) EFMS ನಲ್ಲಿ ಅಳವಡಿಸಿದ ನೌಕರರ ಮಾಹಿತಿಗೆ ಕಲಬುರಗಿ ತಾಲ್ಲೂಕು ಹೊರತುಪಡಿಸಿ ಇನ್ನುಳಿದ ಯಾವದೇ ತಾಲ್ಲೂಕಿನ ನೌಕರರಿಗೆ EFMS ಅನುಮೋದನೆ ನೀಡುತ್ತಿಲ್ಲ ಇದರಿಂದ ನೌಕರರಿಗೆ ಸರಕಾರದಿಂದ ವೇತನ ಬಿಡುಗಡೆ ಆಗುತ್ತಿಲ್ಲ.
5) ಬಿಲ್ ಕಲೆಕ್ಟರ್ ಹುದ್ದೆಯಿಂದ ಕಾರ್ಯದರ್ಶಿ ಮತ್ತು ಲೆಕ್ಕ ಸಹಾಯಕ ಹುದ್ದೆಗೆ ಬಡ್ತಿ ಆಗಿ ಖಾಲಿ ಆಗಿರುವ ಬಿಲ್ ಕಲೆಕ್ಟರ್ ಹುದ್ದೆಗೆ 5 ವರ್ಷ ಸೇವೆ ಸಲ್ಲಿಸಿರುವ ಜೇಷ್ಠತಾ ಆಧಾರದ ಮೇಲೆ ನೌಕರರಿಗೆ ಬಡ್ತಿ ಕೊಡುವ ಆದೇಶ ಇದ್ದರೂ ಗ್ರಾಮ ಪಂಚಾಯತಿ ಗಳಲ್ಲಿ ಜೇಷ್ಠತೆ ಪರಿಗಣಿಸದೇ ಅಕ್ರಮವಾಗಿ ನೇಮಕಾತಿ ಮಾಡಿಕೊಳ್ಳಲು ಮುಂದಾಗಿದ್ದಾರೆ. ಇದರಿಂದ ಸರಕಾರದ ಆದೇಶ ಜಾರಿ ಆಗುತ್ತಿಲ್ಲ ಮತ್ತು ಕಲಬುರಗಿ ಜಿಲ್ಲಾ ಪಂಚಾಯತ ದಿಂದ ಆದೇಶ ಪಾಲನೆ ಪಾಡಿಸಲು ವಿಫಲವಾಗಿದೆ. ಸರಕಾರದ ಆದೇಶ ಉಲ್ಲಂಘನೆ ಮಾಡುತ್ತಿರುವ PDO ಗಳ ಮೇಲೆ ಕ್ರಮ ಕೈಗೊಳ್ಳಬೇಕು.
6) 2019 ನೇ ಸಾಲಿನ ಬಿಲ್ ಕಲೆಕ್ಟರ್/ಗುಮಾಸ್ತ/ಕ್ಲರ್ಕ್ ಕಂ ಕಂಪ್ಯೂಟರ್ ಆಪರೇಟರ ಗಳ ರ ಜೇಷ್ಠತಾ ಪಟ್ಟಿ ತಯಾರಿಸಬೇಕು ಮತ್ತು ಕಂಪ್ಯೂಟರ್ ಆಪರೇಟರ ಗಳ ಹಿಂದಿನ ಸೇವೆ ಪರಿಗಣಿಸಬೇಕು.
7) ಈಗಾಗಲೇ ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಗ್ರೇಡ-2 ಕಾರ್ಯದರ್ಶಿಯಿಂದ ಮತ್ತು ಲೆಕ್ಕ ಸಹಾಯಕ ರಿಂದ ಗ್ರೇಡ-1 ಮತ್ತು ಗ್ರೇಡ 1 ರಿಂದ PDO ಹುದ್ದೆಗೆ ಬಡ್ತಿ ಮಾಡುತ್ತಿಲ್ಲ ಇದರಿಂದ ಖಾಲಿ ಆಗುವ ಹುದ್ದೆಗೆ ಬಡ್ತಿ ಅವಕಾಶ ಸಿಗುತ್ತಿಲ್ಲ.



JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**